ಪ್ರಚೋದನೆ

ಲಂಕೇಶ್

29 ಅಕ್ಟೋಬರ್ 2014 ಪುಟ 20 ರೂ. 15/-




ಕುರುಕ್ಷೇತ್ರ ಯುದ್ಧ ನಿಜವೇ?




...ಚ್ಚೇಗೌಡನ


...ಚೇಲಾಗಳ ...ಭೂಸ್ವಾಹ

ಕವಳನ ಪಟ್ಟಕ್ಕೆ ತಮ್ಮ ಮಣಿ





ಮಕ್ಕಳ ಹಕ್ಕಿಗೆ ನೊಬೆಲ್




...ಮಂಡ್ಯ ಮತ್ತೆ ...ಹರಿದ ...ತ್ತರು!

ಬೀಳಗಿ ಶಾಸಕನ ಪರಾಕು ಭ್ರಷ್ಟರ ಧಿಮಾಕು

ಹೊಳಲ್ಕೆರೆ ಸೆಕ್ಸ್ ಸ್ಕ್ಯಾಂಡಲ್ ಮತ್ತು ಮರ್ಡರ್ ಮಿಸ್ಟರಿ

ಹೋರಾಟ, ಹೋರಾಟ! ಯಾತಕ್ಕಾಗಿ ಹೋರಾಟ

ಅಂಚಿನಿಂದ....



ಡಾ.ವಾಸು ಎಚ್.ವಿ.


ಈ ಘೋಷಣೆ ಅದೆಷ್ಟು ಪುರಾತನ ಅಂತ ಗೊತ್ತಿಲ್ಲ. ಇದರ ಜೊತೆಗೆ 'ಬೇಕೇ ಬೇಕು ನ್ಯಾಯ ಬೇಕು' ಎನ್ನುವ ಇನ್ನೊಂದು ಘೋಷಣೆಯೂ ಸಾಕಷ್ಟು ಕಾಲದಿಂದ ಇದೆ. 'ಕಾವೇರಿ ಹೋರಾಟ' ಎಂದು ಕರೆಯಲ್ಪಡುವ ಇನ್ನೊಂದು ಚಳವಳಿಯಲ್ಲಿ ಸಾಕಷ್ಟು ಚಾಲ್ತಿಯಲ್ಲಿರುವ ಮತ್ತೊಂದು ಘೋಷಣೆ 'ಅಯ್ಯಯ್ಯೋ ಅನ್ಯಾಯ', ಇವೆಲ್ಲಾ ಘೋಷಣೆಗಳನ್ನು ಕೂಗುತ್ತಿರುವ ರೀತಿ ಹಲವು ಸಾರಿ ಯಾರು ಯಾತಕ್ಕಾಗಿ ಕೂಗುತ್ತಿದ್ದಾರೆಂಬುದೇ ಗೊತ್ತಾಗದ ಸ್ವರೂಪದಲ್ಲಿರುತ್ತವೆ. ಅದರಲ್ಲಿ ಸಿಟ್ಟಾಗಲೀ, ಆಕ್ರೋಶವಾಗಲೀ ಅಥವಾ ದೈನ್ಯವಾಗಲೀ ಏನೂ ಕಾಣದಂತಹ ಅತ್ಯಂತ ವಿಚಿತ್ರ ಯಾಂತ್ರಿಕ ಧ್ವನಿ ಅಡಕವಾಗಿರುತ್ತದೆ. ಇವೆಲ್ಲವೂ ಧ್ವನಿಯ ಸ್ವರೂಪದ ಮೇಲಷ್ಟೇ ತೀರ್ಮಾನವಾಗುವುದಿಲ್ಲ ಎಂಬುದೇನೋ ನಿಜ. ಕೂಗುವ ಘೋಷಣೆ ಒಂದೇ ಆದರೂ, ಸಂದರ್ಭ ಏನು ಎಂಬುದರ ಮೇಲೆ ಅದರ ಅರ್ಥ ಹಾಗೂ ತೀವ್ರತೆ ಬದಲಾಗುತ್ತವೆ. ಆದರೆ ಒಂದಂತೂ ನಿಜ. ಇಂದು ನಡೆಯುತ್ತಿರುವ ಹೋರಾಟದ ಸ್ವರೂಪ (form) ತನ್ನ ಸಾಮಾಜಿಕ ಪರಿಣಾಮವನ್ನು ಸಾಕಷ್ಟು ಕಳೆದುಕೊಂಡಿವೆ.

ಅಂದರೆ, ಬೀದಿಯಲ್ಲಿ ಐವತ್ತೋ, ನೂರೋ ಜನ ಪ್ಲಕಾರ್ಡ್‌ಗಳನ್ನು ಹಿಡಿದು ಘೋಷಣೆ ಹಾಕುತ್ತಿದ್ದರೆ ಪಕ್ಕದಲ್ಲೇ ಸಾವಿರಾರು ಜನ ಅದೇನು ಎಂದು ಕುತೂಹಲದಿಂದ ನಿಂತು ನೋಡದೆ ಸಾಗುತ್ತಿರುತ್ತಾರೆ. ಕೆಲವು ಜಾಗಗಳಲ್ಲಿಯಂತೂ ಕನಿಷ್ಠ ತಿರುಗಿ ಕೂಡಾ ನೋಡುವುದಿಲ್ಲ. ಸಮಸ್ಯೆ ಪ್ರತಿಭಟಿಸುತ್ತಿರುವವರಲ್ಲಿದೆಯೋ, ತಿರುಗಿ ನೋಡದವರಲ್ಲಿದೆಯೋ ಅಥವಾ ನಮ್ಮ ಒಟ್ಟು ಸಂದರ್ಭದಲ್ಲಿದೆಯೋ ವಿಶ್ಲೇಷಣೆಗೆ ಒಳಪಡಿಸುವ ಅಗತ್ಯವಿದೆ. ಈ ರೀತಿಯ ನಮ್ಮ ಪೂರ್ವಜನ್ಮದ ಕರ್ತವ್ಯವೆಂಬಂತೆ ಆ ನಿರ್ದಿಷ್ಟ ಜಾಗಕ್ಕೆ, ನಿರ್ದಿಷ್ಟ ಸಮಯಕ್ಕೆ ಬಂದು, ಎಲ್ಲವನ್ನೂ ನಿರ್ದಿಷ್ಟ ಕ್ರಮದಲ್ಲೇ ಮಾಡಿ ಹೊರಡುವ ಕಾಯಕವೆಂಬಂತೆಯೂ ಆಗಿದೆ. ಇದಕ್ಕೆ ಜಾಗದ ವ್ಯವಸ್ಥೆಯನ್ನು ಸರ್ಕಾರವೇ ಮಾಡಿಕೊಡುತ್ತದೆ. ಪೊಲೀಸರೂ ಸಹಕರಿಸುತ್ತಾರೆ. ಹಾಗೆಯೇ ಆ ಜಾಗಕ್ಕೆ ಬರುವ ಪತ್ರಿಕೆ ಹಾಗೂ ನ್ಯೂಸ್ ಚಾನೆಲ್‌ಗಳ ಛಾಯಾಗ್ರಾಹಕರೂ ಸಹಕರಿಸುತ್ತಾರೆ! ಅವರು ಬಯಸುವ ರೀತಿಯಲ್ಲಿ ಪ್ರತಿಭಟನೆಕಾರರನ್ನು ಕುಣಿಸುತ್ತಾರೆ. ಕೈ ಎತ್ತಿ, ಮುಖ ಹೀಗೆ ಮಾಡಿ, ಇಲ್ಲಿ ಬಂದು ಕೂತುಕೊಳ್ಳಿ ಇತ್ಯಾದಿ ಎಲ್ಲವನ್ನೂ ಮಾಡಿಸಿ ಫೋಟೋ ತೆಗೆದುಕೊಂಡು ಹೋಗುತ್ತಾರೆ. ಹೆಚ್ಚು ಕಡಿಮೆ ಬರಬೇಕಾದ ಎಲ್ಲಾ ಪತ್ರಿಕೆ/ಚಾನೆಲ್‌ನವರು ಬಂದುಹೋದರು ಎಂದರೆ, ಅಲ್ಲಿಗೆ ಪ್ರತಿಭಟನೆ ಮುಗಿಯಿತೆಂದೇ ಅರ್ಥ!!


ಈ ಚೌಕಟ್ಟನ್ನು ದಾಟುವ ಒಂದು ರೀತಿಯ ಪ್ರತಿಭಟನಾ ಮಾದರಿಯನ್ನು ವಾಟಾಳ್ ಮಾದರಿ ಎಂದು ಕರೆಯಬಹುದೇನೋ? ಅದು ಪತ್ರಿಕೆಗಳಿಗೆ ಅಗತ್ಯವಿರುವ ವ್ಯಂಗ್ಯ ಚಿತ್ರದ ಬದಲಿಗೆ ನೀಡುವ ಪ್ರತಿಭಟನೆಯ ಫೋಟೋವನ್ನು ಒದಗಿಸಲಾಗುತ್ತದೆ. ಅಲ್ಲಿ ಕೆಲವೊಮ್ಮೆ ವ್ಯವಸ್ಥೆಯ ಬಗ್ಗೆ ವ್ಯಂಗ್ಯವಿರುತ್ತದೆ. ಆದರೆ ಸಿಟ್ಟೇನೂ ಕಾಣುವುದಿಲ್ಲ, ಎಲ್ಲವೂ ಯಾಂತ್ರಿಕ. ಪೊಲೀಸರು ಮತ್ತು ಛಾಯಾ ಕೊಂದವನ ಮೇಲೆ ಕ್ರಮ ಜರುಗಿಸಲಿಲ್ಲ. ಇದು ಒಂದು ಆಕಸ್ಮಾತ್ತಾಗಿ ನಡೆದ ಘಟನೆಯಾಗಿರಲಿಲ್ಲ. ಪದೇ ಪದೇ ಇಂತಹ ಘಟನೆಗಳು ಅಮೆರಿಕದ ಹಲವು ಪ್ರಾಂತಗಳಲ್ಲಿ ನಡೆಯುತ್ತಿದ್ದು, ಕಪ್ಪು ವರ್ಣೀಯರು ಪೊಲೀಸರಿಂದ ಹಲ್ಲೆಗೊಳಗಾಗುತ್ತಿದ್ದಾರೆ; ಕೊಲೆಗೀಡಾಗುತ್ತಿದ್ದಾರೆ. ಅಧ್ಯಯನವೊಂದರ ಪ್ರಕಾರ ಪ್ರತಿ 28 ಗಂಟೆಗಳಲ್ಲಿ ಒಬ್ಬ ಕಪ್ಪು ವರ್ಣೀಯ ಪೊಲೀಸ್ ಅಥವಾ ಸೆಕ್ಯುರಿಟಿ ಗಾರ್ಡ್‌ಗಳಿಂದ ಕೊಲೆಯಾಗುತ್ತಿದ್ದಾನೆ. ಇವೆಲ್ಲವೂ ನಡೆಯುತ್ತಿರುವ ಅರೆ ಕಪ್ಪು ವರ್ಣೀಯ ಆ ದೇಶದ ಅಧ್ಯಕ್ಷನಾಗಿರುವ ಅವಧಿಯಲ್ಲಿ! ಅಂತಹ ಎಲ್ಲಾ ಹತ್ಯೆಗಳ ವಿರುದ್ಧವೂ ಪ್ರತಿಭಟನೆಗಳು ನಡೆಯುತ್ತವೆ. ದೊಡ್ಡ ಸುದ್ದಿಯಾಗುವುದಿಲ್ಲ. ಬ್ರೌನ್ ಹತ್ಯೆಯನ್ನು ವಿರೋಧಿಸಿ ಫರ್ಗ್ಯುಸನ್ ಮತ್ತು ಸೆಂಟ್ ಲೂಯಿಯಲ್ಲಿ ಪ್ರತಿಭಟನೆಗಳು ಭುಗಿಲೆದ್ದವು. ಪ್ರತಿನಿತ್ಯ ನಡೆದ ಈ ಪ್ರತಿಭಟನೆಗಳನ್ನು ಕವರ್ ಮಾಡಲು ನ್ಯೂಸ್ ಕ್ಯಾಮೆರಾಗಳು ಸಾಲುಗಟ್ಟಿ ನಿಲ್ಲುತ್ತಿದ್ದವು. ಆದರೆ ಸುದ್ದಿ ಪ್ರಕಟಣೆ ಮಾತ್ರ ಆಗುತ್ತಿರಲಿಲ್ಲ.

ಇದೇ ಸಂದರ್ಭದಲ್ಲಿ ಇನ್ನೊಂದು ಪುರಾತನ ಅನುಭವವನ್ನೂ ಹೇಳಬೇಕು. 2000ರಲ್ಲಿ ಸ್ಪೇನ್‌ನ ಒಬ್ಬ ರಾಜಕೀಯ ಕಾರ್ಯಕರ್ತ ಪೀಪಲ್ಸ್ ಗ್ಲೋಬಲ್ ಆಕ್ಷನ್‌ನ ಸೆರ್ಗೆಯ್ ಹೆರ್ನಾಂಡಿಸ್ ಎಂಬುವರು ಬೆಂಗಳೂರಿಗೆ ಹಾಗೂ ರಬ್ಬರ್ ಬುಲೆಟ್‌ಗಳ ಬದಲಿಗೆ ನಿ... ಬುಲೆಟ್‌ಗಳನ್ನು ಎದುರಿಸಬೇಕಾಗುತ್ತಿತ್ತು. ಆದರೆ ... ರೀತಿಯ ಪ್ರಜಾತಂತ್ರ ಇರುವ ಪಶ್ಚಿಮದ ದೇ... ಅದು ಅಷ್ಟು ಸುಲಭ ಅಲ್ಲ.


ಕಪ್ಪು ವರ್ಣೀಯರನ್ನು ಕೊಲ್ಲುವುದು ಸುಲಭವಾಗಿದೆ. ಅದನ್ನು ತಡೆದುಕೊಂಡಿದ್ದ ಫರ... ಎಂಬ 22,000 ಜನಸಂಖ್ಯೆಯ ಪುಟ್ಟ ಪಟ್ಟಣದ ... ಈ ಬಾರಿ ಬೀದಿಗಿಳಿದರು. ಯಥಾಪ್ರಕಾರ ಮಾಧ್ಯಮಗಳಿಗೆ ಅದು 2 ತಿಂಗಳು ಸುದ್ದಿಯು ಅನ್ನಿಸಲಿಲ್ಲ. ಸಾಮಾಜಿಕ ಜಾಲತಾಣಗಳು ಹಾಗೂ ನೇರ ಕಾರ್ಯಾಚರಣೆಯಿಂದ ಸೆಂಟ್ ಲೂಯಿ... ಪ್ರತಿಭಟನೆಗಳು ಹಬ್ಬಿಕೊಂಡವು. 'ಫರ್ಗ್ಯುಸನ್ ಅಕ್ಟೋ... ಎಂದು ಕರೆಯಲಾದ ನಾಲ್ಕು ದಿನಗಳ ಪ್ರತಿ... ಸರಣಿಯೂ ಯಶಸ್ವಿಯಾಯಿತು. ಆದರೂ ಅದು ... ಜನರ ಗಮನ ಸೆಳೆಯಲಿಲ್ಲ. ಅಂದರೆ ಆ ರೀತಿ... ಮಾಡಲು ಮಾಧ್ಯಮಗಳಿಗೆ ಇಷ್ಟವಿರಲಿಲ್ಲ. ಪ್ರತಿಭ... ಎಷ್ಟರಮಟ್ಟಿಗೆ ಹೆಚ್ಚಾದುವೆಂದರೆ ಮಿಲಿಟರಿಯನ್ನು ... ನಿಯೋಜಿಸಿತು. ಮಾಧ್ಯಮಗಳು ಸುದ್ದಿ ಮಾಡಲೇ... ವಾತಾವರಣ ಸೃಷ್ಟಿಯಾಗಿದೆ. ಈಗ ಹಾ... ಮಾಧ್ಯಮದವರನ್ನೂ ಬಿಡದೇ ಪೊಲೀಸರು ಬಡಿಯು...



ಫರ್ಗ್ಯುಸನ್ ಪ್ರತಿಭಟನೆ.....



ಮೈಕಲ್ ಬ್ರೌನಾ ತಂದೆ ಮತ್ತು ತಾಯಿ.....



1999ರ WTO ವಿರುದ್ಧ ಸಿಟಲ್ ಪ್ರತಿಭಟನೆ ಚಿತ್ರಗಳು.....

ಹಲವು ಜಾಗೆಗಳು ಕರ್ನಾಟಕದಲ್ಲಿವೆ. ಬೆಂಗಳೂರಿನಲ್ಲಿ ಹತ್ತಾರು ಜಾಗಗಳಿದ್ದವು. ಈಗ ಅದು ಬಹುತೇಕ ಟೌನ್‌ಹಾಲ್ ಅಥವಾ ಫ್ರೀಡಂ ಪಾರ್ಕ್ ಆಗಿದೆ. ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿ ಕಚೇರಿಗಳು ಮತ್ತು ತಾಲೂಕು ಕೇಂದ್ರಗಳಲ್ಲಿ ತಾಲೂಕು ಕಚೇರಿಗಳ ಮುಂದೆ ಖಾಯಂ ಪ್ರತಿಭಟನೆಗಳು ಇದ್ದೇ ಇರುತ್ತವೆ. ಮೈಸೂರಿನಲ್ಲಿ ಹಿಂದೆ ಕೆ.ಆರ್ ವೃತ್ತದಲ್ಲಿ ನಡೆಯುತ್ತಿತ್ತು, ಅಲ್ಲಿ ನಿಷೇಧವಾದ ಮೇಲೆ ಈಗ ಗಾಂಧಿ ಸ್ಕ್ವೇರ್‌ನಲ್ಲಿ ನಡೆಯುತ್ತಿದ್ದಂತಿದೆ. ಉಡುಪಿಯಲ್ಲಿ ಸರ್ವೀಸ್ ಬಸ್ ಸ್ಟ್ಯಾಂಡ್‌ನಲ್ಲಿ, ಶಿವಮೊಗ್ಗದಲ್ಲಿ ಗೋಪಿ ವೃತ್ತ ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿಯ ಮುಂದಿನ ಸರ್ಕಲ್‌ನಲ್ಲಿ, ಮಂಡ್ಯದಲ್ಲಿ ಸಂಜಯ ಸರ್ಕಲ್, ಕುಂದಾಪುರದಲ್ಲಿ ಶಾಸ್ತ್ರಿ ಸರ್ಕಲ್ ಹೀಗೆ ಹಲವು ನಿರ್ದಿಷ್ಟ ಜಾಗಗಳಿವೆ. ಧಾರವಾಡದಲ್ಲಿ ಸಾಮಾನ್ಯವಾಗಿ ಕಲಾಭವನದಿಂದ ಮೆರವಣಿಗೆಗಳು ಹೊರಡುತ್ತವೆ.

ಇಲ್ಲೆಲ್ಲಾ ನಡೆಯುತ್ತಿರುವ ಮೆರವಣಿಗೆ, ಪ್ರತಿಭಟನೆಗಳನ್ನು ಜನರು ಹಿಂದಿನಂತೆ ಗಮನಿಸುತ್ತಿಲ್ಲ, ಗೆಳೆಯರೊಬ್ಬರು ಹೇಳುತ್ತಿದ್ದರು. ಹಾವು ಆಡಿಸುವ ವ್ಯಕ್ತಿ, ಕೋತಿ ಆಡಿಸುವ ವ್ಯಕ್ತಿ ಈಗಲೂ ತನ್ನ ಸುತ್ತ 25 ಜನರನ್ನು ಸೇರಿಸಲು ಶಕ್ತನಾಗಿದ್ದಾನೆ. ಆದರೆ, ಪ್ರತಿಭಟನೆಗಳು ತಮ್ಮ ಸುತ್ತ 25 ಜನರನ್ನು ಸೇರಿಸಲು ಯಾಕೆ ಸಾಧ್ಯವಾಗುತ್ತಿಲ್ಲ? ಅಂದರೆ ಪ್ರತಿಭಟನೆಗಳು ಸಾಮಾಜಿಕ ಪರಿಣಾಮವನ್ನು ಉಂಟು ಮಾಡುವಲ್ಲಿ ವಿಫಲವಾಗುತ್ತಿರುವುದು ಯಾಕೆ? ಏಕೆಂದರೆ, ಬಹುಶಃ, ಪ್ರತಿಭಟನೆಗಳು ನಿರ್ದಿಷ್ಟ ಜಾಗಗಳಿಗೆ ಮತ್ತು ನಿರ್ದಿಷ್ಟ ಚೌಕಟ್ಟಿಗೆ ಒಳಪಟ್ಟಿವೆ. ಪ್ರತಿಭಟನೆ ಮಾಡುವುದು ಗ್ರಾಹಕರಿಗೂ ಯಾವ ಸಮಸ್ಯೆಯೂ ಇರುವುದಿಲ್ಲ, ಮೂರೂ ಜನರಿಗೆ ಬೇಕಾದ ನಿರ್ದಿಷ್ಟ ಬಗೆಯ ಚೌಕಟ್ಟು. ಯಾರೂ ದಾಟುವುದಿಲ್ಲ, ಇದನ್ನೂ ದಾಟಬಯಸುವ ಪ್ರತಿಭಟನಾಕಾರರನ್ನು 'ಉದ್ಧಟರು' ಎಂದು ಭಾವಿಸಲಾಗುತ್ತದೆ.

ಇದನ್ನು ಬಿಟ್ಟರೆ, ಸ್ಲಂ ಜನರನ್ನು ಅವರ ಜಾಗಗಳಿಂದ ಒಕ್ಕಲೆಬ್ಬಿಸುವಂತಹ ನೇರ ಕಾರ್ಯಾಚರಣೆಗಳ ವಿರುದ್ಧ ಜನರ ಆ ಕ್ಷಣದ 'ಸ್ಪಾಂಟೇನಿಯಸ್' ಪ್ರತಿಕ್ರಿಯೆಗಳು ಮಾತ್ರ ಭಿನ್ನವಾಗಿರುತ್ತವೆ. ಆದರೆ ಅಂತಹ ಕಡೆಯಲ್ಲೂ ನಿರ್ದಿಷ್ಟ ಬಗೆಯ ಪೋಸುಗಳಿಗೆ ಸರಿಯಾದ 'ಕವರೇಜ್' ಸಿಗುತ್ತದೆ ಎಂಬುದು ಆಕ್ರೋಶಭರಿತರಾದವರಿಗೆ ಗೊತ್ತಿರುತ್ತದೆ.

ಇವೆಲ್ಲವನ್ನೂ ಹೇಳುತ್ತಿರುವುದು ಇಂತಹ ಪ್ರತಿಭಟನೆಯಲ್ಲಿ ಭಾಗಿಯಾಗುವವರನ್ನು ವ್ಯಂಗ್ಯ ಮಾಡಲೆಂದಲ್ಲ, ಇಂತಹುದೇ ಕೆಲಸದಲ್ಲಿ ನಿತ್ಯ ನಿರತನಾಗಿ ಕಂಡುಕೊಂಡಿರುವ ಅಂಶಗಳನ್ನು ಮುಂದಿಟ್ಟು, ಪರ್ಯಾಯದ ಚರ್ಚೆಯನ್ನು ನಡೆಸಬೇಕು ಎಂದಷ್ಟೇ. ಈ ಸಂದರ್ಭದಲ್ಲಿ ಇವನ್ನು ಹೇಳಬೇಕೆನ್ನಿಸುವ ತುರ್ತು ಉಂಟಾಗಿದ್ದು, ಅಮೆರಿಕದ ಮಿಸ್ಸೌರಿ ಪ್ರಾಂತದ ಸೆಂಟ್ ಲೂಯಿ ಕೌಂಟಿಯ ಫರ್ಗ್ಯುಸನ್ ಎಂಬ ಪಟ್ಟಣದಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಕಾರಣದಿಂದಾಗಿ.

ಈ ಆಗಸ್ಟ್ 9ರಂದು ಅಲ್ಲಿ ಡ್ಯಾರೆನ್ ವಿಲ್ಸನ್ ಎಂಬ ಬಿಳಿಯ ಪೊಲೀಸ್ ಅಧಿಕಾರಿಯು ಮೈಕೆಲ್ ಬ್ರೌನ್ ಎಂಬ ಎಳೆಯ ಪ್ರಾಯದ ಕಪ್ಪು ಹುಡುಗನೊಬ್ಬನನ್ನು ಅಂತಹ ಕಾರಣವೇನೂ ಇಲ್ಲದೇ ಕೊಂದು ಹಾಕಿದ. ಬಂದಿದ್ದರು. ಇಲ್ಲಿ ಬಿಎಂಐಸಿ ಯೋಜನೆಯ ವಿರುದ್ಧ ನಾವು ಹೋರಾಟ ನಡೆಸುತ್ತಿದ್ದ ಕಾಲವದು. ಬಿಎಂಐಸಿ ಯೋಜನೆಗೆ ಸಂಬಂಧಿಸಿದ 'ಸಾರ್ವಜನಿಕ ವಿಚಾರಣೆ'ಯನ್ನು ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಕರೆದಿದ್ದವು. ಸರಿಯಾದ ಮಾಹಿತಿ ಕೊಟ್ಟಿಲ್ಲ; ಕೊಟ್ಟಿರುವ ಮಾಹಿತಿಯೂ ಕನ್ನಡದಲ್ಲಿಲ್ಲ; ಹಾಗಾಗಿ ಈ ಸಾರ್ವಜನಿಕ ವಿಚಾರಣೆಯೇ ಸರಿಯಿಲ್ಲ ಎಂದು ಪ್ರತಿಭಟಿಸಿದವರೆಲ್ಲರನ್ನೂ ಬಂಧಿಸಿ ನೈಸ್ ರಸ್ತೆ ಹಾಗೂ ಟೌನ್‌ಶಿಪ್‌ಗಳಿಗೆ ಅನುಮತಿ ನೀಡಲಾಗಿತ್ತು. ನಮಗೆ ಸೆರ್ಗೆಯ್ ಹೆರ್ನಾಂಡಿಸ್ ಹೇಳಿದ್ದು ಆಶ್ಚರ್ಯವಾಗಿತ್ತು. ಅವರೆಲ್ಲರೂ ಸಿಯಾಟ್ಲ್‌ನಲ್ಲಿ ಡಬ್ಲ್ಯುಟಿಒದ ಶೃಂಗಸಭೆಯನ್ನೇ ನಡೆಯದಂತೆ ಒಂದು ದಿನದ ಮಟ್ಟಿಗೆ ತಡೆದಿದ್ದರು. ಅಮೆರಿಕಾದ ಈ ಪ್ರಸಿದ್ಧ ಪಟ್ಟಣದಲ್ಲಿ ಬೀದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿಕೊಂಡು ಟ್ರಾಫಿಕ್ ಜಾಮ್ ಮಾಡಿದ್ದರು. ಅವರನ್ನು ಚದುರಿಸುತ್ತಿದ್ದ ಪೊಲೀಸರ ಕಾರ್ಯಾಚರಣೆಯನ್ನು ಮುರಿದು ಮತ್ತೆ ಮತ್ತೆ ಸೇರಲು ಸಾಧ್ಯವಾಗಿದ್ದು, ಹೊಸದಾಗಿ ಕೈಗೆ ಸೇರಿದ್ದ ಪೇಜರ್ ಮತ್ತು ಮೊಬೈಲ್‌ಗಳ ಮೂಲಕ.

ಆದರೆ ಅಂತಹ ದೊಡ್ಡ ಪ್ರತಿಭಟನೆಯಲ್ಲಿ ಪೊಲೀಸರು ಒಬ್ಬರನ್ನೂ ಕೊಲ್ಲಲಿಲ್ಲ, ಸುಮ್ಮನಿದ್ದರೇ? ಇಲ್ಲ, ಸೆರ್ಗೆಯ್ ಪ್ರಕಾರ ಪೊಲೀಸರು ವಾಟರ್‌ಜೆಟ್, ಪೆಪ್ಪರ್ ಗ್ಯಾಸ್ ಮತ್ತು ರಬ್ಬರ್ ಬುಲೆಟ್‌ಗಳನ್ನು ಮಾತ್ರ ಬಳಸುತ್ತಿದ್ದರು! ನಾವು ಆತನಿಗೆ ಹೇಳಿದೆವು. ಭಾರತದಲ್ಲಾದರೆ ಅಂತಹ 'ದೊಡ್ಡ' ಸಮ್ಮೇಳನಕ್ಕೆ ಮುಂಚೆಯೇ ನಮ್ಮೆಲ್ಲರನ್ನೂ ಬಂಧಿಸುತ್ತಿದ್ದರು

ಹೀಗಿರುವಾಗ ಮೊನ್ನೆ (ಅಕ್ಟೋಬರ್ 13... ಪ್ರತಿಭಟನಾಕಾರರು ಒಂದು ಹೊಸ ರೀತಿಯ ಕಾಯ... ನಡೆಸಿದರು. ಬಹುತೇಕ ಪ್ರತಿಭಟನೆಗಳು ... ಶಾಂತಿಯುತವಾಗಿ ನಡೆಯುತ್ತಿವೆ ಎಂಬುದೂ ... ಗಮನಿಸಬೇಕಾದ ಇನ್ನೊಂದು ಸಂಗತಿ. ಅಮೆ... ಫುಟ್‌ಬಾಲ್ ಆಟ ಅತ್ಯಂತ ಜನಪ್ರಿಯ. ಅ... ನ್ಯಾಷನಲ್ ಫುಟ್‌ಬಾಲ್ ಲೀಗ್ (ಎನ್‌ಎಫ್‌ಎಲ್... ಹೆಚ್ಚು ಸಂಖ್ಯೆಯ ಜನರನ್ನು ಸೆಳೆಯುತ್ತದೆ. ಮೊನ್ನೆ ... ಸೆಂಟ್ ಲೂಯಿಸ್ ರ್‍ಯಾಮ್ಸ್ ಮತ್ತು 49ರವರು ... ತಂಡಗಳ ನಡುವೆ ಹಣಾಹಣಿ ಜೋರಾಗಿ ನಡೆ... ಕ್ರೀಡಾಂಗಣದಲ್ಲೇ ದೊಡ್ಡ ವಿಡಿಯೋ ಸ್ಕ್ರೀನ್‌ನ... ಮತ್ತು ಸ್ಕೋರ್‌ಗಳನ್ನು ಜನರು ನೋಡುತ್ತಿದ್ದರು. ... ಒಂದು ದೊಡ್ಡ ಬ್ಯಾನರ್ ಒಂದು ಮೇಲಿಂದ ... ಅದರಲ್ಲಿ 'ರ್‍ಯಾಮ್ಸ್ ತಂಡದ ಅಭಿಮಾನಿಗಳು ಭಾವಿ... ಕ್ರೀಡಾಂಗಣದಲ್ಲಿ ಮತ್ತು ಹೊರಗೆ ಕಪ್ಪು ವರ್ಣೀಯ... ಜೀವಕ್ಕೂ ಬೆಲೆಯಿದೆ ("Rams fans kn... and off the field black lives mat... ಎಂದು ಬರೆಯಲಾಗಿತ್ತು.

ಆ ಬ್ಯಾನರ್‌ಅನ್ನು ಇಳಿಬಿಟ್ಟ ಸುಮಾರು ... ಪ್ರತಿಭಟನಾಕಾರರು ನಂತರ ತಮ್ಮೆರಡೂ ಕೈಗಳನ್ನೂ ... ಕ್ರೀಡಾಂಗಣದಲ್ಲಿ ನಡೆದರು. 'ಕೈ ಎತ್ತಿದ್ದೇವೆ, ... ಕೊಲ್ಲಬೇಡಿ' (Hands up, Don't shoot... ಹೇಳುವ ಈ ಪ್ರತಿಭಟನೆ ಈಗ ಫರ್ಗ್ಯುಸನ್‌ನ... ಕಾಣುವ ಒಂದು ಪ್ರತಿಭಟನಾ ರೂಪವಾಗಿದೆ... ಮನರಂಜನಾ ಆಟದ ಸುಖವನ್ನು ಹಾಳುಗೆ... ಅಮೆರಿಕನ್ನರು ಸಹಿಸುವುದಿಲ್ಲ. ಆದರೆ ಈ ಪ್ರತಿಭ... ಸಹಿಸದೇ ಇರಲು ಸಾಧ್ಯವಿರಲಿಲ್ಲ. ಎಲ್ಲೆ... ಸುದ್ದಿಯಾಗುತ್ತಿದೆ.

ಫರ್ಗ್ಯುಸನ್ ಹಾಗೂ ಸೆಂಟ್ ಲೂಯಿ... ನಡೆಯುತ್ತಿರುವ ಹೋರಾಟ ಅಮೆರಿಕಾದ್ಯಂತ ... ಸಾಧ್ಯತೆ ಇದೆ. ಹಿಂದೊಮ್ಮೆ ಕಿಂಗ್ ಎಂಬ ಕ... ವರ್ಣೀಯನನ್ನು ಥಳಿಸಿದ ವಿಡಿಯೋ ಅ... ಸಂಚಲನ ಮೂಡಿಸಿತ್ತು. ಆದರೆ ಆ ಸಂಚಲನ... ಸರ್ಕಾರ ಹಾಗೂ ಬಿಳಿ ಸಮಾಜದ ನಡವಳಿಕೆಯ... ಬದಲಾವಣೆಯನ್ನೇನೂ ತಂದಿರಲಿಲ್ಲ. ಈ ಸಾರಿ ... ನೋಡಬೇಕು. ಆದರೆ ಪ್ರತಿಭಟನೆಯ ... ಮಾದರಿಗಳನ್ನಂತೂ ಫರ್ಗ್ಯುಸನ್‌ನ ಜನರು ತೋ... ಈ ಪ್ರತಿಭಟನೆಗಳಲ್ಲಿ ಬಿಳಿ ಮತ್ತು ಕಪ್ಪು ವರ್ಣೀಯ... ಇದ್ದಾರೆ.


...ೋಹತ್ಯೆ ನಿಷೇಧ ಒಂದು ರಾಜಕೀಯ ತಂತ್ರ ಎಂದಿದ್ದ ಗೋಲ್ವಾಲ್ಕರ್


ಕಂಡಹಾಗೆ

ಗೋಹತ್ಯೆ ನಿಷೇಧ ಎಷ್ಟು ಅವೈಜ್ಞಾನಿಕ ಎಂದು ...ಎಂ. ಭಾರ್ಗವ ಎಂಬುವವರು ಇತ್ತೀಚೆಗೆ ಒಂದು ...ಸನದಲ್ಲಿ ವಿವರಿಸಿದ್ದಾರೆ. ಭಾರ್ಗವ ಅವರು ನಮ್ಮ ...ಲ್ಲಿ ಆಧುನಿಕ ಜೀವಶಾಸ್ತ್ರಕ್ಕೆ ಬುನಾದಿ ಹಾಕಿದ ವಿಜ್ಞಾನಿ. ... ಈ ಹಿಂದೆ ರಾಷ್ಟ್ರೀಯ ಜ್ಞಾನ ಆಯೋಗದ ...ಧ್ಯಕ್ಷರಾಗಿದ್ದರಲ್ಲದೆ, 1960ರ ದಶಕದ ಅಂತ್ಯದಲ್ಲಿ ...ಹತ್ಯೆ ನಿಷೇಧ ಕುರಿತು ವಿಚಾರಣೆ ನಡೆಸಿದ ಸಮಿತಿಯ ...ದೆ ಹಾಜರಾಗಿ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದರು. ...ರ್ಸ ಸಬಾ ನಕ್ವಿ ಅವರಿಗೆ ಭಾರ್ಗವ ಅವರು ನೀಡಿರುವ ...ರ್ಶನ ಹೀಗಿದೆ:

...ಶ್ನೆ: 1960ರಲ್ಲಿ ನಿಮ್ಮ ಮತ್ತು ಆರೆಸ್ಸೆಸ್ ನಾಯಕ ...ಸ್.ಗೋಲ್ವಾಲ್ಕರ್ ನಡುವೆ ಒಂದು ಮರೆಯಲಾಗದ ...ನ ಚಕಮಕಿ ನಡೆದಿತ್ತಂತೆ. ಆ ಪ್ರಕರಣದ ಬಗ್ಗೆ ...ಬಲ್ಲಿರಾ? ...ುತ್ತೀರ?

...ಉತ್ತರ: ಆಗ ಗೋಹತ್ಯೆಯನ್ನು ನಿಷೇಧಿಸಬೇಕು ಎಂಬ ... ನಡೆಯುತ್ತಿತ್ತು. ಪರಿಣಾಮವಾಗಿ ಹಲವು ರಾಜ್ಯಗಳಲ್ಲಿ ...ಹತ್ಯೆಯನ್ನು ನಿಷೇಧಿಸಲಾಯಿತು. ಆಗ ಭಾರತ ಸರ್ಕಾರ ...ಬಗ್ಗೆ ವಿಚಾರಣೆ ನಡೆಸಲು ಒಂದು ಸಮಿತಿಯನ್ನು ...ಸಿತು. ಆ ಸಮಿತಿಗೆ ನಿವೃತ್ತ ಮುಖ್ಯ ನ್ಯಾಯಮೂರ್ತಿ ... ಎ.ಕೆ.ಸರ್ಕಾರ್ ಅವರು ಮುಖ್ಯಸ್ಥರಾಗಿದ್ದರು. ...ಲ್ವಾಲ್ಕರ್, ಪೂರಿಯ ಶಂಕರಾಚಾರ್ಯ ಮತ್ತು ಡಾ. ...ಸ್ ಕುರಿಯನ್ ಅವರು ಸಮಿತಿಯ ಸದಸ್ಯರಾಗಿದ್ದರು. ... ಹೊತ್ತಿನಲ್ಲಿ ನಾನು ನನ್ನ ಪ್ರಯೋಗಾಲಯದಲ್ಲಿ ...ನ್ನು ಕರೆದಿದ್ದೆ. ಆ ಸಭೆಯಲ್ಲಿ ಒಬ್ಬ ಭಾಷಣಕಾರರು ... ಹಸುಗಳನ್ನು ತಿನ್ನದಿದ್ದರೆ, ಹಸುಗಳು ನಮ್ಮನ್ನ ...ವೆ" ಎಂದು ಸರಿಯಾಗಿಯೇ ವಿಶ್ಲೇಷಿಸಿದ್ದರು. ಈ ... ಕೆಲವರಿಗೆ ಇಷ್ಟವಾಗಲಿಲ್ಲ. ಆಗ ನಾನು ಆ ...ಯ ಮುಂದೆ ಹಾಜರಾಗಿ ಉತ್ತರ ಕೊಡಬೇಕೆಂದು ... ಬಂತು. ನಾನು ಸಮಿತಿಯ ಮುಂದೆ ಹಾಜರಾದಾಗ ...ಲ್ವಾಲ್ಕರ್ ಮತ್ತು ಶಂಕರಾಚಾರ್ಯರ ಮುಂದೆ ಮಾತಿನ ...ಕಿ ನಡೆಯಿತು. ಗೋಲ್ವಾಲ್ಕರ್ ಅವರು ದೇಹದಲ್ಲಿ





...ಹಾಲು ಮತ್ತು ಮಾಂಸ ಉತ್ಪತ್ತಿಯಾಗುತ್ತದೆ ಎಂದು ...ಪ್ರತಿಪಾದಿಸಿದರು. ನಾನು ಅವೆರಡೂ ಮೂಲತಃ ಒಂದೇ ...ಪ್ರಕ್ರಿಯೆಯ ಮೂಲಕ ಉತ್ಪತ್ತಿಯಾಗುತ್ತವೆ ಎಂದು ...ಸಿದೆ. ಆಗ ಅವರು 'ನೀನು ಯಾಕೆ ಮಾಂಸವನ್ನು ...ತಿನ್ನುತ್ತೀಯ ಆದರೆ ಹಾಲನ್ನು ಕುಡಿಯುವುದಿಲ್ಲ?' ... ಕೇಳಿದರು. ಅದಕ್ಕೆ ನಾನು 'ಅದೇ ತರ್ಕವನ್ನು ...ಯೋಗಿಸಿ ನೀವು ಯಾಕೆ ಹಾಲನ್ನು ಕುಡಿಯುತ್ತೀರಿ ...ಮಾಂಸವನ್ನು ತಿನ್ನುವುದಿಲ್ಲ' ಎಂದು ಮರುಪ್ರಶ್ನೆ ...ನನ್ನ ಪ್ರಶ್ನೆ ಕೇಳಿ ಅವರು ಕೆಂಡಾಮಂಡಲವಾದರು. ...ಯ ಅಧ್ಯಕ್ಷ ಮತ್ತು ಶಂಕರಾಚಾರ್ಯ ಅವರಿಬ್ಬರೂ ...ಲ್ವಾಲ್ಕರ್ ಅವರನ್ನು ಶಾಂತಗೊಳಿಸಲು ...ಸಿದರಾದರೂ ಅದಕ್ಕೆ ಸಾಕಷ್ಟು ಸಮಯ ಹಿಡಿಯಿತು.

...ಶ್ನೆ: ಆರೆಸ್ಸೆಸ್‌ನ ಹಾಲಿ ಮುಖ್ಯಸ್ಥ ಹಸು ಮಾತ್ರವಲ್ಲದೆ ...ಮ ಹತ್ಯೆಯನ್ನೂ ನಿಷೇಧಿಸಬೇಕು ಎಂದು ಹೇಳಿದ್ದಾರೆ. ...ಗೆ ಜರುಗಿದ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ...ಸುತ್ತ ಕೆಲವೆಡೆ ಘರ್ಷಣೆಗಳು ನಡೆದವು.

...ರ್ಗವ: ಗೋಹತ್ಯೆ ನಿಷೇಧ ಕಾನೂನನ್ನು ಎಮ್ಮೆಗೂ ...ಸುವುದು ವೈಜ್ಞಾನಿಕವಾಗಿ ಸರಿಯಲ್ಲ. ಹಸು ಮತ್ತು ...ಗಳು ಬೇರೆಬೇರೆ ಜಾತಿಗೆ ಸೇರಿವೆ. ಅವುಗಳ ನಡುವೆ ...ಲೋತ್ಪತ್ತಿ ಸಾಧ್ಯವಿಲ್ಲ. ಅಂದಹಾಗೆ, ನಮ್ಮ ಪ್ರಾಚೀನ ...ಕ ಗ್ರಂಥಗಳಲ್ಲಿ ಗೋಹತ್ಯೆಯನ್ನು ನಿಷೇಧಿಸಿಲ್ಲ, ...ಗಿ ದನದ ಮಾಂಸ ತಿನ್ನುವುದಕ್ಕೆ ಅನುಮತಿ ನೀಡಿವೆ. ...ದ ಧಾರ್ಮಿಕ ಆಧಾರದ ಮೇಲೆ ಗೋಹತ್ಯೆಯನ್ನು ...ಸುವುದು ಅವಿವೇಕತನ.

...ಶ್ನೆ: ಆರೆಸ್ಸೆಸ್ ಮತ್ತು ವಿಶ್ವಹಿಂದೂ ಪರಿಷತ್ ...ಸು ಆಹಾರಕ್ಕಾಗಿ ಹಸು ಮತ್ತು ಅದಕ್ಕೆ ಸಂಬಂಧಿಸಿದ ...ಜಾತಿ ಪ್ರಾಣಿಗಳನ್ನು ಹತ್ಯೆ ಮಾಡಬಾರದು ಎಂದು ...ತ್ತಾರಲ್ಲ?

...ರ್ಗವ: ಅದೂ ಕೂಡ ಅವೈಜ್ಞಾನಿಕ ನಿಲುವು. ... ಮತ್ತು ಚಿಂಪಾಂಜಿಗಳ ನಡುವೆ ಅನುವಂಶಿಕವಾಗಿ ... ನೂರರಲ್ಲಿ 99 ಸಾಮ್ಯತೆಗಳಿವೆ. ಆದರೆ ...ಜಿಗಳಿಗಿಂತ ಮಾನವ ವಿಭಿನ್ನವಾಗಿರುವುದು ಅದೇ ...ಒಂದು ಪ್ರತಿಶತದಿಂದಾಗಿ. ವಾಸ್ತವವಾಗಿ ಎಲ್ಲಾ ಜೀವಿಗಳೂ ಅನುವಂಶಿಕ ಸಾಮ್ಯತೆಗಳನ್ನು ಹೊಂದಿವೆ. ಆದರೂ ಒಂದು ಜಾತಿಯ ಪ್ರಾಣಿಗೆ ಅನ್ವಯಿಸುವುದು ಎಲ್ಲ ಜಾತಿಯ ಪ್ರಾಣಿಗಳಿಗೂ ಅನ್ವಯಿಸುತ್ತದೆ ಎಂದು ಹೇಳಲಾಗುವುದಿಲ್ಲ. ಆಡು ಮತ್ತು ಒಂಟೆ, ಮಾನವ ಮತ್ತು ಚಿಂಪಾಂಜಿ ಹೇಗೆ ವಿಭಿನ್ನವೋ ಹಾಗೆಯೇ ಹಸು ಮತ್ತು ಎಮ್ಮೆಯೂ ವಿಭಿನ್ನ.

ಪ್ರಶ್ನೆ: ಭಾರತದಲ್ಲಿ ಇತರೆ ದೇಶಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳಿವೆ. ವಿಜ್ಞಾನಿಯಾಗಿ ಇವುಗಳನ್ನು ಏನು ಮಾಡಬೇಕೆಂಬುದು ನಿಮ್ಮ ಅಭಿಪ್ರಾಯ?

ಭಾರ್ಗವ: ಅವು ಹಾಲು ಉತ್ಪಾದಿಸುವುದನ್ನು ನಿಲ್ಲಿಸಿದ ನಂತರ ಆಹಾರಕ್ಕಾಗಿ ಅವುಗಳನ್ನು ಬಳಸಬೇಕು.

ಪ್ರಶ್ನೆ: ದನದ ಮಾಂಸವನ್ನು ತಿನ್ನುವ ವಿರುದ್ಧ ಈಗಿರುವ ವಾತಾವರಣದ ಬಗ್ಗೆ ನಿಮಗೆ ಹೇಗನಿಸುತ್ತದೆ?

ಭಾರ್ಗವ: ಒಮ್ಮೆ ಗೋಲ್ವಾಲ್ಕರ್ ಅವರೇ ಕುರಿಯನ್ ಅವರಿಗೆ 'ನಾವು ಗೋಹತ್ಯೆ ನಿಷೇಧವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದೇವೆ ಅಷ್ಟೇ' ಎಂದು ಹೇಳಿದ್ದರಂತೆ. ಇವತ್ತು ಹಿಂದುತ್ವದ ನೆಪದಲ್ಲಿ ರಾಜಕೀಯ ಮತ್ತು ಧಾರ್ಮಿಕ ಅಮಲನ್ನು ಮಿಶ್ರಣಮಾಡಿ ಜನರಿಗೆ ಏರಿಸಲಾಗುತ್ತಿದೆಯಷ್ಟೇ. ಇದಕ್ಕೆ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ.

***

ಪುಟಾಣಿ ಮಲಾಲಳಿಗೆ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆ ಆಗಿರುವ ಬಗ್ಗೆ ಜಗತ್ತಿನಾದ್ಯಂತ ಮೆಚ್ಚುಗೆ ವ್ಯಕ್ತವಾಗುತ್ತಿದ್ದರೆ, ಸ್ವತಃ ಆಕೆಯ ತಾಯಿ ನಾಡಾದ ಪಾಕಿಸ್ತಾನದಲ್ಲಿ ಕೋಮುವಾದಿ ಮುಸಲ್ಮಾನರು ಆಕೆಯನ್ನು ಟೀಕಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಫರಜ್ ತಲಾತ್ ಎಂಬ ಪಾಕಿಸ್ತಾನಿ ವೈದ್ಯರು ಆಕೆಗೆ ಒಂದು ಕಾಲ್ಪನಿಕ ಪತ್ರವನ್ನು ಬರೆದಿದ್ದಾರೆ. ಆ ಪತ್ರವನ್ನು ತಲಾತ್ ಅವರು ಡಾ. ಅಬ್ದುಸ್ ಸಲಾಮ್ ಹೆಸರಿನಲ್ಲಿ ಸೃಷ್ಟಿಸಿದ್ದಾರೆ.

ಅಂದಹಾಗೆ ಈ ಅಬ್ದುಸ್ ಸಲಾಮ್ ಅವರು ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಪಾಕಿಸ್ತಾನಿ ಆಗಿದ್ದರಲ್ಲದೆ, ಆ ಗೌರವಕ್ಕೆ ಕಾರಣರಾದ ಪ್ರಥಮ ಮುಸಲ್ಮಾನ್ ಕೂಡ ಆಗಿದ್ದರು. ಸಲಾಮ್ ಅವರು ಪಾಕಿಸ್ತಾನದ ಖ್ಯಾತ ಭೌತವಿಜ್ಞಾನಿಯಾಗಿದ್ದು ಆ ದೇಶದ ಅಣು ಯೋಜನೆಯ ಸ್ಥಾಪಕರೂ ಆಗಿದ್ದರು. ಆದರೆ ಯಾವಾಗ ಪಾಕಿಸ್ತಾನದ ಸಂಸತ್ತು ಅಹಮದೀಯ ಮುಸಲ್ಮಾನರು 'ಮುಸಲ್ಮಾನರಲ್ಲ' ಎಂಬ ವಿಧೇಯಕವನ್ನು ಅಂಗೀಕರಿಸಿತೋ ಆಗ ಸಲಾಮ್ ಅವರು ಪಾಕಿಸ್ತಾನವನ್ನು ತೊರೆದು ಇಂಗ್ಲೆಂಡಿಗೆ ವಲಸೆ ಹೋಗಿದ್ದರು. 1996ರಲ್ಲಿ ಅವರು ತೀರಿಕೊಂಡ ನಂತರ ಅವರ ಪಾರ್ಥೀವ ಶರೀರವನ್ನು ಪಾಕಿಸ್ತಾನದ ಪಂಜಾಬ್ ರಾಜ್ಯದ ರಬ್ವಾ ಎಂಬ ಊರಿನಲ್ಲಿ ಮಣ್ಣು ಮಾಡಲಾಯಿತು. ಅವರ ಗೋರಿಯ ಮೇಲೆ 'ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಮುಸ್ಲಿಮ್' ಎಂದು ಕೆತ್ತಲಾಗಿತ್ತು. ಆದರೆ ಅವರು ಅಹಮದೀಯ ಮುಸಲ್ಮಾನರಾಗಿದ್ದರಿಂದ ಮತ್ತು ಪಾಕಿಸ್ತಾನದ ಸರ್ಕಾರ ಆ ಸಮುದಾಯದವರನ್ನು ಮುಸಲ್ಮಾನರು ಎಂದು ಸ್ವೀಕರಿಸುವುದಿಲ್ಲವಾದ್ದರಿಂದ ಗೋರಿಯ ಮೇಲಿದ್ದ 'ಮುಸಲ್ಮಾನ' ಎಂಬ ಪದವನ್ನು ನಾಶ ಮಾಡಲು ನ್ಯಾಯಾಲಯವೇ ಆದೇಶ ನೀಡಿತ್ತು.

ತಲಾತ್ ಅವರು ಸಲಾಮ್ ಅವರ ಹೆಸರಡಿ ಬರೆದಿರುವ ಪತ್ರ ಮನಮುಟ್ಟುವಂತಿದೆಯಲ್ಲದೆ, ಕೋಮುವಾದಿಗಳ ಸಂಕುಚಿತ ಮನಸ್ಥಿತಿಯನ್ನೂ ತೆರೆದಿಡುವಂತಿರುವುದರಿಂದ ಅದನ್ನು ನಮ್ಮ ಓದುಗರಿಗೆ ಇಲ್ಲಿ ನೀಡುತ್ತಿದ್ದೇನೆ.

ಪ್ರೀತಿಯ ಮಲಾಲ,

ಈ ಹಿಂದೆ ಬಹಳಷ್ಟು ವಿದ್ಯಮಾನಗಳು ಸಂಭವಿಸಿದ್ದರೂ ನಾನು ನನ್ನೊಳಗೆ ಸದಾ ಒಂದು ಚಿಕ್ಕ ಆಶಯವನ್ನು ಹೊಂದಿದ್ದೆ. ಅದೇನೆಂದರೆ ಜನ ನನ್ನನ್ನು ನೊಬೆಲ್ ಪ್ರಶಸ್ತಿ ಪಡೆದಿರುವ 'ಏಕೈಕ' ಪಾಕಿಸ್ತಾನಿ ಎಂದಾಗಲೆಲ್ಲ ನಾನು 'ಏಕೈಕ' ಬದಲಾಗಿ 'ಪ್ರಥಮ' ಎನ್ನಿ ಎಂದು ಒತ್ತಾಯ ಮಾಡುತ್ತಿದ್ದೆ.

ನಾನು ಸಂಟೋಕ್ ದಾಸ್ ಎಂಬ ಸಣ್ಣ ಊರಿನಲ್ಲಿ ಹುಟ್ಟಿದವನು. ಖಂಡಿತವಾಗಿಯೂ ಅದು ನಿನ್ನ ಸ್ವಾಟ್ ಕಣಿವೆಯಷ್ಟು ಸುಂದರವಲ್ಲ, ಆದರೂ ಅದು ನನಗೆ ಸಾಕಷ್ಟು ನೆರವನ್ನು ಕೊಟ್ಟಿದೆ. ನಾನು ಝಾಂಗ್ ಎಂಬ ಊರಿನಲ್ಲಿ ಬೆಳೆದೆ. ಆ ಊರು ಈಗ ಹಲವು ದುಷ್ಟ ಗುಂಪುಗಳಿಂದಾಗಿ ತನ್ನ ಹೆಸರಿಗೆ ಕಳಂಕ ಅಂಟಿಸಿಕೊಂಡಿದೆ.

ನನ್ನ ತಂದೆ ಪಂಜಾಬ್ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ನಿನ್ನ ತಂದೆಗೆ ಅವರು ಇಷ್ಟವಾಗುತ್ತಿದ್ದರು ಎಂಬುದು ನನ್ನ ನಂಬಿಕೆ.

ನಿನ್ನಂತೆಯೇ ನನಗೂ ಓದಿನಲ್ಲಿ ತುಂಬಾ ಆಸಕ್ತಿ ಇತ್ತು. ನನಗೆ ಇಂಗ್ಲಿಷ್ ಮತ್ತು ಉರ್ದು ಸಾಹಿತ್ಯ ಪ್ರಿಯವಾಗಿದ್ದರೂ ಗಣಿತದಲ್ಲಿ ಶ್ರೇಷ್ಠತೆಯನ್ನು ಹೊಂದಿದ್ದೆ. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ನಾನು ದಾಖಲೆ ಅಂಕಗಳನ್ನು ಆಗಲೇ ಗಳಿಸಿದ್ದೆ.

ಆದರೆ ನನ್ನ ವಿದ್ಯಾಭ್ಯಾಸ ಎಂದೂ ನಿನ್ನಂತೆ ರಾಜಕೀಯ ಸವಾಲುಗಳನ್ನು ಎದುರಿಸಲಿಲ್ಲ. ತಾಲಿಬಾನಿಗಳು ನನ್ನ ಶಾಲೆಯನ್ನು ಧ್ವಂಸಗೊಳಿಸಿದ್ದಾಗಲಿ, ಹುಡುಗರು ಶಾಲೆಗೆ ಹೋಗಬಾರದೆಂಬ ಕಟ್ಟಾಜ್ಞೆಯನ್ನಾಗಲಿ ನಾನೆಂದೂ ಎದುರಿಸಲಿಲ್ಲ. ಆದರೆ ಅವರು ನಿನ್ನೆದುರು ಅದೆಷ್ಟೇ ಅಡೆತಡೆಗಳನ್ನು ಒಡ್ಡಿದರೂ ನೀನು ಧೈರ್ಯವಾಗಿ ಎದುರಿಸಿ ಆ ಅಡೆತಡೆಗಳನ್ನೆಲ್ಲ ಒಡೆದು ಹಾಕಿದ್ದೀಯ.

ವಾಸ್ತವವಾಗಿ ನೀನು ತೆಗೆದುಕೊಳ್ಳುವ ಪ್ರತಿ ಉಸಿರೂ ನೀನು ಅವರಿಗೆ ಹಾಕುವ ಸವಾಲಾಗಿದೆ.

ನೀನು ನೊಬೆಲ್ ಪ್ರಶಸ್ತಿ ಗೆದ್ದಿರುವುದು ನಿನ್ನ ವಿರೋಧಿಗಳಿಗೆ ಕೋಪ ತರಿಸಿದ್ದರೆ ನಿನ್ನ ದೇಶದ ಹಲವು ಜನರಿಗೇ ಇರಿಸುಮುರುಸಾಗಿದೆ. ಇದೆಲ್ಲವನ್ನು ಎದುರಿಸಿ ಮುಂದೆ ಸಾಗಲು ತುಂಬಾ ಎದೆಗಾರಿಕೆ ಬೇಕು. ಆದರೆ ನನಗೆ ಗೊತ್ತಿರುವಂತೆ ನಿನ್ನಲ್ಲಿ ಅದಕ್ಕೇನೂ ಕೊರತೆ ಇಲ್ಲ.

ನಮ್ಮ ದೇಶದಲ್ಲಿ ಬಹಳಷ್ಟು ಬದಲಾವಣೆಗಳೇನಾಗಿಲ್ಲ. ನೀನು ಯಾವುದೇ ತಪ್ಪು ಮಾಡಿರದಿದ್ದರೂ ನಿನ್ನನ್ನು ಜನ ದೂರಿದರು, ದೂರ ಇಟ್ಟರು. ಆ ಅನುಭವಕ್ಕೆ ನಾನು ಅಪರಿಚಿತನೇನಲ್ಲ.

ಒಂದು ರಾಷ್ಟ್ರವಾಗಿ ನಾವು ಸಂಭ್ರಮಿಸಲು ಇಚ್ಛಿಸುವುದಿಲ್ಲ, ಬದಲಾಗಿ ನಾವು ಕನಿಕರಕ್ಕೆ ಆಶಿಸುತ್ತೇವೆ. ಎಲ್ಲಿಯವರೆಗೂ ನೀನು ಸ್ಥಳೀಯ ಬಲಿಪಶುವಾಗಿದ್ದೆಯೋ ಅಲ್ಲಿಯವರೆಗೂ ಅವರೆಲ್ಲ ನಿನ್ನನ್ನು ಸಹಿಸಿಕೊಂಡಿದ್ದರು. ಆದರೆ ಯಾವಾಗ ನೀನು ಬಲಿಪಶುವಾಗಲು ನಿರಾಕರಿಸುವ ಮೂಲಕ ಜಗತ್ತಿನಾದ್ಯಂತ ಹುಡುಗಿಯರಿಗೆ ಆಶಾಕಿರಣವಾಗಿ ಮಾರ್ಪಾಡು ಹೊಂದಿದೆಯೋ ಆಗ ಅವರೆಲ್ಲ ನಿನ್ನ ವಿರುದ್ಧ ತಿರುಗಿಬಿದ್ದರು.



• ಗೌರಿ ಲಂಕೇಶ್
editorlankesh@gmail.com

ನಮ್ಮ ದೇಶದವರಿಗೆ ಹೀರೋಗಳನ್ನು ಕಂಡರಾಗುವುದಿಲ್ಲ ಮಲಾಲ. ಬದಲಾಗಿ ಜಗತ್ತಿಗೆ ಪ್ರದರ್ಶಿಸಲು ಅವರಿಗೆ ಜರ್ಜರಿತ ಆತ್ಮಗಳು ಬೇಕು. ಯಾಕೆಂದರೆ ಈ ಉಪಖಂಡದ ಮುಸಲ್ಮಾನರಿಗೆ 'ವಸಾಹತುಶಾಹಿಗಳು' ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಏನು ಮಾಡಿದ್ದಾರೆಂದು ತೋರಿಸುವ ಮೂಲಕ ಅವರನ್ನು ಅವಮಾನಿಸುವ ಇಚ್ಛೆ ನಮ್ಮ ದೇಶದ ಜನರಿಗೆ. 'ಹೊರಗಿನವರು' ನಮ್ಮ ಕವಿ ಇಕ್ಬಾಲ್ ಅವರು ಕಟ್ಟಿದ್ದ ಸ್ವರ್ಗವನ್ನು ಹೇಗೆ ನಾಶ ಮಾಡಿದ್ದಾರೆ ನೋಡಿ ಎಂದು ಆರೋಪಿಸುವುದು ನಮ್ಮವರ ಉದ್ದೇಶ. ಆದರೆ ಅವರು ನಮ್ಮ ಜೊತೆಯೇ ಇದ್ದು ನಮಗೆ ಮಾಡಿರುವ ಅನಾಹುತವನ್ನು ಎಂದೂ ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ.

ನಮ್ಮ ನಡುವೆಯೇ ಇರುವ ಧರ್ಮಾಂಧತೆಯನ್ನು ನಮ್ಮವರೆಂದೂ ಒಪ್ಪಿಕೊಳ್ಳುವುದಿಲ್ಲ. ಅದರ ರುಚಿಯನ್ನು ನಾನೂ ಅನುಭವಿಸಿದ್ದೇನೆ. ನಾನು ನೊಬೆಲ್ ಪ್ರಶಸ್ತಿಯನ್ನು ಸ್ವೀಕರಿಸಿದ ದಿನದ ತನಕ ನನಗೂ ಇದು ಅರ್ಥವಾಗಿರಲಿಲ್ಲ. ಅವತ್ತು ಸೂಟ್ ತೊಟ್ಟಿದ್ದವರ ನಡುವೆ ನಮ್ಮ ಪಂಜಾಬಿನ ಉಡುಪು ಧರಿಸಿದ್ದ ನಾನು ನನ್ನ ದೇಶವನ್ನು ಪ್ರತಿನಿಧಿಸುತ್ತಿದ್ದೇನೆ ಎಂದು ಹೆಮ್ಮೆ ಪಟ್ಟಿದ್ದೆ. ಆದರೆ ನಾನು ನಮ್ಮ ದೇಶವನ್ನು ಪ್ರತಿನಿಧಿಸುತ್ತಿದ್ದ ಬಗ್ಗೆ ನಮ್ಮ ದೇಶದವರಿಗೇ ಹೆಮ್ಮೆ ಇರಲಿಲ್ಲ.

ನನ್ನ ಧಾರ್ಮಿಕ ನಂಬಿಕೆಗಳಿಗಾಗಿ ನನ್ನ ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಲಾಯಿತಲ್ಲದೆ ನನ್ನನ್ನೇ ದೆವ್ವದಂತೆ ರೂಪಿಸಿದರು. ನಾನು ಹಲವು ವಿಶ್ವವಿದ್ಯಾಲಯಗಳಲ್ಲಿ ಪಾಠ ಮಾಡದಂತೆ ಧಮಕಿ ಹಾಕಿದರು. ನನ್ನ ಜನರ ಮುಂದೆಯೇ ನನ್ನ ಕೊಡುಗೆಗಳನ್ನು ತುಚ್ಛೀಕರಿಸಿದರು.


ಇದೆಲ್ಲದರಿಂದಾಗಿ ನನ್ನ ದೇಶದಲ್ಲೇ ನಾನು ವಿದೇಶಿಯಂತೆ ಇರುವ ಬದಲಾಗಿ ವಿದೇಶದಲ್ಲಿ ಕೆಲಸ ಮಾಡುವುದೇ ವಾಸಿ ಎಂದು ನಿರ್ಧರಿಸಬೇಕಾಯಿತು. ಆದರೆ ಹಾಗೆ ಮಾಡಿದಾಗ ನನ್ನನ್ನು 'ದೇಶದ್ರೋಹಿ' ಎಂದು ಟೀಕಿಸಿದರು.

ಪ್ರೀತಿಯ ಮಗು, ಈಗ ನಿನ್ನ ಸರದಿ. ನಿನಗೂ ಕಷ್ಟಗಳು ಎದುರಾಗುತ್ತವೆ ಎಂದು ದುಃಖದಿಂದಲೇ ಹೇಳುತ್ತಿದ್ದೇನೆ. ಯಾಕೆಂದರೆ ನೀನು ಈಗ ಹೊಸ 'ದೇಶದ್ರೋಹಿ.'

ಶಾಂತಿ ಮತ್ತು ಹೆಮ್ಮೆಯನ್ನು ನೀನು ನಿನ್ನ ದೇಶಕ್ಕೆ ಕೊಡುವ ಸವಾಲು ನಿನ್ನ ಮುಂದಿದೆ. ಆದರೆ ನಿನ್ನ ಈ ಕೊಡುಗೆಗಳೇ ನಿನ್ನ ದೇಶಕ್ಕೆ ಬೇಡವಾಗಿವೆ. ಆದರೇನಂತೆ, ಒಂದು ಹಠಮಾರಿ ಮಗುವಿನ ತಾಯಿಯಂತೆ ಆ ಮಗುವನ್ನು ಪ್ರೀತಿಸುವ ಮಾರ್ಗವನ್ನು ನೀನು ಕಂಡುಕೊಳ್ಳಬೇಕು. ಮುಂದೊಂದು ದಿನ ನನ್ನ ಮಾತುಗಳು ನಿನಗೆ ಅರ್ಥವಾಗುತ್ತವೆ ಎಂದು ಪ್ರಾರ್ಥಿಸುತ್ತೇನೆ.

ನೊಬೆಲ್ ಪ್ರಶಸ್ತಿ ಪಡೆದ ಈ ದೇಶದ ಮೊದಲ ಪ್ರಜೆ ಎಂಬ ಭಾಗ್ಯ ನನ್ನದಾಗಿತ್ತು. ಈಗ ನಾವು ಇಬ್ಬರೂ ಆ ಪ್ರಶಸ್ತಿಯನ್ನು ಪಡೆದವರಾಗಿದ್ದೇವೆ. ನಾನು ಇಲ್ಲಿಗೇ ಈ ಲೇಖನವನ್ನು ನಿಲ್ಲಿಸುತ್ತಿಲ್ಲ.

ನಿನ್ನವ,
ಅಬ್ದುಸ್ ಸಲಾಮ್



ಸಲಾಮ್ ಅವರ ಗೋರಿ

ಬೂಸಿ ಮೋದಿಯ ಪೊರಕೆ ಪೋಸ

ಮೊನ್ನೆ ನಡೆದ ಗಾಂಧಿ ಜಯಂತಿ ದಿನದಿಂದ ಮೊದಲ್ಗೊಂಡು ಭಾರತದ ಸುದ್ದಿ ಮಾಧ್ಯಮಗಳಲ್ಲಿ ಒಂದು ಸುದ್ದಿ ಪದೇಪದೇ ಜಾಹಿರಾತಿನಂತೆ ಪ್ರಚಾರ ಪಡೆಯುತ್ತಿದೆ. ಅದು ಪೊರಕೆ ಹಿಡಿದ ಪ್ರಧಾನಮಂತ್ರಿ, ಇತರೆ ಮಂತ್ರಿಗಳು ಹಾಗೂ ಅಧಿಕಾರಿಗಳ ಸುದ್ದಿ. ಹೀಗೆ ಪೊರಕೆ ಹಿಡಿದ ಪ್ರಧಾನಿ ಇನ್ನು ಐದು ವರ್ಷಗಳಲ್ಲಿ ದೇಶವನ್ನು ಸ್ವಚ್ಛ ಮಾಡುವುದಾಗಿ ಘೋಷಿಸಿದ್ದಾರೆ. ಮಹತ್ವಾಕಾಂಕ್ಷೆಯ ಈ ಯೋಜನೆಗೆ 'ಸ್ವಚ್ಛ ಭಾರತ್' ಎಂದು ನಾಮಕರಣ ಮಾಡಲಾಗಿದೆ.

2019ರ ಅಕ್ಟೋಬರ್ ವೇಳೆಗೆ ಸ್ವಚ್ಛತೆ, ಶೌಚ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಒಟ್ಟು ಎರಡು ಲಕ್ಷ ಕೋಟಿಗಳನ್ನು ವೆಚ್ಚ ಮಾಡುವುದಾಗಿ ಮೋದಿ ಸರ್ಕಾರ ಘೋಷಿಸಿದೆ. ಇದರ ಬಾಬ್ತು ನಗರಾಭಿವೃದ್ಧಿ ಇಲಾಖೆ 62 ಸಾವಿರ ಕೋಟಿಗಳನ್ನು ಹಾಗೂ ಕುಡಿವ ನೀರು ಮತ್ತು ಶೌಚ ವ್ಯವಸ್ಥೆಯ ಇಲಾಖೆ 1 ಲಕ್ಷದ 34 ಸಾವಿರ ಕೋಟಿಗಳನ್ನು ವ್ಯಯಿಸುತ್ತವಂತೆ. ಆ ಮೂಲಕ ಇನ್ನು 5 ವರ್ಷಗಳಲ್ಲಿ ಭಾರತವನ್ನು ಕಸ ಮುಕ್ತಗೊಳಿಸುತ್ತೇವೆಂಬುದು ಅವರ ಘೋಷಣೆ. ಆದರೆ ಕಳೆದ ಎರಡು ತಿಂಗಳುಗಳಿಂದ ಈ ಯೋಜನೆಗೆ ನೀಲ ನಕಾಶೆ ತಯಾರಿಸುತ್ತಿರುವ ಅಧಿಕಾರಿಗಳ ಪ್ರಕಾರವೇ 2019ರೊಳಗೆ ಈ ಗುರಿ ಸಾಧಿಸುವುದು ಅಸಾಧ್ಯವಾದ ಮಾತು. ಸಾಧ್ಯಾಸಾಧ್ಯತೆಯ ಪ್ರಶ್ನೆಯನ್ನು ಸದ್ಯಕ್ಕೆ ಬದಿಗಿಡೋಣ. ಪ್ರಧಾನಿ ಮೋದಿ ಎಲ್ಲಾ ಕೆಲಸ ಬಿಟ್ಟು ಅರ್ಜೆಂಟಾಗಿ ಪೊರಕೆ ಹಿಡಿದು ಪೋಸು ಕೊಡುತ್ತಿರುವ ರಾಜಕೀಯದ ಬಗ್ಗೆ ಸ್ವಲ್ಪ ಕೆದಕಿ ನೋಡೋಣ.

ಮೊದಲನೆಯದಾಗಿ, ತನ್ನ ಚುನಾವಣಾ ಘೋಷಣೆಯಲ್ಲಿ ದೇಶದ ಕಸವನ್ನು ಗುಡಿಸಿ ಸ್ವಚ್ಛ ಮಾಡಲು ನಮ್ಮ ಸರ್ಕಾರ ಪೊರಕೆ ಹಿಡಿಯುತ್ತದೆ ಎಂದು ಎಲ್ಲೂ ಹೇಳಿರಲಿಲ್ಲ. ಬಿಜೆಪಿ ಪ್ರಚಾರದ ಕೇಂದ್ರವಸ್ತು ಭ್ರಷ್ಟಾಚಾರ ಮತ್ತು ಕಪ್ಪುಹಣ ಹಾಗೂ ಬೆಲೆಯೇರಿಕೆಯ ನಿಯಂತ್ರಣಗಳಾಗಿದ್ದವು. ಹಾಗೆ ನೋಡಿದರೆ ಮೋದಿ ಸರ್ಕಾರ ಗದ್ದುಗೆ ಹಿಡಿದಿದ್ದೇ ಯುಪಿಎ ಸರ್ಕಾರದ ಭ್ರಷ್ಟಾಚಾರ ಹಾಗೂ ಆಡಳಿತ ವೈಫಲ್ಯಗಳ ಪರಿಣಾಮವಾಗಿ. ತನ್ನ ಚುನಾವಣಾ ಪ್ರಚಾರದುದ್ದಕ್ಕೂ ಮೋದಿ ಭಾರತವನ್ನು ಭ್ರಷ್ಟಾಚಾರ ಮುಕ್ತ ದೇಶ ಮಾಡುವ, ಭ್ರಷ್ಟರನ್ನು ಜೈಲಿಗೆ ಕಳಿಸುವ ಉದ್ದದ ಭಾಷಣ ಬಿಗಿದಿದ್ದರು.

ವಿದೇಶಗಳಲ್ಲಿರುವ ಲಕ್ಷಾಂತರ ಕೋಟಿ ಕಪ್ಪುಹಣವನ್ನು ವಾಪಸ್ ತರಿಸಿ ಭಾರತದ ಅಭಿವೃದ್ಧಿಗೆ ಅದನ್ನು ಬಳಸುವುದಾಗಿ ಬಡಾಯಿ ಬಿಟ್ಟಿದ್ದರು. ಬೆಲೆಯೇರಿಕೆಯನ್ನು ನಿಯಂತ್ರಿಸಿ ಜನರಿಗೆ ನೆಮ್ಮದಿಯ ಜೀವನದ ಭರವಸೆ ನೀಡಿದ್ದರು. ಇಂಥಾ ನಿರೀಕ್ಷೆ ಇಟ್ಟುಕೊಂಡೇ ಅಮಾಯಕ ಮತದಾರರು ಈ ಬಾರಿ ಮೋದಿ ನಾಯಕತ್ವಕ್ಕೆ ಹೆಚ್ಚಿನ ಒಲವು ತೋರಿದ್ದು.

ಆದರೆ ಅಧಿಕಾರಕ್ಕೆ ಬಂದ ನಂತರ ಮೋದಿ ಸರ್ಕಾರ ಮಾಡಿದ್ದೇನು? ತನ್ನ ಹಿಂದಿನ ವರಸೆಯನ್ನೇ ಬದಲಿಸಿಕೊಂಡ ಮೋದಿ 'ದೇಶದ ಒಳಿತಿಗಾಗಿ ಕೆಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ, ಇದರಿಂದ ನನ್ನ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದವರಿಗೆ ಬೇಸರವಾದರೂ ದೇಶದ ಅಭಿವೃದ್ಧಿಗಾಗಿ ಇದು ಅನಿವಾರ್ಯ' ಎಂದುಬಿಟ್ಟರು. ಮೋದಿ ತೆಗೆದುಕೊಂಡ ಅಂಥಾ ಕಠಿಣ ಕ್ರಮಗಳು ಯಾವುವು? ಎಲ್ಲ ತರದ ಸಬ್ಸಿಡಿಗಳನ್ನು ರದ್ದು ಪಡಿಸುವುದು, ಬೆಲೆಗಳನ್ನು ಏರಿಕೆ ಮಾಡುವುದು.

ಇದರಂತೆ ರೈಲ್ವೆ ದರ ಶೇಕಡ 14ರಷ್ಟು ಏರಿಕೆ ಮಾಡಲಾಗಿದೆ. ಈ ವಿಷಯದಲ್ಲಿ ಹಿಂದಿನ ಎಲ್ಲ ಸರ್ಕಾರಗಳ ದಾಖಲೆಯನ್ನೂ ಮುರಿದಿದ್ದಾರೆ. ಹಾಗೇ ಸದ್ದುಗದ್ದಲವಿಲ್ಲದೆ ಸಿಮೆಂಟ್ ಕಂಪನಿಗಳು ಶೇಕಡ 20 ರಷ್ಟು ಬೆಲೆಯೇರಿಕೆ ಮಾಡಿವೆ. ಈ ಸಿಮೆಂಟ್ ಕಂಪನಿಗಳ ಒಡೆಯರಿಗೂ ಮಾನ್ಯ ನರೇಂದ್ರ ಮೋದಿಗೂ ಅವಿನಾಭಾವ ಗೆಳೆತನವಿದೆ. ಮೋದಿಯ ಚುನಾವಣಾ ವೆಚ್ಚದಲ್ಲಿ ಈ ಕಂಪನಿಗಳ ಪಾಲೂ ಇದೆ. ಈ ಎಲ್ಲದರ ಪರಿಣಾಮವಾಗಿ ಬಡಬಗ್ಗರು ಸೂರು ನಿರ್ಮಿಸಿಕೊಳ್ಳುವುದೇ ದುಸ್ತರವಾಗಿ ಹೋಗಿದೆ.


ಇನ್ನು ಕಪ್ಪುಹಣ ವಾಪಸ್ ತರುವ ಸಂಗತಿಯನ್ನಂತೂ ಅಪ್ಪಿತಪ್ಪಿಯೂ ಎತ್ತುತ್ತಿಲ್ಲ, ಆದರ ಬದಲಿಗೆ ಎಫ್‌ಡಿಐ ಹೆಚ್ಚಿಸುವ ಮಾತುಗಳು, ಪ್ರಯತ್ನಗಳು ಎಗ್ಗಿಲ್ಲದೆ ಸಾಗಿವೆ. ಈ ವಿದೇಶಿ ನೇರ ಹೂಡಿಕೆಯ ವಿಷಯದಲ್ಲಿ ಒಂದು ಒಳಸುಳಿಯಿದೆ. ಕಳೆದ ಒಂದು ದಶಕದಲ್ಲಿ ಭಾರತಕ್ಕೆ ಬಂದಿರುವ ಹೂಡಿಕೆಯಲ್ಲಿ ಗಣನೀಯ ಪ್ರಮಾಣದ ಬಂಡವಾಳ ಭಾರತದ್ದೇ ಕಳ್ಳ ಹಣ ವಿದೇಶಿ ಹೆಸರಿನಲ್ಲಿ ಹೂಡಿಕೆಯಾಗಿದೆ ಎಂಬ ಬಗ್ಗೆ ಹಲವಾರು ವರದಿಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಎಫ್‌ಡಿಐ ಹೆಸ[...] ಕಪ್ಪುಹಣವೂ ರಾಜಾರೋಷವಾಗಿ ಹರಿದು ಬ[...] ಮೋದಿಯ 'ಮೇಕ್ ಇನ್ ಇಂಡಿಯ[...] ಫಲಾನುಭವಿಯಾಗುವ ಗುಮಾನಿಯಿದೆ.

ಮೋದಿ ಭ್ರಷ್ಟಾಚಾರದ ಬಗ್ಗೆ ಮಾತನಾಡುವ[...] ಮರೆತು ನಾಲ್ಕು ತಿಂಗಳಾಯ್ತು, ಅದಕ್ಕೆ ನಿರ್ದಿಷ್ಟ ಕಾರ[...] ಇದೆ. ಬಿಜೆಪಿಯ ಚುನಾವಣಾ ಪ್ರಚಾರದಲ್ಲಿ ಮ[...] ಪಾತ್ರ ವಹಿಸಿದ್ದ 2ಜಿ ಮತ್ತು ಕೋಲ್‌ಗೇಟ್ ಹಗರಣ[...] ಮೋದಿ ಬೆಂಬಲಿಗರಾದ ಅಂಬಾನಿ, ಅದಾನಿ, ಬಿ[...] ಟಾಟಾ, ಮಿತ್ತಲ್, ಎಸ್ಸಾರ್ ಮುಂತಾದ ಕಾರ್ಪೊ[...] ಕುಳಗಳ ಸುತ್ತ ಹೆಣೆದುಕೊಂಡಿವೆ. ಅಷ್ಟು ಮಾತ್ರ[...] ಬಿಜೆಪಿಯ ಹಲವಾರು ಸಂಸದರು ಮತ್ತು ಶಾಸಕರು[...] ಹಗರಣಗಳ ಫಲಾನುಭವಿಗಳಾಗಿದ್ದಾರೆ. ಹೀಗೆ ಐದಾರು ವರ್ಷಗಳಿಂದ ಭಾರೀ ಸುದ್ದಿಯಲ್ಲಿದ್ದ[...] ಹಗರಣಗಳು ಈಗ ಒಂದು ಸುದ್ದಿಯೇ ಅಲ್ಲ.

ಹಾಗಾದರೆ ಕಳೆದ ನಾಲ್ಕು ತಿಂಗಳುಗಳಲ್ಲಿ ಮ[...] ಜನತೆಗೆ ಏನೂ ಕೊಟ್ಟಿಲ್ಲವೆ? ಖಂಡಿತ ಕೊಟ್ಟಿ[...] ಅವು ಪುಕ್ಕಟೆ ಭಾಷಣಗಳು; ಮತ್ತಷ್ಟು ಆಶ್ವಾಸನೆ[...] ಆಗಸ್ಟ್ 15ರಂದು ಕೆಂಪುಕೋಟೆಯ ಭಾಷಣ, ಸೆಪ್ಟೆಂ[...] 5ರಂದು ಮಕ್ಕಳ ದಿನಾಚರಣೆಯ ಮಾತುಕತೆ, ಅ[...] ಪ್ರವಾಸ, ಮೇಕ್ ಇನ್ ಇಂಡಿಯಾ ಘೋಷಣೆ. ಈ[...] ಪೊಳ್ಳು ಕ್ರಮಗಳನ್ನು ಭಾರೀ ಸಾಧನೆಯೆಂಬಂತೆ ಆರ[...] ತಂಡಗಳು ಹಾಗೂ ಮೋದಿಯ ವಿಶೇಷ ಪ[...] ಭಟ್ಟಂಗಿಗಳು ಭಾರೀ ಅಚ್ಚುಕಟ್ಟಾಗಿ ದೇಶಾ[...] ಪ್ರಚುರಪಡಿಸುತ್ತಿವೆ. ಆದರೂ ಇವುಗಳಷ್ಟೇ ಸಾಕಾಗುವ[...] ಆದ್ದರಿಂದ ಈಗ ಸ್ವಚ್ಛ ಭಾರತ್ ಹೆಸರಿನಲ್ಲಿ ಪ[...] ಹಿಡಿದು ಪೋಸು!!

ಕಳೆದ ಐದಾರು ದಶಕಗಳ ಆಡಳಿತದಲ್ಲಿ [...] ಪುಕ್ಕಟೆ ಭಾಷಣಗಳಿಗಾಗಲಿ, ಪೋಸುಗಳಿಗಾಗಲಿ ಎಂ[...] ಕೊರತೆಯಾಗಿರಲಿಲ್ಲ. ಅಂದಿಗೂ ಇಂದಿ[...] ಕೊರತೆಯಿರುವುದು ಪರಿಶುದ್ಧ ಹಾಗೂ ಜನಪರ[...] ಆಡಳಿತದಲ್ಲಿ.

ಜನಪರ ಆಡಳಿತದ ಪರಿಕಲ್ಪನೆಗೂ ಮೋ[...]



ಮಹಾತ್ಮ ಗಾಂಧಿಯ ಕ್ಷಮೆಕೋರಿ

ವೈಬ್ರೆಂಟ್ ಗುಜರಾತ್‌ನಲ್ಲಿ ಪೌರ ಕಾರ್ಮಿಕರ ದುಸ್ಥಿತಿ!

ಕಳೆದ ಜನವರಿ ತಿಂಗಳಿನಲ್ಲಿ, ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಿ ಚುನಾವಣಾ ಪ್ರಚಾರ ಕೈಗೊಂಡಿದ್ದ ನರೇಂದ್ರ ಮೋದಿ ತನ್ನ ನಾಯಕತ್ವದಲ್ಲಿ ಗುಜರಾತ್ ರಾಜ್ಯ ಸಾಧಿಸಿರುವ 'ಅಭಿವೃದ್ಧಿ' ಬಗ್ಗೆ ದೇಶಾದ್ಯಂತ ಬೊಂಬಡಾ ಬಜಾಯಿಸುತ್ತಿದ್ದುದು ನಮಗೆಲ್ಲಾ ಗೊತ್ತೇ ಇದೆ. ಆದರೆ ವಿಪರ್ಯಾಸ ಹೇಗಿದೆ ನೋಡಿ. ಸರಿಯಾಗಿ ಅದೇ ಸಮಯದಲ್ಲಿ ಗುಜರಾತ್‌ನ ರಾಜಧಾನಿ ಅಹಮದಾಬಾದ್ ಅಕ್ಷರಶಃ ತಿಪ್ಪೆಗುಂಡಿಯಂತಾಗಿ ಎಲ್ಲೆಡೆ ಗಬ್ಬುನಾತ ಹರಡಿತ್ತು!

ಯಾಕೆಂದರೆ ಅಹಮದಾಬಾದ್ ಮುನಿಸಿಪಲ್ ಕಾರ್ಪೊರೇಷನ್‌ನ 4000ಕ್ಕೂ ಹೆಚ್ಚು ಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ತೊಡಗಿದ್ದರು. ಕಾರಣ ನಗರದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪರಿಶಿಷ್ಟ ಜಾತಿಯ ಕಾರ್ಮಿಕರಿಗೆ ಮೋದಿ ಸರ್ಕಾರ ಕಾನೂನಿನ ಪ್ರಕಾರ ಕೊಡಬೇಕಿದ್ದ ಕನಿಷ್ಠ ಕೂಲಿಯನ್ನೂ ಕೊಡುತ್ತಿರಲಿಲ್ಲ. ನಸುಕಿನಲ್ಲೇ ಎದ್ದು ಕಸ ಬಳಿಯುವ ಈ ನತದೃಷ್ಟರಿಗೆ ನಾಲ್ಕು ತಾಸುಗಳ ಕೆಲಸಕ್ಕೆ ಕೇವಲ 105 ರೂಪಾಯಿ, 8 ತಾಸುಗಳ ಪೂರ್ಣಾವಧಿ ಕೆಲಸಕ್ಕೆ 210 ರೂಪಾಯಿ ಕೂಲಿ ಮಾತ್ರ!

ಯಾವುದೇ ಉದ್ಯೋಗ ಭದ್ರತೆಯಿಲ್ಲ, ಪಿಎಫ್, ಇನ್ಶೂರೆನ್ಸ್, ಆರೋಗ್ಯ ಸೇವೆ ಯಾವುದೂ ಇಲ್ಲ. ಓವರ್‌ಟೈಮ್ ದುಡಿಮೆಗೂ ಬೆಲೆಯಿಲ್ಲ. ಇಂಥಾ ಅಭಿವೃದ್ಧಿ ಮಾದರಿಯಿಂದ ಬೇಸತ್ತ ಈ ನೌಕರರು ಈಗ ಜನ ಸಂಘರ್ಷ್ ಮಂಚ್ ಸಂಘಟನೆಯ ಸೋದರ ಸಂಘಟನೆಯಾದ 'ಗುಜರಾತ್ ಮಜ್ದೂರ್ ಸಭಾ'ದಡಿಯಲ್ಲಿ ಸಂಘಟಿತರಾಗಿ ಹೋರಾಟಕ್ಕಿಳಿದಿದ್ದಾರೆ. ಅವರ ಬೇಡಿಕೆಗಳಾದರೂ ಏನು? ಉದ್ಯೋಗ ಭದ್ರತೆ ಮತ್ತು ಕನಿಷ್ಠ ವೇತನದ ಖಾತ್ರಿ!



ತನ್ನ ಮಿತ್ರ ವೃಂದದಲ್ಲಿರುವ ಅದಾನಿ, ಅಂಬಾನಿ, ಎಸ್ಸಾರ್ ಕಂಪನಿಗಳಿಗೆ ಸರ್ಕಾರಿ ಬೊಕ್ಕಸದಿಂದ ಸಾವಿರಾರು ಕೋಟಿ ರಿಯಾಯಿತಿ ಕೊಟ್ಟಿರುವ ಮೋದಿಗೆ ರಾಜಧಾನಿಯನ್ನು ಸ್ವಚ್ಛಗೊಳಿಸುತ್ತಿರುವ ನತದೃಷ್ಟ ಕಾರ್ಮಿಕರಿಗೆ ಕನಿಷ್ಠ ವೇತನ ಕೊಡುವ ಮನಸ್ಸೂ ಇರಲಿಲ್ಲ. ಬದಲಿಗೆ ಮುಷ್ಕರ ನಿರತ ಕಾರ್ಮಿಕರ ಮೇಲೆ ಪೊಲೀಸರ ಮೂಲಕ ದೌರ್ಜನ್ಯ ನಡೆಸಿದರು. ಸುಮಾರು 300 ಮಂದಿಯನ್ನು ಬಂಧಿಸಲಾಯಿತು.

ಪೊಲೀಸ್ ದೌರ್ಜನ್ಯದಿಂದ ರೊಚ್ಚಿಗೆದ್ದ ಕಾರ್ಮಿಕರು ಲಾರಿಗಳಲ್ಲಿ ಕಸ ತಂದು ನಗರದ ಪ್ರಮುಖ ವೃತ್ತಗಳಲ್ಲಿ ಸುರಿದರು. ಮುನಿಸಿಪಲ್ ಕಮಿಷನರ್ ಮೇಲೆ ಎಸ್ಸಿ/ಎಸ್‌ಟಿ ದೌರ್ಜನ್ಯ ಕಾಯಿದೆಯಡಿ ಕೇಸು ದಾಖಲಿಸಿದರು. ತಮಗೆ ನ್ಯಾಯ ಕೊಡುವಂತೆ ಆಗ್ರಹಿಸಿ ಕೋರ್ಟ್ ಆವರಣದಲ್ಲೇ ಧರಣಿ ಕುಳಿತರು.

ಇದೇ ವೇಳೆಯಲ್ಲಿ ನರೇಂದ್ರ ಮೋದಿ ಗುಜರಾತ್ 'ಅಭಿವೃದ್ಧಿ' ಬಗ್ಗೆ ದೇಶಾದ್ಯಂತ ತುತ್ತೂರಿ ಊದುತ್ತಿದ್ದ. ಕೊನೆಗೆ ಗತ್ಯಂತರವಿಲ್ಲದೆ ಮೋದಿ ಸರ್ಕಾರ ಕಾರ್ಮಿಕರ ಕೆಲವು ಬೇಡಿಕೆಗಳನ್ನು ಒಪ್ಪಿಕೊಳ್ಳಲೇಬೇಕಾಯ್ತು. ಅದರಲ್ಲಿ ಅಂಥಾ ವಿಶೇಷವೇನಿಲ್ಲ.

ಇಲ್ಲಿ ವಿಶೇಷ ಸಂಗತಿಯೊಂದಿದೆ. ಏನೆಂದರೆ ಮೋದಿಯ ಗುಜರಾತ್‌ನ ರಾಜಧಾನಿಯಲ್ಲೇ ಇಷ್ಟೆಲ್ಲಾ ನಡೆಯುತ್ತಿದ್ದರೂ, ಕಾರ್ಪೊರೆಟ್ ಮಾಧ್ಯಮಗಳು ಈ ಬಗ್ಗೆ ಕನಿಷ್ಠ ಸುದ್ದಿಯನ್ನೂ ಮಾಡದೆ ಸೆನ್ಸಾರ್ ಮಾಡಿಬಿಟ್ಟವು. ಆದರೆ ಸ್ಥಳೀಯ ಪತ್ರಿಕೆಗಳು ಹಾಗೂ ಚಾನೆಲ್‌ಗಳು ವಿಧಿಯಿಲ್ಲದೆ ಈ ಸುದ್ದಿಯನ್ನು ಪ್ರಕಟಿಸಿವೆ. ಇಂದಿಗೂ ಅಂತರ್ಜಾಲದಲ್ಲಿ, ಯೂಟ್ಯೂಬ್‌ನಲ್ಲಿ ಈ ಸುದ್ದಿಯ ತುಣುಕುಗಳು ಲಭ್ಯ ಇವೆ.

ಭಾರತ ವಿದೇಶಿಗಳ ತಿಪ್ಪೆಗುಂಡಿಯೇ

ಅನಾದಿಯಿಂದಲೂ ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತದ ನೆಲದೊಳಕ್ಕೆ ಕಾಲಬಾಹಿರ ಅಣುಸ್ಥಾವರಗಳು, ಎಲೆಕ್ಟ್ರಾನಿಕ್ ಸಲಕರಣೆಗಳು ಮುಂತಾದ ತ್ಯಾಜ್ಯಗಳನ್ನು ತಂದು ಸುರಿಯುವುದು ಆಗಾಗ ಸುದ್ದಿಯಲ್ಲಿರುತ್ತದೆ. ವಿಕಿರಣಯುಕ್ತ ಹಾಲು, ಸಗಣಿಗಳೂ ಇಲ್ಲಿಗೆ ಬಂದಿವೆ. ಆದರೆ ತಿಪ್ಪೆಯ ಕಸವನ್ನೂ ತಂದು ಸುರಿಯುವ ಸಂಗತಿ ಅಷ್ಟಾಗಿ ಸುದ್ದಿಯಾಗಿಲ್ಲ. ಇಂಥಾ ವಿಚಿತ್ರ ಪ್ರಕರಣಗಳು ವರದಿಯಾಗಿದ್ದು ಬೇರೆಲ್ಲಿಂದಲೋ ಅಲ್ಲ-ಮಾನ್ಯ ಮೋದಿಯವರ ಆಡಳಿತಾವಧಿಯಲ್ಲಿ ಗುಜರಾತ್‌ನಿಂದಲೇ!

ಇದರ ಹಿನ್ನೆಲೆ ಹೀಗಿದೆ. ಗುಜರಾತ್‌ನ ವಾಪಿ ಕೈಗಾರಿಕಾ ಪ್ರದೇಶದಲ್ಲಿ 40 ಕ್ಕೂ ಹೆಚ್ಚು ರದ್ದಿ ಕಾಗದವನ್ನು ರಿಸೈಕ್ಲಿಂಗ್ ಮಾಡುವ ಕಾರ್ಖಾನೆಗಳಿವೆ. ಬಹುತೇಕ ಈ ಕಂಪನಿಗಳು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ರದ್ದಿ ಕಾಗದವನ್ನು ಆಮದು ಮಾಡಿಕೊಳ್ಳುತ್ತವೆ. ಏನಾದರೂ ಮಾಡು, ಹಣ ಮಾಡು ಎಂಬುದೇ ಅಭಿವೃದ್ಧಿ ನೀತಿಯಾಗಿದ್ದರೆ, ಅಂಥಾ ಪರಿಸ್ಥಿತಿಯ ದುರ್ಲಾಭ ಪಡೆದುಕೊಳ್ಳುವ ಚಾಣಾಕ್ಷರು ಇದ್ದೇ ಇರುತ್ತಾರೆ ತಾನೇ?

ಐರೋಪ್ಯ ದೇಶಗಳಲ್ಲಿ ಕಸ ವಿಲೇವಾರಿ ಮತ್ತು ಸಂಸ್ಕರಣೆ ಬಗ್ಗೆ ಕಠಿಣ ಕಾನೂನುಗಳಿದ್ದು ಅದಕ್ಕೆ ತೀರಾ ದುಬಾರಿ ವೆಚ್ಚ ತಗುಲುತ್ತದೆ. ಹೀಗಾಗಿ ಕೆಲವು ಸ್ವದೇಶಿ ಕಂಪನಿಗಳೊಂದಿಗೆ ಶಾಮೀಲಾಗಿ ಅಲ್ಲಿನ ಕಸವನ್ನು ಹಳೇ ಪೇಪರ್‌ನ ಹೆಸರಿನಲ್ಲಿ ಭಾರತಕ್ಕೆ ರಫ್ತು ಮಾಡಿಬಿಡುವ ದುಷ್ಟ ಯೋಜನೆ ರೂಪಿಸಲಾಯ್ತು.

2003-04ರಲ್ಲಿ ಬಹಿರಂಗಗೊಂಡ ಒಂದು ಘಟನೆ ಹೀಗಿದೆ. ಐರ್‌ಲ್ಯಾಂಡ್‌ನ ಪರಿಸರಪ್ರೇಮಿ ಅಧಿಕಾರಿಯೊಬ್ಬರು ಕೊಟ್ಟ ಸುಳಿವಿನ ಮೇರೆಗೆ ಪರಿಸರ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಮುಂಬೈನ ಬಂದರಿನಲ್ಲಿ 40 ಕಂಟೈನರ್‌ಗಳನ್ನು ವಶಕ್ಕೆ ತೆಗೆದುಕೊಂಡರು. ಅವುಗಳ ತುಂಬಾ ದುರ್ವಾಸನೆಯುಕ್ತ ಕಸದ ರಾಶಿಯೇ ಇತ್ತು. ಬಿಯರ್ ಕ್ಯಾನ್‌ಗಳು, ವ್ಯರ್ಥವಾದ ಆಹಾರ ಪದಾರ್ಥಗಳು, ಪ್ಲಾಸ್ಟಿಕ್ ಡಬ್ಬಿಗಳು, ಹಳೆಯ ಬಟ್ಟೆಗಳು ಹೀಗೇ ತರಹೇವಾರಿ ಕಸದ ರಾಶಿ. ಈ ಕಸವನ್ನು ಪೇಪರ್‌ನ ಹೆಸರಿನಲ್ಲಿ ಆಮದು ಮಾಡಿಕೊಂಡ ದೇಶಭಕ್ತ ಕಂಪನಿಯ ಹೆಸರು 'ವೆಲ್ ಪ್ಯಾಕ್ ಪೇಪರ್ಸ್ ಅಂಡ್ ಕಂಟೈನರ್ಸ್ ಲಿಮಿಟೆಡ್'. ಈ ಕಂಪನಿ ಗುಜರಾತ್‌ನ ರಾಜಧಾನಿ ಗಾಂಧಿನಗರದ ಕಲೋಲ್-ವಾಮಜ್ ರಸ್ತೆಯಲ್ಲಿ ನೆಲೆಯೂರಿತ್ತು.

ಈ ಕಸದ ಕಂಟೈನರ್‌ಗಳನ್ನು ಅಧಿಕಾರಿಗಳು ಐರ್‌ಲೆಂಡ್‌ನ ರಫ್ತುದಾರ ಕಂಪನಿ-ಬರ್ನಾ ವೇಸ್ಟ್ ರಿಸೈಕ್ಲಿಂಗ್ ಕಂಪನಿಗೆ ವಾಪಸ್ ಕಳಿಸಿದರು. ಅಷ್ಟಕ್ಕೇ ಮುಗಿದಿದ್ದರೆ ಸಮಸ್ಯೆಯಿಲ್ಲ. ರಫ್ತುದಾರ ಕಂಪನಿ ಮತ್ತೆ ಆ ಕಸ[...] ಭಾರತಕ್ಕೆ ಕಳಿಸಲು ಅನುಮತಿ ಕೋರಿ ಮತ್ತೆ [...] ಗುಜರಾಯಿಸಿತು. ಆದರ ಜೊತೆಗೆ ಗುಜರಾತ್‌ನ ಕಲೆ[...] ಮುನಿಸಿಪಾಲಿಟಿಯಿಂದ ನಿರಾಕ್ಷೇಪಣಾ ಪತ್ರವನ್ನು ಅ[...]



[...]ಲಾಗಿತ್ತು. ಮೋದಿ ಆಡಳಿತದ ಆ ಮುನಿಸಿಪಾಲಿಟಿ [...] ಆಮದುದಾರ ಗುಜರಾತಿ ಕಂಪನಿಗೆ ರೀಸೈಕಲ್ ಸಾ[...] ಇರುವುದರಿಂದ ಕಸದ ಆಮದಿನಲ್ಲಿ ತಪ್ಪೇನೂ ಇಲ್ಲ[...]

ಹೀಗೆ ಮತ್ತೆ ಕಸ ಭಾರತಕ್ಕೆ ಬರಲು ಸಜ್ಜಾ[...] ಆದರೆ ಅಲ್ಲಿನ ಪರಿಸರ ಅಧಿಕಾರಿಗಳು ಈ ಕ[...] ರವಾನಿಸಲು ನಿರಾಕರಿಸಿದ್ದರಿಂದ ಸದ್ಯ ಅಲ್ಲಿಗೆ [...] ಹೋಯಿತು. ನಂತರದ ದಿನಗಳಲ್ಲಿ ಇಂಗ್ಲೆಂಡ್ [...] ಇನ್ನಿತರ ದೇಶಗಳಿಂದ ಬಂದ ಕಸದ ಕಂಟೈನರ್‌ಗ[...] ವಶಪಡಿಸಿಕೊಳ್ಳಲಾಯಿತು. ಇಂಥಾ ಪ್ರಕರಣಗಳು ಸು[...] ಕೋರ್ಟ್ ಮೆಟ್ಟಿಲೇರಿತು. ಸುಪ್ರೀಂಕೋರ್ಟ್‌ನ ಮಾ[...] ರಿಂಗ್ ಕಮಿಟಿಯ ನಿರ್ದೇಶನದಂತೆ ಕಸ ಆಮದುಮಾಡಿ[...] ಕಂಪನಿಗೆ ದಂಡ ವಿಧಿಸಲಾಯ್ತು. ಆ ಕಂಪನಿಗೆ ಬೀಗ[...]

ಈ ಪ್ರಕ್ರಿಯೆಯಲ್ಲಿ ಸುಪ್ರೀಂಕೋರ್ಟ್‌ನ ಮಾನಿ[...] ಕಮಿಟಿ ಪಟ್ಟಿ ಮಾಡಿದ ಗುಜರಾತ್‌ನ ಕಸ ಆಮದು[...] ಕಂಪನಿಗಳು ಹೀಗಿವೆ.

1. ದಮನ್ ಗಂಗಾ ಪೇಪರ್ಸ್ ಲಿಮಿಟೆಡ್
2. ಗೌತಮ್ ಎಂಟರ್‌ಪ್ರೈಸಸ್
3. ಶಾಹ್ ಪಲ್ಪ್ ಅಂಡ್ ಪೇಪರ್ ಮಿಲ್ಸ್
4. ರಾಧೆ ಗ್ಲೋಬಲ್ ಟ್ರೇಡ್ ಅಸೋಸಿಯೇ[...]

ಇವುಗಳ ಜೊತೆಗೆ ಮುಂಬೈನಿಂದ ವ[...] ಕಂಪನಿಗಳು ಮತ್ತು ಆರೆಸ್ಸೆಸ್ ಕೇಂದ್ರ ಕಚೇರಿ[...] ನಾಗಪುರದ ಒಂದು ಕಂಪನಿಯೂ ಪಟ್ಟಿಯಲ್ಲಿತ್ತು[...]

ಏನಾದರೂ ಮಾಡು, ಹಣ ಮಾಡು ಎಂ[...] ಅಭಿವೃದ್ಧಿ ನೀತಿಯಾಗಿದ್ದರೆ ಇನ್ನೇನಾಗುತ್ತೆ ಹೇಳಿ?


...ರಾತ್ ಮಾದರಿ ಅಭಿವೃದ್ಧಿಗೂ ಭಾರೀ ಅಂತರ. ಹಾಗೆ ನೋಡಿದರೆ ...ಬ ಗುಜರಾತ್‌ನಲ್ಲಿ "ನಿರ್ಮಲ ಗುಜರಾತ್" ಹೆಸರಿನಲ್ಲಿ ಮಾಡಿದ ...ನ ಅಖಿಲ ಭಾರತ ಸ್ವರೂಪವೇ 'ಸ್ವಚ್ಛ ಭಾರತ್' ಯೋಜನೆ.

...ಮೋದಿಯ ಕರೆಗೆ ಓಗೊಟ್ಟು ಪೊರಕೆ ಹಿಡಿದು ಪೋಸು ಕೊಡುತ್ತಿರುವವರ ...ನೋಡಿ ಅಳಬೇಕೋ ನಗಬೇಕೋ ಗೊತ್ತಾಗುತ್ತಿಲ್ಲ. ಕೇಂದ್ರದ ಹಿರಿಯ ...ಕಲ್‌ರಾಜ್ ಮಿಶ್ರ ತನ್ನ ಹವಾನಿಯಂತ್ರಿತ ಕಚೇರಿಗೆ ಪೊರಕೆ ತರಿಸಿಕೊಂಡು ...ಫೋಟೋ ತೆಗೆಸಿಕೊಂಡರು. ಆತನ ಜೊತೆ ಡಜನ್ ಅಧಿಕಾರಿಗಳೂ ...ಂ. ಮತ್ತೋರ್ವ ಮಂತ್ರಿ ಸ್ಮೃತಿ ಇರಾನಿ ಫಳಫಳನೆ ಹೊಳೆಯುವ ದಿರಿಸಿನಲ್ಲಿ ...ಹಿಡಿದು ಅಭಿನಯಿಸಿ, ತನ್ನ ಬೆಳ್ಳಿ ಪರದೆಯ ನಟನಾ ಕೌಶಲ್ಯವನ್ನು ...ಮ್ಮೆ ಪ್ರದರ್ಶಿಸಿದಳು. ಕನ್ನಡದ ಮಂತ್ರಿ ಅನಂತಕುಮಾರ್ 90 ಡಿಗ್ರಿ ...ವಾಗಿ ಪೊರಕೆ ಹಿಡಿದ ಫೋಟೋಗಳು ಪತ್ರಿಕೆಗಳಲ್ಲಿ ಅಚ್ಚಾಗಿ ಜನರಿಗೆ ...ಂಜನೆ ಒದಗಿಸಿದವು. ಹೀಗೆ ಪೋಸು ನೀಡುವವರ ಸರಣಿಯೇ ...ವಾಗಿದೆ.

...ಗೆ ಈ ಯೋಜನೆಗೆ ಹೆಚ್ಚಿನ ರಾಜಕೀಯ ಆಯಾಮವಿದೆಯೇ ಹೊರತು ...ಜಿಕ ಆಯಾಮ ಇಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿಲ್ಲ. ಯಾಕೆಂದರೆ ...ಹಾಗೂ ವರ್ಗ ವಿಭಜಿತ ಭಾರತದಲ್ಲಿ ಸ್ವಚ್ಛತೆ ಎಂಬುದು ಕೂಡ ಹೀಗೆ ...ತಗೊಂಡಿದೆ. ಈ ದೇಶದಲ್ಲಿ ಸ್ವಚ್ಛತೆಯ ತುರ್ತು ಅಗತ್ಯ ಇರುವುದು ...ದಲಿತರಿಗೆ ಮತ್ತು ಕೂಲಿ ಕಾರ್ಮಿಕ ವರ್ಗಗಳಿಗೆ. ಬಡ ಜನತೆ ವಾಸಿಸುವ ...ಗೇರಿ ಪ್ರದೇಶಗಳ ಸ್ಥಿತಿಗತಿಯ ಬಗ್ಗೆ ಹೇಳುವುದೇ ಬೇಡ. ತಲೆಯ ...ನ ಸೂರು, ಕುಡಿಯುವ ನೀರು, ಶೌಚ ವ್ಯವಸ್ಥೆ ಇತ್ಯಾದಿಗಳು ಇಂದಿಗೂ ...ಕುಸುಮವಾಗಿವೆ.

...ನ್ನು ಹಳ್ಳಿಗಾಡುಗಳ ಸ್ಥಿತಿಯಂತೂ ಹೇಳುವುದೇ ಬೇಡ. ಶೇಕಡ 70ರಷ್ಟು ...ದಿನ ಮಹಿಳೆಯರು ಇಂದಿಗೂ ಬಯಲು ಶೌಚವನ್ನೇ ಅವಲಂಬಿಸಿದ್ದಾರೆ.

...ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಂಡಿರುವುದಾದರೂ ಯಾರು? ...ಕುಮಾರಿಯಿಂದ ಹಿಡಿದು ಕಾಶ್ಮೀರದವರೆಗೂ ಇಡೀ ದೇಶದ ...ಬೀದಿಗಳನ್ನು ಗುಡಿಸಿ ಸ್ವಚ್ಛ ಮಾಡುತ್ತಿರುವವರು ಪರಿಶಿಷ್ಟ ಜಾತಿಗೆ ಸೇರಿದವರು ...ದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿ. ಹಾಗೆಯೇ ಈ ಸ್ವಚ್ಛತಾ ...ದಲ್ಲಿ ತೊಡಗಿರುವವರು ವಾಸಿಸುವುದು ಕೊಳಗೇರಿಗಳಲ್ಲೇ ಎಂಬುದು



...ಸಮಸ್ಯೆಯ ಮತ್ತೊಂದು ಆಯಾಮ. ಅಷ್ಟೂ ಸಾಲದೆಂಬಂತೆ ಮಲ ...ವ ಪದ್ಧತಿ ಇನ್ನೂ ಜೀವಂತವಾಗಿದ್ದು, ಮಲದ ಗುಂಡಿಗಳಲ್ಲಿ ಸಿಲುಕಿ ...ಕರು ಸಾಯುವ ಸುದ್ದಿಗಳೂ ಆಗಾಗ್ಗೆ ಮರುಕಳಿಸುತ್ತಲೇ ಇವೆ.

...ಸ್ವಚ್ಛತೆಯ ಸಮಸ್ಯೆಯ ನಿವಾರಣೆ ಎಂದರೆ ಇಂಥಾ ಜ್ವಲಂತ ಸಾಮಾಜಿಕ ...ಗಳನ್ನು ಆಮೂಲಾಗ್ರವಾಗಿ ಪರಿಹರಿಸಲು ಸಮಗ್ರ ಯೋಜನೆ ರೂಪಿಸುವುದು ...ಅಂಥಾ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಇಚ್ಛಾಶಕ್ತಿ ತೋರುವುದು. ...ದರೆ ಮೋದಿ ಸರ್ಕಾರದ ಇಂದಿನ ಪ್ರಯತ್ನದಲ್ಲಿ ಈ ಸಾಮಾಜಿಕ ...ಮವೂ ಇಲ್ಲ, ಇಚ್ಛಾಶಕ್ತಿ ಮೊದಲೇ ಇಲ್ಲ.

...ಗೆ ಸ್ವಚ್ ಭಾರತ್ ಎಂಬುದು ಒಂದು ಫೋಟೋ ಸೆಷನ್ ...ಕ್ರಮವಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚು.

...ಜಕೀಯ ಪ್ರೇರಿತವಾದ ಇಂಥಾ ಸರ್ಕಸ್‌ಗಳು ಎಷ್ಟು ನಿರರ್ಥಕ ಎಂಬುದು ...ರಾತ್ ಮಾದರಿಯಲ್ಲಿ ಈಗಾಗಲೇ ಸಾಬೀತಾಗಿದೆ. ಗುಜರಾತ್‌ನ ಪ್ರಮುಖ ...ಳ ಥಳಥಳಿಸುವ ರಸ್ತೆಗಳ ಹಿಂಬದಿಯ ದೃಶ್ಯಗಳು ನಮ್ಮ ಕಣ್ಣನ್ನು ...ತ್ತವೆ. ಇಡೀ ದೇಶದ ಕೊಳಗೇರಿವಾಸಿಗಳಲ್ಲಿ ಶೇಕಡ 9ರಷ್ಟು ಮಂದಿ ...ರಾತ್‌ನಲ್ಲಿದ್ದಾರೆ. ಅದರಲ್ಲೂ ಹೆಚ್ಚಿನವರು ಅಹಮದಾಬಾದ್ ಮತ್ತು ...ನಗರಗಳಲ್ಲೇ ಇದ್ದಾರೆ.

...ದ 7-8 ವರ್ಷಗಳಿಂದ ರಾಜಧಾನಿ ದೆಹಲಿಯ ನಗರಾಡಳಿತ ಬಿಜೆಪಿಯ ...ಲ್ಲೇ ಇದೆ. ಈ ದೆಹಲಿ ನಗರದ ಕಸದ ಸಮಸ್ಯೆಗೆ ಕುಖ್ಯಾತವಾಗಿದ್ದು ...ಗಳ ಉದ್ದಕ್ಕೂ ಕಸದ ಪರ್ವತಗಳನ್ನೇ ರಾಶಿ ಹಾಕಲಾಗಿದೆ. ಸಿಲಿಕಾನ್ ...ಸಿಟಿಯ ಬೆಂಗಳೂರಿಗೆ ಬಂದೊದಗಿರುವ ಸ್ಥಿತಿ ನಮ್ಮೆಲ್ಲರ ಕಣ್ಣೆದುರಿನಲ್ಲೇ ...ಳೆದ 5 ವರ್ಷಗಳಿಂದ ಬಿಬಿಎಂಪಿಯನ್ನು ಮೋದಿ ಶಿಷ್ಯರೇ ಆಳುತ್ತಿದ್ದಾರೆ, ...ಬಾರಿ ಗುಜರಾತ್ ಪ್ರವಾಸವನ್ನೂ ಮಾಡಿ ಮೋದಿ ಮಾದರಿಯನ್ನು ...ಬಂದಿದ್ದಾರೆ. ಅದರ ಪರಿಣಾಮವೇ ಇಂದಿನ ದುಸ್ಥಿತಿ.

...ನ್ನು ಕೈಗಾರಿಕೆಗಳಿಂದ ಆಗುತ್ತಿರುವ ಮಾಲಿನ್ಯ ವಾಹನಗಳಿಂದ ಆಗುತ್ತಿರುವ ...ಣ್ಯ ಇತ್ಯಾದಿಗಳ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು. ಮೋದಿ ...ದ ಗುಜರಾತ್‌ನಲ್ಲಂತೂ ಪರಿಸರ ರಕ್ಷಣೆ ಎಂಬುದು ಕೇವಲ ಕಾಗದ ...ಸಾಲುಗಳಷ್ಟೇ.

...ಗೆ ಸ್ವಚ್ಛತೆಗೆ ಸಂಬಂಧಿಸಿದ ಯಾವುದೇ ಮೂಲಭೂತ ಸಮಸ್ಯೆಯನ್ನೂ ...ರಿಸದೆ ಕೇವಲ ಪೊರಕೆ ಹಿಡಿದು ಪೋಸು ನೀಡಿದರೆ ಒಂದಷ್ಟು ...ಸು ಹೆಚ್ಚಾಗಬಹುದೇ ಹೊರತು ಸಮಸ್ಯೆಯಂತೂ ಬಗೆಹರಿಯುವುದಿಲ್ಲ. ...ಲವು ಸಂದರ್ಭಗಳಲ್ಲಿ ಎಲ್ಲರನ್ನೂ ಯಾಮಾರಿಸಬಹುದು ಮತ್ತು ಕೆಲವರನ್ನು ...ಲಕ್ಕೂ ಯಾಮಾರಿಸಬಹುದು. ಆದರೆ ಎಲ್ಲರನ್ನೂ ಎಲ್ಲಾ ಕಾಲಕ್ಕೂ ...ರಿಸುವುದು ಅಸಾಧ್ಯ!" ಎಂಬ ಅಬ್ರಹಾಂ ಲಿಂಕನ್‌ರ ಈ ಸುಪ್ರಸಿದ್ಧ ...ಗಳನ್ನು ಮೋದಿ ಮತ್ತು ಆತನ ಪಟಾಲಂ ನೆನಪಿನಲ್ಲಿಟ್ಟುಕೊಂಡರೆ ...

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅನಿತಕ್ಕನ ಮನಿಗೂ ರಾಧಕ್ಕನ ಮನಿಗೂ ವಾಕ್ ಮಾಡಿ ಸಾರ್!

ಥೂತ್ತೇರಿ ▸ ಯಾಹೂ

ಸಾಮಾನ್ಯ ಮನುಷ್ಯನ ಕಾಮವಾಂಛೆಯನ್ನರಿತಂತೆ ಮಾತನಾಡುತ್ತಿರುವ ಮಾತೆ ಮಹಾದೇವಿಯವರು ರಾಮಕಥಾ ಗಾಯಕಿಯ ರೋದನವನ್ನು ಕೇಳಿ "ಈ ದನಿಯಲ್ಲೇನೋ ಅಸಹಾಯಕ ನೋವಿನ ಛಾಯೆಯಿದೆ. ಆದ್ದರಿಂದ ಇದಕ್ಕೆ ಕಾರಣರಾದ ರಾಘವೇಶ್ವರ ಸ್ವಾಮಿಗಳನ್ನು ಅಗ್ನಿಪರೀಕ್ಷೆಗೆ ಒಳಪಡಿಸಿ ಸತ್ಯವನ್ನು ಪತ್ತೆ ಹಚ್ಚಬೇಕಿದೆ" ಎಂದು ಹೇಳಿದರಂತಲ್ಲಾ. ಇದೇ ಹೊತ್ತಿಗೆ ಪ್ರಮೀಳಾ ನೇಸರ್ಗಿ ಎಂಬ ಮಹಿಳಾ ಪರ ವಕೀಲೆ "ರಾಘವೇಶ್ವರರಿಗೆ ಕೆಟ್ಟ ಹೆಸರು ತರಲೆಂದು ಷಡ್ಯಂತ್ರ ಹೂಡಿರುವವರು ತೊಗಲು ವ್ಯಾಪಾರದವರು. ಆದ್ದರಿಂದ ಸರಿಯಾದ ತನಿಖೆ ಮಾಡಿ ತೊಗಲು ವ್ಯಾಪಾರದ ಬಣ್ಣ ಬಯಲಿಗೆಳೆಯಿರಿ" ಎಂದು ಬಿಟ್ಟಿದ್ದಾರಂತಲ್ಲಾ. ಇದನ್ನು ಕೇಳಿ ಸಿಟ್ಟಾಗಿರುವ ಸದರಿ ವ್ಯಾಪಾರದವರು "ಈ ಬಗ್ಗೆ ಮಾತನಾಡಲು ಹರಕುಬಾಯಿಯ ಮುದಿ ತೊಗಲಿಗೆ ಯಾವ ಅರ್ಹತೆಯೂ ಇಲ್ಲ. ಮೊದಲಿನಿಂದಲೂ ಸ್ತ್ರೀ ದ್ವೇಷಿಯಾದ ಈ ಮುದಿ ತೊಗಲು ಹೆಣ್ಣನ್ನ ಇಷ್ಟು ಕೀಳಾಗಿ ಪರಿಗಣಿಸಿ ಮಾತನಾಡುತ್ತಿರ ಬೇಕಾದರೆ ಒಂದೋ ಇದರ ತೊಗಲು ವ್ಯಾಪಾರದಲ್ಲಿ ತುಂಬ ಅನ್ಯಾಯವಾಗಿರ ಬೇಕು. ಅದಕ್ಕಿಂತ ಮುಖ್ಯವಾಗಿ ತೊಗಲು ವ್ಯಾಪಾರವೆಂದರೇನೆಂದು ಈ ಮುದಿ ತೊಗಲಿಗೆ ಮನವರಿಕೆ ಮಾಡಿ ಕೊಡಬೇಕಿದೆ. ತೊಗಲು ವ್ಯಾಪಾರವೆಂದರೆ ಸತ್ತ ಆಡು, ಕುರಿ, ದನದ ಚರ್ಮ ಸುಲಿದು ಮಾರುತ್ತಾರೆ. ಕೊಂಡವರು ಅದನ್ನ ಹದ ಮಾಡಿ ಮನುಷ್ಯನ ಜೀವನಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ತಯಾರಿಸುತ್ತಾರೆ. ಈ ಪೈಕಿ ಇಂತಹ ಚರ್ಮದಿಂದಲೇ ಶ್ರೇಷ್ಠ ವಾದ್ಯಗಳನ್ನ ತಯಾರಿಸುತ್ತಾರೆ. ಮಾರುತ್ತಾರೆ. ಇದು ತೊಗಲು ವ್ಯಾಪಾರ. ಈ ವೃತ್ತಿ ಮಾಡುವವರನ್ನು ಅವಮಾನಿಸಿರುವ ಈಕೆಗೆ ತಲೆಕೆಟ್ಟಿದೆ" ಎಂದರಂತಲ್ಲಾ, ಥೂತ್ತೇರಿ!

* * *

ಈ ಪ್ರಮೀಳಾ ಕುರಿತು ಚಿಂತಿಸುತ್ತಿರುವಾಗಲೇ, ವೇಶ್ಯಾವೃತ್ತಿಯ ಬಗರ್ ಹುಕುಂ ಕೃಷಿಯನ್ನು ನೋಡಲಾಗದ ಕೆಲವರು, "ಇದನ್ನು ಸಕ್ರಮಗೊಳಿಸಿದರೆ ಹೇಗೆ?" ಎಂದು ಸರಕಾರದ ಮೇಲೆ ಒತ್ತಡ ತರುತ್ತಿದ್ದಾರಂತಲ್ಲಾ. ಸದರಿ ವಿಷಯದಿಂದ ರೋಮಾಂಚನಗೊಂಡ ಟಿ.ವಿ. ಮಂದಿ ವೇಶ್ಯೆ ಸಹವಾಸ ಮಾಡಿದವರು ಮತ್ತು ಮಾಡದವರು ಹಾಗು ಆ ಕಸುಬಿನ ಬಗ್ಗೆ ಕುತೂಹಲಗೊಂಡವರು ಅಲ್ಲದೆ ಇದಕ್ಕೆ ಸಂಬಂಧಪಡದ ಸ್ವಾಮಿಯೊಬ್ಬರನ್ನು ಚರ್ಚೆಗೆ ಕರೆದು ಯಾವ ತೀರ್ಮಾನಕ್ಕೂ ಬರದೆ ಬರಖಾಸ್ತುಗೊಂಡರಂತಲ್ಲಾ. ಇದನ್ನು ನೋಡಿದ ಸೆಕ್ಸ್‌ವರ್ಕರ್‌ಗಳು "ನಮ್ಮನ್ನು ಬಿಟ್ಟು ಇವರನ್ನ ಯಾಕೆ ಕರೆದ್ರು?" ಎಂದು ಬೈಯ್ಯುವಾಗ, ಸೂಳೆ ಎಂಬ ಪದ ಸೇರಿಸಿ ಪಕಾರೆಂದು ನಕ್ಕರಂತಲ್ಲಾ. ಸ್ವಾಮೀಜಿ ಪ್ರಕಾರ ಇವರಿಗೆಲ್ಲ ಬದುಕಿನ ಆಧಾರ ಸಿಕ್ಕರೆ ಕೂಡಲೇ ನಿಲ್ಲಿಸುತ್ತಾರಂತೆ. ಮತ್ತೊಬ್ಬನ ಪ್ರಕಾರ ಇದು ಅನಾದಿಕಾಲದಿಂದಲೂ ಇದೆಯಂತೆ. ಇನ್ನೊಬ್ಬನ ಪ್ರಕಾರ ಇದು ಅತ್ಯಂತ ಅವಮಾನಕರ ವೃತ್ತಿಯಂತೆ. ಇದಕ್ಕೆ ಮಾನ್ಯತೆ ಕೊಟ್ಟು ಸಕ್ರಮಗೊಳಿಸಿದರೆ, ಊರೆಲ್ಲಾ ಮದುವೆ ಬಿಟ್ಟು ಸೂಳೆಯರಾಗುತ್ತಾರಂತೆ. ಇದೆಲ್ಲವನ್ನು ಮಾತನಾಡಬೇಕಿದ್ದವರು ಮಹಿಳೆಯರು. ಈ ನಾಡನ್ನಾಳಿದ ಶ್ರೀಕೃಷ್ಣದೇವರಾಯನ ಸಾಮ್ರಾಜ್ಯ ಪ್ರಪಂಚದ ಗಮನ ಸೆಳೆದಿತ್ತು. ಆತನಿಗೆ ಹನ್ನೊಂದು ಜನ ರಾಣಿ ವಾಸದ ಹೆಂಗಸರಲ್ಲದೆ ನೂರಾರು ಜನ ಇಟ್ಟುಕೊಂಡವರೇ ಇದ್ದರು. ಅರಮನೆಯ ಹಿಂಭಾಗಕ್ಕಿದ್ದ ಸೂಳೆಗೇರಿ ಪ್ರಪಂಚದಲ್ಲಿಯೇ ಹೆಸರು ಪಡೆದಿತ್ತು. ಏಕೆಂದರೆ, ಸೂಳೆಯರ ಮೇಲೆ ಹಾಕಿದ ಕರವಸೂಲಿಯಿಂದಲೇ ಸೈನಿಕರಿಗೆ ಸಂಬಳ ಕೊಡಲಾಗುತ್ತಿತ್ತು. ಆದರೆ ಇವತ್ತಿನ ಚರಿತ್ರೆಯಲ್ಲಿ ನಮ್ಮ ದುಡಿಮೆ ತಲೆಹಿಡುಕರು ಮತ್ತು ಪೊಲೀಸರ ಪಾಲಾಗುತ್ತಿದೆ. ಕೆಲವು ಪ್ರದೇಶದ ಚುನಾವಣಾ ಖರ್ಚಿಗೆ ಕಾಮಾಟಿಪುರದಿಂದ ಹಣ ಬಂದಿರುವುದಕ್ಕೆ ನಾವೇ ದಾಖಲೆ ಕೊಡುತ್ತೇವೆ. ಆದ್ದರಿಂದ ಕುರುಬರ ಹಕ್ಕಬುಕ್ಕರ ನಂತರ ರಾಜ್ಯಾಡಳಿತ ಹಿಡಿದಿರುವ ಸಿದ್ದರಾಮಯ್ಯ ನಮ್ಮ ಕಡೆಗೂ ನೋಡಬೇಕು" ಎಂದರಂತಲ್ಲಾ, ಥೂತ್ತೇರಿ!!



* * *

ಸರ್ಕಾರ ಬದಲಾದರೂ ಸರಕಾರದ ಕರ್ಮಚಾರಿಗಳು ಬದಲಾಗದೆ ಹಿಂದಿನ ಸರಕಾರವೇ ಮುಂದುವರಿದಂತೆ ಕಾಣುತ್ತಿರುವುದರಿಂದ ಕೆಂಡಮಂಡಲವಾಗಿರುವ ಕಾಗೋಡು ತಿಮ್ಮಪ್ಪ ಈಚೆಗೆ ಒಂದು ಒಳ್ಳೆಯ ಜೋಕು ಮಾಡಿದ್ದಾರಂತಲ್ಲಾ! ಅದೇನಪ್ಪಾ ಎಂದರೆ ಸದ್ಯದಲ್ಲಿ ಬಿಗಡಾಯಿಸಿಕೊಂಡು ಮತ್ತು ಹಕನಾಯಿಸಿಕೊಂಡಿರುವ ಜಾತಿಗಳ ನಾಶಕ್ಕೆ ವೀರಶೈವರು ಮುಂದಾಳತ್ವ ವಹಿಸಿ ಜಾತಿನಾಶ ಮಾಡಬೇಕೆಂದು ಜೋಕ್ ಮಾಡಿದ್ದಾರಂತಲ್ಲಾ. ಏಕೆಂದರೆ ಸಾವಿರಾರು ಮಠಗಳನ್ನು ಮಾಡಿಕೊಂಡು, ಬೇಕಿದ್ದರೆ ನೀವೂ ಮಠ ಮಾಡಿಕೊಂಡು ನಿಮ್ಮವರ ಸೇವೆ ಮಾಡಿ ಎಂಬ ಸಂದೇಶ ಬೀರುತ್ತಿರುವ ವೀರಶೈವರು ಜಾತಿ ನಾಶಕ್ಕೆ ಕೈಹಾಕುವುದೇ ಒಂದು ದುಸ್ಸಾಹಸದ ಸಂಗತಿ. ಅದಕ್ಕಿಂತಲೂ ತಮ್ಮ ಅಧಿಕಾರಕ್ಕಾಗಿ ಬಸವಣ್ಣನನ್ನು ಬಿಸಾಕಬಲ್ಲರು ಎಂಬುದು ಇತ್ತೀಚೆಗೆ ಸಾಬೀತಾಗಿ ಹೋಗಿದೆ. ಯಡಿಯೂರಪ್ಪನ ಪಟಾಲಂ ಚಡ್ಡಿ ತೊಟ್ಟು ದೊಣ್ಣೆ ಹಿಡಿದು ಬರುತ್ತಿರುವುದನ್ನು ನೋಡಿದರೆ ಬಸವ ತತ್ವವನ್ನು ಬಡಿದು ಬಿಸಾಕಿ ಬಂದವರಂತೆ ಕಾಣುತ್ತಾರೆ. ಪುರೋಹಿತಶಾಹಿ ಅಜೆಂಡಾವೇ ಜಾತಿಗಳ ಸಂಘಟನೆ. ಎಲ್ಲಾ ಜಾತಿಗಳ ತಲೆ ಮೇಲೆ ಕುಳಿತು ಶತಮಾನಗಳ ತನ್ನ ದಬ್ಬಾಳಿಕೆಯನ್ನು ಹೊಸ ಆವಿಷ್ಕಾರಗಳೊಂದಿಗೆ ಚಲಾಯಿಸುತ್ತಿರುವ ಈ ಸಮಯದಲ್ಲಿ, ಅದರ ದಾಸಾನುದಾಸರಾಗಿ ದುಡಿಯುತ್ತಿರುವ ವೀರಶೈವ ಮುಖಂಡರು, ಬಿಜೆಪಿಯನ್ನು ಬಿಸಾಕಿ ಬರುವುದೇ ಜಾತಿವಿನಾಶದ ಮೊದಲ ಹೆಜ್ಜೆಯಾಗಲಿದೆ. ಅವರೇನು ಬಸವಣ್ಣನ ವಚನ ಸಂಪುಟ ಬಿಟ್ಟು ಗೋಳವಲಕರನ ಚಿಂತನಗಂಗಾ ಓದುತ್ತಿರುವ ವೀರಶೈವ ಮುಖಂಡರು ಜಾತಿನಾಶಕ್ಕೆ ಕೈಹಾಕಬಲ್ಲರೆ. ಆದರೆ ವೀರಶೈವರನ್ನು ಕಂಡರಾಗದವರ ಹೇಳಿಕೆ ಪ್ರಕಾರ ಜಾತಿವಿನಾಶಕ್ಕೆ ವೀರಶೈವರು ಮುಂದಾಗುತ್ತಾರೆ. ಅದಕ್ಕಾಗಿ ಮುಖ್ಯಮಂತ್ರಿ ಪಟ್ಟ, ಕನಿಷ್ಠ ಹದಿನಾರು ಮಂತ್ರಿಗಳು ಮತ್ತು ಸರಕಾರದ ಮುಖ್ಯ ಭಾಗದಲ್ಲಿ ಜನಾಂಗದ ಅಧಿಕಾರಿಗಳಿದ್ದರೆ ಅಂದರೆ ಎಂದೆಂದೂ ಇದ್ದರೆ ಜಾತಿಗಳನ್ನು ಕರಗಿಸಬಲ್ಲರು ಎಂದರಲ್ಲಾ, ಥೂತ್ತೇರಿ!!!

* * *

ತಮ್ಮ ಸ್ವಸಾಮರ್ಥ್ಯದಿಂದಲೇ ಜೆಡಿಎಸ್‌ಗೆ ನಲವತ್ತು ಸೀಟು ತಂದುಕೊಟ್ಟು ಈಗ ಜಿಮ್ ಮಾಡುತ್ತಿರುವ ಕುಮಾರಣ್ಣನನ್ನ ಮಾತನಾಡಿಸಬೇಕೆನಿಸಿ ಫೋನ್ ಮಾಡಿದರೆ ರಿಂಗಾಯ್ತು,

ರಿಂಗ್ ಟೋನ್: 'ಟರ್‌ರ್... ಟರ್‌ರ್... ಟರ್‌ರ್....'

"ಹಲೋ ಯಾರ್ರಿ?"

"ಸಾರ್ ನಾನು ಯಾಹು."

"ಆಮೇಲೆ ಮಾಡಿ. ಈಗ ಜಿಮ್ ಮಾಡ್ತಾಯಿದ್ದಿನಿ."

"ಒಂದು ನಿಮಿಷ ಅಷ್ಟೆ ಸಾರ್. ಒಂದು ವಿನಂತಿ, ಜಿಮ್ ಜಾಸ್ತಿ ಮಾಡಬೇಡಿ."

"ಯಾಕ್ರಿ?"

"ನಿಮಗೆ ಬೈಪಾಸಾಗಿದೆ. ಆದ್ರಿಂದ ಈ ವಯಸಲ್ಲಿ ಬರಿ ವಾಕ್ ಮಾಡಿ ಸಾರ್."

"ಅದು ನನಿಗೂ ಗೊತ್ತು ಕಂಡ್ರಿ. ಟಿವಿಯವರು ಬಂದಿದ್ರಲ್ಲ ಅದ್ಕೆ ಸುಮ್ಮನೆ ವರ್ಕ್ ಮಾಡೋ ತರ ಮಾಡ್ತಾಯಿದ್ದಿನಿ."

"ಅಂಗಾದ್ರೆ ಸರಿ ಸಾರ್. ಜಿಮ್ಮಿಗಿಂತ್ಲೂ ಅನಿತಕ್ಕನ ಮನೆಯಿಂದ ರಾಧಕ್ಕನ ಮನೆವರಿಗೆ ವಾಕ್ ಮಾಡಿದ್ರೆ ಅದಕ್ಕಿಂತ ವ್ಯಾಯಾಮನೇ ಇಲ್ಲ ಸಾರ್."

"ರೀ, ನಾನು ವಾಕ್ ಮಾಡ್ತಾಯಿದ್ರೆ ಜನ ಬುಡ್ತರೇನ್ರಿ? ಮುತ್ತಿಕೊಂಡು ಟ್ರಾಫಿಕ್ ಜಾಮ್ ಮಾಡ್ತರೆ ಅಷ್ಟೆ."

"ಬುರ್ಕಾ ಹಾಯ್ಕಂಡು ಮಾಡಿ ಸಾರ್. ಆ ಜಮೀರ್‌ಗೇಳಿದ್ರೆ ಕಂಟೂರ್ನಮೆಂಟಲಿ ನಿಮ್ಮ ಸೈಜಿನ ಸಾಬರೆಂಗಸ ಬುರ್ಕಾ ತಂದುಕೊಡ್ತನೆ."

"ಬುರ್ಕಾ ಹಾಯ್ಕಂಡು ವಾಕ್ ಮಾಡೋ ಅಂತ ಹಣೆಬರ ನನಿಗೇನಿಲ್ಲ. ವಾಕ್ ಮಾಡಕ್ಕೆ ಬೇಕಾದಷ್ಟು ರೆಸಾರ್ಟ್‌ಗಳವೆ. ಆದ್ರೆ ವಾಕ್ ಮಾಡಕ್ಕೂ ಬೇಜಾರು."

"ಜೆಡಿಎಸ್‌ನ ತಿರಗ ಯಂಗೆ ಕಟ್ಟದು ಅಂತ ಯೋಚನೆ ಮಾಡಿದ್ರೆ ದಾರಿ ಸಿಗ್ತದೆ ಸಾರ್. ಈಗ ನಲವತ್ತು ಸೀಟು ಬಂದದೆ. ಎಂಬತ್ತು ಸೀಟ್ ಗೆಲ್ಲಕ್ಕೆ ಏನು ಮಾಡಬೇಕು ಅಂತ ಪ್ಲಾನ್ ಮಾಡ್ತ ವಾಕ್ ಮಾಡಿ ಸಾರ್."

"ಬಹುಮತ ಪಡಿತಕ್ಕಂತ ಒಂದು ಕ್ಯಲಸಕ್ಕೆ ಯೋಚನೆ ಮಾಡಬೇಕಾಗಿಲ್ಲ ಕಂಡ್ರಿ. ದುಡ್ಡಿದ್ರೆ ಬಹುಮತ ಪಡಕೊಬಹುದು."

"ಅದ್ಯಲ್ಲ ಸುಳ್ಳು ಸಾರ್. ಯಡಿಯೂರಪ್ಪನತ್ರನೂ ದುಡ್ಡಿತ್ತು. ಆದ್ರೂ ಏನಾಯ್ತು?"

"ಬಿಜೆಪಿಗೆ ಮುಕ್ಕಾಲು ಭಾಗ ಹೋಯ್ತು. ಯಡಿಯೂರಪ್ಪನಿಗೆ ಕಾಲು ಭಾಗ ಬಂತು. ಆದ್ರೆ ನಮಗೆ ನಲವತ್ತು ಸೀಟು ಬಂತಲ್ಲ ಹೇಳಿ."

"ನಿಜವಾಗ್ಲು ಇದು ದೊಡ್ಡ ಸಾಧನೆ ಸಾರ್. ಆಮೇಲೆ ಇದೊಂದು ಅಂತಿಮ ಘಟ್ಟ. ಆ ಕಾಲದಲ್ಲಿ ದೇವರಾಜ ಅರಸು ವಿರುದ್ಧ ಹೋರಾಡಿದ ದೇವೇಗೌಡ್ರಿಗೂ ನಲವತ್ತು ಸೀಟು. ಈಗ ಸಿದ್ದಣ್ಣನ ಎದ್ರಿಗೆ ಹೋರಾಡಿದ ನಿಮಗೂ ನಲವತ್ತು ಸೀಟು ಬತ್ತಲ್ಲ ಸಾರ್."

"ರೀ, ಏನು ಪತ್ರಿಕೆಯವರ್ರಿ ನೀವ್ರ? ಸರಿಯಾಗಿ ಲೆಕ್ಕ ಹಾಕ್ರಿ. ಸಿದ್ದರಾಮಯ್ಯನಿಗೆ ಬಂದ ಸೀಟು ಕಾಂಗ್ರೆಸ್ಸಿನವು, ಆದ್ರೆ ನನ್ನ ನಲವತ್ತು ಸೀಟು ಪೂರಾ ನನ್ನವು."

"ಅದೇ ಸಾರ್ ನಾನೇಳಿದ್ದು. ಕರ್ನಾಟಕದಲ್ಲಿ ನಿಮ್ಮ ಬಗ್ಗೆ ಜನಾಭಿಪ್ರಾಯದ ಸೀಟು ನಲವತ್ತು ಮಾತ್ರ ಬರ್ತವೆ. ಇಲ್ಲ ಅಂದ್ರೆ ಇಪ್ಪತ್ತೆಂಟು ಬತ್ತವೆ. ಈ ಬಗ್ಗೆ ಯೋಚನೆ ಮಾಡಿ ಪಾರ್ಟಿ ಕಟ್ಟಿ ಸಾರ್."

"ಪಾರ್ಟಿ ನಾನೊಬ್ಬನೆ ಕಟ್ಟಕ್ಕಾಗಲ್ಲ ಕಂಡ್ರಿ."

"ಮತ್ತೆ ಇನ್ಯಾರು ಕಟ್ಟಬೇಕು ಸಾರ್."

"ಎಲ್ರೂ ಸೇರಿ ಕಟ್ಟಬೇಕು."

"ಎಲ್ರೂ ಯಾಕ್ ಸೇರ್ತಾರೆ ಸಾರ್?"

"ಅಧಿಕಾರ ಬೇಕು ಅಂದ್ರೆ ಸೇರಿ ಕಟ್ಟಬೇಕು."


"ಸಾರ್ ಅಧಿಕಾರ ನಿಮಗಷ್ಟೆ ಅಲ್ಲವಾ ಸಾರ್ ದಕ್ಕದು. ಅಧಿಕಾರ ಇಲ್ದೆ ಹ್ಯಂಗೆ ರಾಜಕಾರಣ ಮಾಡದು ಅಂತ ದೇವೇಗೌಡ್ರಿಂದ ಕಲೀರಿ ಸಾರ್. ಅವರ ಅರ್ಧ ಶತಮಾನದ ರಾಜಕಾರಣದಲ್ಲಿ ಮೂರೂವರೆ ವರ್ಷ ಹಿಡಬ್ಲೂಡಿ ಮಂತ್ರಿ, 18 ತಿಂಗಳು ಮುಖ್ಯಮಂತ್ರಿ, 10 ತಿಂಗಳು ಪ್ರಧಾನಿಯಾಗಿದ್ರು. ಆದ್ರು, ಎಷ್ಟು ಆತ್ಮವಿಶ್ವಾಸದಲ್ಲಿ ರಾಜಕಾರಣ ಮಾಡ್ತಾರೆ ನೋಡಿದ್ದೀರಾ?"

"ಅದು ನನ್ನ ಕೈಲಾಗಲ್ಲ ಕಂಡ್ರಿ."

"ಥೂತ್ತೇರಿ!!!"

ಕಾರವಾರ: ಪ್ರವಾಸೋದ್ಯಮ ದೊರೆಗಳಿಗೆ ಬಡ ಬೆಸ್ತರ ಗುಡಿಸಲು ಬಲಿ





ಕಾರವಾರದ ಕಡಲ ತಡಿಯ ಬಡ ಬೆಸ್ತರ ಗುಡಿಸಲುಗಳ ಮೇಲೆ ಇದ್ದಕ್ಕಿದ್ದಂತೆ ಆಳುವ ಖೂಳರ ಕೆಂಗಣ್ಣು ಬೀಳಲು ಕಾರಣವಾದರೂ ಏನು? ಪ್ರವಾಸೋದ್ಯಮದ ಥಳುಕಿನ ಅಂದ-ಚೆಂದಕ್ಕೆ ಶ್ರಮ ಪರಿಸ್ಥಿತಿಯ ಮೀನುಗಾರರ ಬದುಕಿನ ನೆಲೆಗಳು ಕಪ್ಪು ಚುಕ್ಕೆಯಂತೆ ಕಂಡವಾ? ಅನೈತಿಕ ಚಟುವಟಿಕೆ ನೆಪದಲ್ಲಿ ಮೀನುಗಾರಿಕಾ ಶೆಡ್‌ಗಳ ನಿರ್ನಾಮಕ್ಕೆ ಹೊರಟಿರುವ ಜಿಲ್ಲಾಡಳಿತದ ಹಿಕಮತ್ತಿನ ಹಿಂದೆ ರೆಸಾರ್ಟ್ ದೊರೆಗಳ ಹಿತಾಸಕ್ತಿ ಅಡಗಿದೆಯಾ? ನೆಗಡಿಯೆಂದ ಅಮಾಯಕರ ಮೂಗನ್ನೇ ಕೊಯ್ಯಲು ಮುಂದಾಗಿರುವ ಜಿಲ್ಲಾಡಳಿತ ಅನೈತಿಕತೆ ನಿಯಂತ್ರಿಸಲಾಗದಷ್ಟು ನಿಸ್ಸಾಯಕ ವಾಗಿದೆಯಾ? ಪ್ರವಾಸೋದ್ಯಮ ಮಂತ್ರಿಯೂ ಆಗಿರುವ ಜಿಲ್ಲಾ ಉಸ್ತುವಾರಿ ಆರ್.ವಿ. ದೇಶಪಾಂಡೆ ಕಾರವಾರದ ಬೀಚ್ 'ಕ್ಲೀನ್' ಮಾಡಿಸಿ ಕೊಡುವೆನಾಗಿ ಯಾವುದಾದರೂ ರೆಸಾರ್ಟ್ ರಾಜನಿಗೆ ಮಾತು ಕೊಟ್ಟಿದ್ದಾರಾ?

ಇಂಥ ಸಂಶಯದ ಸುತ್ತಲೀಗ ಜಿಲ್ಲೆಯಾದ್ಯಂತ ಚರ್ಚೆಗಳು ಜೋರಾಗಿ ನಡೆಯುತ್ತಿದೆ. ಕಾರವಾರದ ಕಡಲ ದಂಡೆ ಗುಂಟ ಅನಾದಿಕಾಲದಿಂದ ಇರುವ ಸುಮಾರು 50 ಗುಡಿಸಲುಗಳ ಬಡ ಮೀನುಗಾರರು ಬೀದಿಗೆ ಬೀಳುವ ಭಯದಿಂದ ಕಂಗಾಲಾಗಿರುವುದೇ ಇದಕ್ಕೆ ಕಾರಣ. ಕಾಜುಬಾಗದ ಸಾಗರ ಮತ್ಸ್ಯಾಲಯದ ಹತ್ತಿರ, ಬಿಲ್ಟ್ ಸರ್ಕಲ್ ಸನಿಹ ಮತ್ತು ಪಾಲಿಟೆಕ್ನಿಕ್ ಕಾಲೇಜಿನ ಹಿಂದುಗಡೆಯ ಗುಡಿಸಲುಗಳನ್ನು ಖಾಲಿ ಮಾಡಿಹೋಗು ವಂತೆ ಮೀನುಗಾರರಿಗೆ ಕಾರವಾರದ ತಹಸೀಲ್ದಾರ್ ಸಾಹೇಬರು ನೋಟಿಸು ಕಳಿಸಿದ್ದಾರೆ. ಇದಕ್ಕೆ ಹೈಕೋರ್ಟ್ ಅತಿಕ್ರಮಣ ತೆರವುಗೊಳಿಸಲು ಆದೇಶಿರುವ ಸಬೂಬು ಕೊಡಲಾಗಿದೆ. ಮತ್ತೊಂದೆಡೆ ಜಿಲ್ಲಾಡಳಿತದ ಪ್ರಭೃತಿಗಳು ಆ ಮೀನುಗಾರಿಕಾ ಶೆಡ್‌ಗಳಲ್ಲಿ ಅನೈತಿಕ ಕೆಲಸಗಳು ಆಗುತ್ತಿರುವುದರಿಂದ ತೆರವು ಕಾರ್ಯಾಚರಣೆ ನಡೆಸಬೇಕಾಗಿದೆ ಎನ್ನುತ್ತಿದ್ದಾರೆ.


ಆದರೆ ವಾಸ್ತವವೇ ಬೇರೆ. ಕೇರಳ ಮತ್ತು ಗೋವಾದ ಮಾದರಿಯಲ್ಲಿ ಕರ್ನಾಟಕದ ಕಡಲ ಕಿನಾರೆಯಲ್ಲಿ ಪ್ರವಾಸೋದ್ಯಮ ಬೆಳೆಸಲು ಸರ್ಕಾರ ಪಂಡಿತರು ಸ್ಕೆಚ್ ಹಾಕಿಕೊಂಡಿದ್ದಾರೆ. ಗೋವಾ-ಕೇರಳದಂತೆ ನಮಗೂ ಸಿಆರ್‌ಝಡ್ ನಿಯಮದಲ್ಲಿ ರಿಯಾಯಿತಿ ತೋರಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಕೇಂದ್ರ ಪರಿಸರ ಇಲಾಖೆ ತಂಡ ಕಾರವಾರಕ್ಕೆ ಬಂದು ಪರಿಶೀಲಿಸಿ ಹೋಗಿದೆ. ಸಿಆರ್‌ಝಡ್ ಕಾನೂನು ಸಡಿಲಗೊಂಡರೆ ಕಾರವಾರ ಬೀಚಲ್ಲಿ ರೆಸಾರ್ಟ್ ಮತ್ತಿತರ ಪ್ರವಾಸೋದ್ಯಮಕ್ಕೆ ಅನುಕೂಲವಾಗಲಿದೆ. ಹಾಗಾಗಿ ಮೀನುಗಾರರ ಗುಡಿಸಲುಗಳು ಪ್ರವಾಸೋದ್ಯಮ 'ಸೀತಿ'ಗೆ ಅಸಹ್ಯವಾಗಿ ಕಾಣಿಸಿದೆ; ಮೀನುಗಾರರ ಗುಡಿಸಲು ಎತ್ತಂಗಡಿಗೆ ಹುನ್ನಾರ ಹೆಣೆಯಲಾಗಿದೆ.

ಗೋವಾ ಅಥವಾ ಕೇರಳದಲ್ಲಿ ಮೀನುಗಾರರಿಗೆ ತೊಂದರೆಯಾಗದಂತೆ, ಅವರ ಕುಲಕಸುಬಿಗೆ ಧಕ್ಕೆ ಬರದಂತೆ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲಾಗಿದೆ. ಇದು ಜಿಲ್ಲೆಯವರೇ ಆಗಿರುವ ಪ್ರವಾಸೋದ್ಯಮ ಮಂತ್ರಿ ದೇಶಪಾಂಡೆ ಸಾಹೇಬರಿಗೂ ಅರ್ಥವಾಗಿಲ್ಲ. ತನ್ನ ರಾಜಕೀಯ ಜೀವನದ ಮೂರು ದಶಕದಲ್ಲಿ ಬಂಡವಾಳಶಾಹಿ ಉದ್ಯಮಪತಿಗಳ ಸನ್ಮಿತ್ರನಾಗಿ ಅವತರಿಸಿರುವ ದೇಶಪಾಂಡೆಗೆ ಈ ಇಳಿವಯಸ್ಸಿನಲ್ಲಿ ಅಸಹಾಯಕ ಮೀನುಗಾರರ ಸಂಕಷ್ಟ ಅರಿವಾಗುವುದೂ ಅಸಾಧ್ಯ ಬಿಡಿ. ತಲತಲಾಂತರದಿಂದ ಕಡಲ ದಂಡೆಯನ್ನೇ ನಂಬಿ ಬದುಕುತ್ತಿರುವ ಮೀನುಗಾರರನ್ನು ಏಕಾಏಕಿ ಒಕ್ಕಲೆಬ್ಬಿಸಿದರೆ ಅವರ ಪಾಡು ನೀರಿಂದ ತೆಗೆದ ಮೀನನಂತಾಗುತ್ತದೆ!

ಬದಲಿ ವ್ಯವಸ್ಥೆ ಮಾಡದೆ ಮೀನುಗಾರರ ಗುಡಿಸಲುಗಳನ್ನು ಖಾಲಿ ಮಾಡಲು ಶಸ್ತ್ರಸನ್ನದ್ಧವಾಗಿರುವ ಜಿಲ್ಲಾಡಳಿತ ಕೊಟ್ಟಿರುವ ನೋಟಿಸೇ ವಿಚಿತ್ರವಾಗಿದೆ. ಇದರಲ್ಲಿ ಬೆಸ್ತರು 1 ಗುಂಟೆಯಿಂದ 7 ಗುಂಟೆ ತನಕ ಅತಿಕ್ರಮಣ ಮಾಡಿದ್ದಾರೆಂದು ಹೇಳಲಾಗಿದೆ. ವಾಸ್ತವಿಕವಾಗಿ 20 ಅಡಿ ಉದ್ದ, 15 ಅಡಿ ಅಗಲದ ಶೆಡ್‌ಗಳನ್ನು ನಿರ್ಮಿಸಿಕೊಂಡಿರುವ ಬೆಸ್ತರು ಅದರಲ್ಲಿ ತಮ್ಮ ದೋಣಿ, ಬಲೆ ಇಟ್ಟುಕೊಳ್ಳುತ್ತಿದ್ದಾರೆ; ಮೀನಿಗೆ ಉಪ್ಪು ಹಾಕಿ ಒಣಗಿಸಲು ಬಳಸುತ್ತಿದ್ದಾರೆ. ಫಿಶಿಂಗ್ ಇಲ್ಲದ ಮಳೆಗಾಲದಲ್ಲಿ ಈ ಒಣ ಮೀನು ಮಾರಾಟವೇ ಬೆಸ್ತರಿಗೆ ಜೀವನಾಧಾರ. ಮಹತ್ವದ ಸಂಗತಿಯೆಂದರೆ, ಮೀನುಗಾರರ ತಾತ್ಕಾಲಿಕ ಗುಡಿಸಲುಗಳಿರುವ ಜಾಗ ಅತಿಕ್ರಮಣವೇ ಅಲ್ಲ. ಆ ಜಾಗ ಸಮುದ್ರ ಹೊರೆದು ಬಂದ (ಇಳಿತ-ಭರತದಿಂದ ಪುನರ್ ಸೃಷ್ಟಿಯಾದ) ಜಾಗ! ಹಾಗೆಯೇ ಅಧಿಕಾರಿಗಳು ಮತ್ತು ಆಳುವ ಪುಢಾರಿಗಳಿಗೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನ ತೀರ್ಪು ಅರ್ಥೈಸಲಿಕ್ಕೆ ಸಾಧ್ಯವಾಗದಿರುವುದು ನಾಚಿಕೆಗೇಡು.

ಹೈಕೋರ್ಟ್ ಅತಿಕ್ರಮಣ ತೆರವುಗೊಳಿಸುವಂತೆ ಒಂದು ತೀರ್ಪು ನೀಡಿದೆ. ನಗರ ಪ್ರದೇಶದ ಕಂದಾಯ-ಅರಣ್ಯ ಭೂಮಿ ಅತಿಕ್ರಮಣ ಅಪರಾಧ ಅನ್ನುತ್ತದೆ ಕಾನೂನು. ಹಾಗೆಯೇ ಬದುಕುವ ಹಕ್ಕಿನಡಿ ಅತಿಕ್ರಮಣ ಸೂರಿಗಾಗಿ ಮಾಡಿದಿದ್ದರೆ, ಅದು ಸಕ್ರಮವಾಗುವ ಅನುಕೂಲತೆಯೂ ಇದೆ. 1997ರಲ್ಲೇ ಸುಪ್ರೀಂಕೋರ್ಟ್ ಮೀನುಗಾರಿಕೆ ಮೀನುಗಾರರ ಸಾಂಪ್ರದಾಯಿಕ ಮೂಲ ಹಕ್ಕೆಂದು ಹೇಳಿದೆ. ಅಷ್ಟೇ ಅಲ್ಲ, ಸಮುದ್ರ ಮತ್ತು ನದಿ ದಡದಲ್ಲಿ ಪಾರಂಪರಿಕವಾಗಿ ಮೀನುಗಾರಿಕೆ ಅಥವಾ ಉಪಕಸುಬು ನಡೆಸಿಕೊಂಡು ಬರಲಾಗಿರುವ ಸ್ಥಳಗಳಿಂದ ಮೂಲ ನಿವಾಸಿಗಳನ್ನು ಒಕ್ಕಲೆಬ್ಬಿಸಬಾರದೆಂದು ಕಟ್ಟುನಿಟ್ಟಾಗಿ ಹೇಳಿದೆ. ಈ ತೀರ್ಪಿನ ಹಿನ್ನೆಲೆಯಲ್ಲಿ ಯೋಚಿಸಿದರೆ ಜಿಲ್ಲಾಡಳಿತ ಕಾರವಾರದ ಸಮುದ್ರ ದಂಡೆಯ ನಿವಾಸಿಗಳನ್ನು ಹೊಡೆದೋಡಿಸಿದರೆ ಅದು ಸ್ಪಷ್ಟವಾಗಿ ಸುಪ್ರೀಂ ಆದೇಶದ ಉಲ್ಲಂಘನೆ ಆಗುತ್ತದೆ! ಹೀಗಿರುವಾಗ ಕಂದಾಯ ಮತ್ತು ಅರಣ್ಯ ಭೂಮಿ ಅತಿಕ್ರಮಣದಾರರ ಲಕ್ಷಿಸದೆ ಹೈಕೋರ್ಟ್ ಕೊಟ್ಟಿರುವ ತೀರ್ಪನ್ನು ಕಡಲ ತಡಿಯ ಬಡ ಬೆಸ್ತರ ಜೀವನಾಧಾರ ಕಸುಬಿನ ಶೆಡ್‌ಗಳಿಗೆ ಜಿಲ್ಲಾಡಳಿತಗಾರರು ಅನ್ವಯಿಸುತ್ತಿರುವುದು ಮೂರ್ಖತನವೇ ಸರಿ!

ಕಾರವಾರದ ರವೀಂದ್ರನಾಥ ಟ್ಯಾಗೂರ್ ಕಡಲ ತೀರದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ನಿರಂತರವಾಗಿ ನಡೆಯುತ್ತಿ[...] ಮಳೆಗಾಲದ ಒಂದೆರಡು ತಿಂಗಳು ಬಿಟ್ಟರೆ ಉಳಿದ[...] ವರ್ಷ ಮೀನುಗಾರಿಕೆ ಚಟುವಟಿಕೆ ಬೀಚಲ್ಲಿ ಸಾಗಿರುತ್[...] ಹೀಗಾಗಿ ಬೆಸ್ತರಿಗೆ ಚಳಿ, ಗಾಳಿ, ಮಳೆ ಮತ್ತು ಬಿಸಿಲಿನಿ[...] ಬಚಾವಾಗಲು ಶೆಡ್‌ಗಳು ಅನಿವಾರ್ಯ. ಮೀನುಗಾರ[...] ತೆಂಗಿನ ಗರಿಗಳ ತಾತ್ಕಾಲಿಕ ಶೆಡ್ ಕಟ್ಟಿಕೊಂಡಿದ್ದಾರೆ. ಅದ[...] ವಿಶ್ರಾಂತಿ ಪಡೆಯುತ್ತಾರೆ; ಬಲೆ-ದೋಣಿ ರಕ್ಷಿಸಿಡುತ್[...] ಒಣ ಮೀನು-ಹಸಿ ಮೀನಿನ ಸಂಸ್ಕರಣಾ ನಡೆಸುತ್[...] ಕಾರವಾರ ಮತ್ತದರ ಸುತ್ತಲಿನ ಒಣಗಾ, ಚೆಂಡಿಯ[...] ಅರ್ಗಾ, ಕೋಡಾರ, ಅಂಬೆಕೋಡಾರ, ದೇವಬಾಗ್ ಮ[...] ಮಾಜಾಳಿ ಸಾಂಪ್ರದಾಯಿಕ ಮೀನುಗಾರಿ[...] ಮೀಸಲಾಗಿದ್ದವು.



ಯಾವಾಗ ಸೀ-ಬರ್ಡ್ ಹೆಮ[...] ಕಾರವಾರಕ್ಕೆ ವಕ್ಕರಿಸಿತೋ ಆಗ ಎರ[...] ಮೂರು ಕಡಲ ತಡಿ ಬಿಟ್ಟು ಉಳಿದೆಲ್ಲ[...] ಮೀನುಗಾರರ ಕೈತಪ್ಪಿ ಹೋದವು. ಬಹು[...] ಬೆಸ್ತರು ಬೀದಿ ಪಾಲಾದರು. ಇರುವ ಕಾರವ[...] ದೇವಬಾಗ ಮತ್ತು ಮಾಜಾಳಿ ಕಡಲತಡಿಯ[...] ಹೊಸ ಬದುಕು ಕಂಡುಕೊಳ್ಳ[...] ತಿಣುಕಾಡಿದರು. ಈಗ ಕಾರವಾರ ಬ[...] ನಿಂದಲೂ ಸೌಂದರ್ಯೀಕರಣ, ನೈತಿ[...] ಪ್ರವಾಸೋದ್ಯಮದ ನೆಪದಿಂದ ಬೆ[...] ಒಕ್ಕಲೆಬ್ಬಿಸುವ ಸಂಚು ನಡೆಯುತ್[...] ಮೀನುಗಾರರ ಬದುಕು ಮತ್ತು ಸ[...] ಬೀಚಲ್ಲೇ! ಶೈಕ್ಷಣಿಕ-ಆರ್ಥಿಕ-ಸಾಮಾಜಿಕ ವ[...] ರಾಜಕೀಯವಾಗಿ ತೀರಾ ಹಿಂದುಳಿದಿರ[...] ಉತ್ತರ ಕನ್ನಡದ ಮೀನುಗಾರರಿಗೆ ಮೀನುಗಾರಿಕೆ ಬಿ[...] ಬೇರೆ ಉದ್ಯೋಗ ಕಷ್ಟವಾಗಿದೆ.

ಇದು ಜಿಲ್ಲಾಡಳಿತಕ್ಕೆ ಅರ್ಥವಾಗದಿರುವುದು ದುರ[...] ಹಾಗೊಮ್ಮೆ ಹಠದಿಂದ ಆಳುವವರು ಕಾರವಾರ ಕ[...] ತೀರದ ಗುಡಿಸಲು ಮುರಿದು ಹಾಕಿದರೆ ಸಾವಿರ[...] ಮೀನುಗಾರ ಕುಟುಂಬಗಳು ಪ್ರತ್ಯಕ್ಷ-ಪರೋಕ್ಷವಾ[...] ನಿರ್ಗತಿಕವಾಗುತ್ತವೆ. ಈ ಭೀತಿಯಿಂದ ಬೆಸ್ತರು ಪ್ರತಿಭ[...] ಹೋರಾಟಕ್ಕೆ ಇಳಿದಿದ್ದಾರೆ. ತಮ್ಮ ತಂಟೆಗೆ ಸುಖಾಸುಮ[...] ಬರದಂತೆ ಬೇಡುತ್ತಿದ್ದಾರೆ. ಮೊನ್ನೆ ತಮ್ಮ ಮೀನುಗಾ[...] ಸಲಕರಣೆ ಡಿಸಿ ಕಚೇರಿಯ ಮುಂದಿಟ್ಟು 'ವಿಶಿಷ್ಟ' ರೀತಿ[...] ಪ್ರತಿಭಟನೆ ಮಾಡಿದ್ದಾರೆ; ಒಕ್ಕಲೆಬ್ಬಿಸದಂತೆ ಅಂಗಲಾಚಿದ[...] ಪೊಲೀಸ್ ಬಲ ಬಳಸಿ ಗುಡಿಸಲುಗಳ ಮೇಲೆ ಮುಗಿಬ[...] ತಿರುಗಿ ಬೀಳುವ ಎಚ್ಚರಿಕೆಯೂ ಕೊಟ್ಟಿದ್ದಾರೆ.

ಹಲವು ಸರ್ಕಾರಿ ಯೋಜನೆಗಳ ದಾಳಿಯಿ[...] ನಿರಾಶ್ರಿತರ ಡೇರೆಯಂತಾಗಿರುವ ಉತ್ತರ ಕನ್ನ[...] ಕರಾವಳಿಯನ್ನೀಗ ಪ್ರವಾಸೋದ್ಯಮದ ಗುಮ್ಮ ಕಾಡು[...] ಉಳ್ಳವರ ಖುಷಿಗಾಗಿ ಸಾಂಪ್ರದಾಯಿಕ ಮೀನುಗಾ[...] ಕುಲಕಸುಬಿಗೇ ಕತ್ತರಿ ಹಾಕಲು ಆಳುವ ವ[...] ಹವಣಿಸುತ್ತಿದೆ. ನಿಸರ್ಗ ಸಹಜವಾದ, ಸಾವಿರಾರು ಮೀ[...] ಗಾರ ಕುಟುಂಬಕ್ಕೆ ಜೀವನಾಧಾರವಾದ ಸಾಂಪ್ರದಾ[...] ಮೀನುಗಾರಿಕೆ ಉಳಿಸುವುದು ಸರ್ಕಾರದ ತುತ[...] ಕೆಲಸವಾಗಬೇಕಿತ್ತು. ಆದರೆ ಮೀನುಗಾರರನ್ನು ಕ[...] ತಡಿಯಿಂದ ಓಡಿಸಲು ಸರ್ಕಾರಿ ಮಂದಿ ವ್ಯಾಮೋ[...] ಹಿಡಿದಿರುವುದು ವಿಪರ್ಯಾಸವೇ ಸರಿ!!

ಬದುಕು ಕಳೆದುಕೊಳ್ಳುವ ಆತಂಕದಲ್ಲಿ[...] ಮೀನುಗಾರರು ಕೆರಳುವ ಮೊದಲೇ ಜಿಲ್ಲಾಡ[...] ಎಚ್ಚೆತ್ತುಕೊಂಡೀತಾ? ಜಿಲ್ಲಾ ಮಂತ್ರಿ ದೇಶಪಾ[...] ಬೆಂಗಳೂರು-ದಿಲ್ಲಿ ರಾಜಕೀಯ, ಮಗನ ಪುನರ್ವ[...] ಕಿತಾಪತಿ ಕಾರ್ಯಾಚರಣೆಗೆ ಕೊಂಚ ವಿರಾಮ ಕೊ[...] ಕಾರವಾರದ ಪಾಪದ ಮೀನುಗಾರರತ್ತ ದೃಷ್ಟಿ ಹರಿಸುವ[...]

● ನಹು[...]

ಅನೈತಿಕತೆ ಸಬೂಬು!!

ಕಾರವಾರ ಕಡಲ ತೀರದಲ್ಲಿರುವ ಮೀನುಗಾರರ ತಾತ್ಕಾಲಿಕ ಶೆಡ್‌ಗಳ ತೆರವುಗೊಳಿಸುವಿಕೆಗೆ ಜಿಲ್ಲಾಡಳಿತ ನೀಡುತ್ತಿರುವ ಕಾರಣಕ್ಕೆ ತಾಳ-ಮೇಳವೇ ಇಲ್ಲ. ಅತಿಕ್ರಮಣ ತೆರವುಗೊಳಿಸುವ ಕಟ್ಟುನಿಟ್ಟಿನ ಕಾನೂನಿನಂತೆ ಕಡಲ ದಂಡೆಯ ಗುಡಿಸಲುಗಳನ್ನು ಖಾಲಿ ಮಾಡಬೇಕಾಗಿದೆ ಎಂದು ಹೇಳುವ ಜಿಲ್ಲಾಡಳಿತದ ಸಾಹೇಬರುಗಳು ಮರುಕ್ಷಣವೇ ಆ ಗುಡಿಸಲುಗಳಲ್ಲಿ ಅಕ್ರಮ-ಅನೈತಿಕ-ಚಟುವಟಿಕೆ ನಡೆಯುತ್ತಿರುವುದರಿಂದ ಎತ್ತಂಗಡಿಗೆ ರೆಡಿಯಾಗಿದ್ದೇವೆ ಎನ್ನುತ್ತಾರೆ! ಇದರಲ್ಲಿ ಖರೆ ಯಾವುದು?

ಎರಡೂ ಸುಳ್ಳು ಅಂತನ್ನಿಸುತ್ತದೆ ಜಿಲ್ಲಾಡಳಿತಗಾರರ ಎಡಬಿಡಂಗಿತನ ನೋಡಿದರೆ. 1997ರ ಸುಪ್ರೀಂಕೋರ್ಟ್ ತೀರ್ಪಿನಂತೆ ಪಾರಂಪರಿಕವಾಗಿ ಕಡಲ ತಡಿಯಲ್ಲಿ ಮೀನುಗಾರಿಕೆ ಮಾಡುತ್ತ ಬಂದವರ ಒಕ್ಕಲೆಬ್ಬಿಸುವಂತಿಲ್ಲ. ಅದೇ ರೀತಿ ಕಡಲತಡಿಯಲ್ಲಿರುವ ಮೀನುಗಾರರ ಜೀವನಾಧಾರ ಗುಡಿಸಲುಗಳು ಕಂದಾಯ ಇಲಾಖೆಯ ಜಾಗ ಅತಿಕ್ರಮಿಸಿಲ್ಲ. ಬೆಸ್ತರ ತಾತ್ಕಾಲಿಕ ಶೆಡ್‌ಗಳು ಇರುವುದು 'ಹೊರೆದು ಬಂದ' ಜಾಗದಲ್ಲಿ! ಎರಡನೇ ಆಕ್ಷೇಪ ಹಾಸ್ಯಾಸ್ಪದ. ಮೀನುಗಾರರ ಗುಡಿಸಲುಗಳಲ್ಲಿ ಅಕ್ರಮ-ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂಬುದು ಕಾನೂನು-ಸುವ್ಯವಸ್ಥೆಯ ಪ್ರಶ್ನೆ. ಅನೈತಿಕ-ಅಕ್ರಮ ಚಟುವಟಿಕೆ ಮಟ್ಟ ಹಾಕುವಷ್ಟು ತಾಕತ್ತು ಜಿಲ್ಲಾಡಳಿತಕ್ಕಿಲ್ಲವಾ? ಅಮಾಯಕ ಬೆಸ್ತರ ಬೀದಿ ಪಾಲು ಮಾಡಿ ಕಾನೂನು-ಸುವ್ಯವಸ್ಥೆ ಕಾಪಾಡುವಂಥ ಖರಾಬು ಸ್ಥಿತಿ ಉತ್ತರ ಕನ್ನಡದಲ್ಲಿದೆಯಾ?

ಕಡಲ ಕಿನಾರೆಯ ಕೆಲವೇ ಕೆಲವು ಗುಡಿಸಲುಗಳಲ್ಲಷ್ಟೇ ಅಕ್ರಮ-ಅನೈತಿಕ ಚಟುವಟಿಕೆ ನಡೆಯುತ್ತಿದೆ. ಕೆಲವೆಡೆ ಜುಗಾರಿ, ಕಳ್ಳ ಹೆಂಡ ಮಾರಾಟ ಆಗುತ್ತಿದೆ. ಇನ್ನೂ ಕೆಲವು ಶೆಡ್ ಕಾಲೇಜು ವಿದ್ಯಾರ್ಥಿ/ನಿ ಜೋಡಿಗೆ ಒಂದು ತಾಸಿಗೆ ರೂ.300ರಂತೆ ಬಾಡಿಗೆ ಕೊಡುವವರೂ ಇದ್ದಾರೆ. ಹದಿಹರೆಯದ ಜೋಡಿಗಳು ಇಲ್ಲಿ ನಿರಾತಂಕವಾಗಿ ಸರಸ-ಸಲ್ಲಾಪ ನಡೆಸಲು ಅವಕಾಶವಾಗುತ್ತಿದೆ. ಇದು ಇಡೀ ಕಾರವಾರಕ್ಕೆ ಗೊತ್ತಿರುವ ಬಹಿರಂಗ ರಹಸ್ಯ. ಪೊಲೀಸರಿಗೂ ಗೊತ್ತಿರುವ ಸತ್ಯ.

ಬೀಚ್‌ಶೆಡ್‌ಗಳಲ್ಲಿನ ಕಳ್ಳ ಹೆಂಡ-ಜುಗಾರಿ ಮತ್ತು ಡಿಂಗ್‌ಡಾಂಗ್ ದಂಧೆ ಜಿಲ್ಲಾಡಳಿತದಿಂದ ಏಕೆ ನಿಲ್ಲಿಸಲಾಗಿಲ್ಲ? ಅಷ್ಟು ಎಕ್ಕುಟ್ಟಿ ಹೋಗಿದೆಯಾ ಜಿಲ್ಲೆಯ ಪೊಲೀಸ್ ವ್ಯವಸ್ಥೆ? ಉಗುರಿಂದ ಹೋಗುವುದಕ್ಕೆ ಜಿಲ್ಲಾಡಳಿತ ಕೊಡಲಿ ಎತ್ತಿಕೊಂಡು ಪಾಪದವರನ್ನೂ ಸಂಹಾರ ಮಾಡಲು ಯೋಜನೆ ಹಾಕಿರುವುದು ನ್ಯಾಯವಾ? ಪ್ರಾಮಾಣಿಕವಾಗಿ ಮೀನುಗಾರಿಕಾ ಚಟುವಟಿಕೆ ಗುಡಿಸಲುಗಳಲ್ಲಿ ಮಾಡುತ್ತಿರುವ ಮುಗ್ಧರಿಗೂ ಬೀದಿಗೆ ಬಿಸಾಕೋದು ಸರಿಯಾ?

ಜಿಲ್ಲಾಡಳಿತದ ಸುಳ್ಳು ಸಬೂಬೇ ಅನೇಕ ಅನುಮಾನ ಹುಟ್ಟು ಹಾಕಿದೆ. ನಿಷ್ಪಾಪಿ ಬೆಸ್ತರ ಒಕ್ಕಲೆಬ್ಬಿಸುವ 'ನೈತಿಕತೆ'ಯ [illegible] ರೆಸಾರ್ಟ್ ಲಾಬಿ ಷಡ್ಯಂತ್ರ ಅಡಗಿದೆಯಾ?

ಹಫ್ತಾ ಅಟ್ಯಾಕ್


ಮಂಡ್ಯ ನೆತ್ತರು ಚರಿತ್ರೆಗೆ ಮರು ಮುನ್ನುಡಿ?

ಕಳೆದ ಆರೇಳು ವರ್ಷಗಳಿಂದ ತಣ್ಣಗೆ ಮಲಗಿದ್ದ ಮಂಡ್ಯ ಭೂಗತಲೋಕ ಈಗ ಮತ್ತೆ ಸದ್ದು ಮಾಡುತ್ತಿದೆ. ಹಫ್ತಾ ವಸೂಲಿಯ ನೆಪವಿಟ್ಟುಕೊಂಡು ಮಾರ್ವಾಡಿಯೊಬ್ಬನ ಬೆನ್ನಿಗೆ ಇರಿಸಿರುವ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿರುವ ಚಂದಗಾಲು ಬಸವ ಎಂಬ ಸಣ್ಣ ಸೈಜಿನ ರೌಡಿ ಮಂಡ್ಯದ ನೆತ್ತರು ಚರಿತ್ರೆಗೆ ಮರುಜೀವ ನೀಡಲು ಹೊರಟಿದ್ದಾನೆ.

2007ರ ಡಿಸೆಂಬರ್‌ನಲ್ಲಿ ನಡೆದ ಮಂಡ್ಯ ಭೂಗತಲೋಕದ ಕುಖ್ಯಾತ ರೌಡಿ ಜಡೇಜಾ ರವಿಯ ಹತ್ಯೆ ಹಲವರ ಮರಣಮೃದಂಗಗಳಿಗೆ ಮುನ್ನುಡಿ ಬರೆದಿತ್ತು. ಜಡೇಜಾ ರವಿ ಹತ್ಯೆಗೆ ಪ್ರತೀಕಾರವೆಂಬಂತೆ ನಾಲ್ಕೇ ದಿನದಲ್ಲಿ ...ಶ್ ಮುಖಂಡ, ಅಬಕಾರಿ ಕುಳ ಹನಕೆರೆ ನಾಗಣ್ಣ ...ರ ಹೆಣವಾಗಿ ಹೋಗಿದ್ದ. ಆದಾದ ಮರುವರ್ಷವೇ ...ರ್ವ ಮದ್ಯದ ದೊರೆ ರಂಗಸ್ವಾಮಿಯ ಮಗ ...ಂ. ಸದಸ್ಯನಾಗಿದ್ದ ಆರ್. ಮಹೇಶನನ್ನು ಹರಿಪ್ರಿಯ ...ಟೇಲ್ ಮುಂಭಾಗ ಕೊಚ್ಚಿ ಕೆಡವಲಾಯ್ತು. ಈ ...ರೂ ಕೊಲೆ ಪ್ರಕರಣದಲ್ಲಿ ರೌಡಿಗಳೆಲ್ಲಾ ಜೈಲು ...ದ ನಂತರ ಮಂಡ್ಯದಲ್ಲಿ ಒಂದು ಮಟ್ಟಕ್ಕೆ ಶಾಂತಿ ...ದಂತಿತ್ತು. ಇಲ್ಲಿಗೆ ವರ್ಷದ ಹಿಂದೆ ಜಡೇಜಾ ರವಿಯ ...ಮಗ ಡೇಂಜರ್ ಶಿವ ಒಂದಿಬ್ಬರು ವ್ಯಾಪಾರಿಗಳಿಗೆ ...ಕಿ ಹಾಕಿ ರೋಲ್‌ಕಾಲ್ ನಡೆಸಿದ್ದು ಬಿಟ್ಟರೆ ಹಫ್ತಾ ...ಗಿ ಜೈಲಿನಲ್ಲಿದ್ದ ರೌಡಿಗಳು ನೆತ್ತರ ಕಾರುವಷ್ಟು ...ತ್ಯಕ್ಕೆ ಹೋದ ನಿದರ್ಶನಗಳಿರಲಿಲ್ಲ. ಜಡೇಜಾ ರವಿ ... ಲಿಕ್ಕರ್ ಮಹೇಶನ ಕೊಲೆ ಪ್ರಕರಣದಲ್ಲಿ ...ಯಾಗಿದ್ದ ರೌಡಿಗಳಿಗೆ ಜೀವಾವಧಿ ಶಿಕ್ಷೆಯಾದ ...ವಂತೂ ಮಂಡ್ಯ ಭೂಗತಲೋಕದ ರೌಡಿಗಳು ...ಟಾಗಿ ಹೋಗಿದ್ದರು.

ಆದರೆ ಈ ಚಂದಗಾಲು ಬಸವ ಕೆಟ್ಟ ಕನಸಿಗೆ ...ಜನ್ಮ ನೀಡಲು ಮುನ್ನುಡಿ ಬರೆದಿದ್ದಾನೆ. ಲಿಕ್ಕರ್ ...ಸ್ವಾಮಿಯ ಮಗ ಮಹೇಶನ ಕೊಲೆ ಪ್ರಕರಣದಲ್ಲಿ ...ವಾವಧಿ ಶಿಕ್ಷೆಗೆ ಗುರಿಯಾಗಿ ಬೆಳಗಾವಿಯ ಹಿಂಡಲಗಾ ...ನಲ್ಲಿರುವ ಬಸವ ತನ್ನ ಶಿಷ್ಯಂದಿರನ್ನು ಮಂಡ್ಯದ ...ಡಿ ಕದಡಲು ಹರಿಬಿಟ್ಟಿದ್ದಾನೆ.


...ದು ಲಕ್ಷ ಹಫ್ತಾ ಕೇಳಿದ್ದ


ಎಸ್ಪಿ ಭೂಷಣ್ ಜಿ.ಬೊರಸೆ

...ಪೇಟೆಬೀದಿಯ ಕಾಮನ ...ಲ್‌ನಲ್ಲಿರುವ ನಕ್ಷತ್ರ ಗೋಲ್ಡ್ ...ವೆಲ್ಲರ್ಸ್‌ನ ಮಾಲೀಕ ಸೇಠು ...ಹೇಂದ್ರನಿಗೆ ಕಳೆದ 3-4 ತಿಂಗಳಿನಿಂದ ...ಗಾವಿಯ ಹಿಂಡಲಗಾ ಜೈಲಿನಿಂದಲೇ ...ವ್ಯಾಗಿ ಫೋನಾಯಿಸುತ್ತಿದ್ದ ರೌಡಿ ...ಗಾಲು ಬಸವ 5 ಲಕ್ಷ ರೂ. ಕೊಡು ... ಧಮಕಿ ಹಾಕುತ್ತಿದ್ದ. ಹೀಗೆ ಸುಮಾರು ...ಂದ 25 ಬಾರಿ ಆತ ಮಹೇಂದ್ರನಿಗೆ ...ಮಾಡಿ ಬೆದರಿಕೆ ಹಾಕಿದ್ದ. ಅದಕ್ಕೆ ... ಅನ್ನದ ಸೇಠು ಮಹೇಂದ್ರ ಬಸವನ ...ಕೆಯನ್ನು ನೆಗ್‌ಲೆಕ್ಟ್ ಮಾಡಿಬಿಟ್ಟಿದ್ದ. ಅಂದಹಾಗೆ, ...ಮಹೇಂದ್ರ ಅಲಂಕಾರ್ ಜ್ಯೂವೆಲರ್ಸ್‌ನ ಮಾಲೀಕ ...ನ ತಮ್ಮ. ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿರುವ ... ಸ್ವಲ್ಪಮಟ್ಟಿಗೆ ರಾಜಕೀಯದಲ್ಲೂ ಪಳಗಿದ್ದಾನೆ. ಅಣ್ಣನ ...ಪೊಲಿಟಿಕಲ್ ಸಪೋರ್ಟ್ ಮಹೇಂದ್ರ ಹಫ್ತಾ ...ಡಿಕೆಯನ್ನು ಉಡಾಫೆ ಮಾಡಲು ...ವಾಗಿದ್ದಿರಬಹುದು.

...ದರಿಂದ ಕೊತಕೊತ ಕುದ್ದುಹೋದ ಚಂದಗಾಲು ...ನ ಮತ್ತೊಬ್ಬ ರೌಡಿ ಷುಗರ್‌ಟೌನ್ ಬಾಸ್ ಮಂಜ ...ಆತನಿಗೆ ಹುಡುಗರನ್ನು ಸೆಟ್ ಮಾಡುವಂತೆ ಹೇಳಿ ...ಹೇಂದ್ರನಿಗೆ ಬುದ್ಧಿ ಕಲಿಸಲು ಪಕ್ಕಾ ಸ್ಕೆಚ್ ಹಾಕಿದ್ದ. ...ಗೆ ಬಾಸ್ ಮಂಜ 2010ರಲ್ಲಿ ನಡೆದ ಆನೆಕೆರೆ ...ಯ ಕುಖ್ಯಾತ ರೌಡಿ, ಮಾಜಿ ಕೌನ್ಸಿಲರ್ ಕಿಟ್ಟಿ ...ಕೇಸಿನಲ್ಲಿರುವ ಆರೋಪಿ. ಜಾಮೀನಿನ ಮೇಲೆ ...ರಗೆ ತಿರುಗಾಡಿಕೊಂಡಿದ್ದಾನೆ. ಬಾಸ್ ಮಂಜ, ...ಗಾಲು ಬಸವನ ಮಾತಿನಂತೆ ಸಾದೊಳಲು ಅಂದಾನಿ, ...ನಹಳ್ಳಿಯ ಅಭಿನಂದನ್, ಚಂದನ್, ವಳಗೆರೆಹಳ್ಳಿಯ ...ಸ್, ಮಂಡ್ಯದ ಗೂಬೆಹಳ್ಳದ ಮಧು, ಆನೆಕೆರೆ ...ಯ ರಾಘವೇಂದ್ರ ಎಂಬ ಆರು ಮಂದಿ ಪುಡಿ ...ರನ್ನು ಗುಡ್ಡೆ ಹಾಕಿಕೊಂಡಿದ್ದ. ವಸೂಲಿ ಮಾಡುವ ...ಕ್ಷ ಹಫ್ತಾದಲ್ಲಿ ಎರಡು ಲಕ್ಷ ನೀಡುವ ಆಮಿಷ ...ದ್ದರಿಂದ ಮೀಸೆ ಚಿಗುರದ ಹೈಕಳು ಮಂಜನಿಗೆ ಸಾಥ್ ...ಲು ಒಪ್ಪಿದ್ದರು.

...ಜೈಲಿನಲ್ಲೇ ಕೂತು ಬಸವ ಒಂದು ಪಕ್ಕಾ ಸ್ಕೆಚ್ ...ಮಾಡಿದ್ದ. ಮಹೇಂದ್ರನ ನಕ್ಷತ್ರ ಗೋಲ್ಡ್ ಅಂಗಡಿ ...ಡಿಕೊಳ್ಳುತ್ತಾ, ಪಕ್ಕದಲ್ಲೇ ರಾಜಧಾನಿ ಬ್ಯಾಂಕರ್ಸ್ ಎಂಬ ... ಅಂಗಡಿ ನಡೆಸುತ್ತಿರುವ ಆತನ ಅಕ್ಕನ ಮಗ ...ದ್ ಮೆಹ್ತಾನಿಗೆ ಚಾಕು ಹಾಕಿದರೆ ಮಹೇಂದ್ರ ಹೆದರಿ ...ಕ್ಷ ದುಡ್ಡು ಕೊಡುತ್ತಾನೆ ಎಂಬುದು ಬಸವನ ...ಲಾನವಾಗಿತ್ತು. ಈ ಹರ್ಷದ್ ಮೆಹ್ತಾನ ತಂದೆ ...ಲಿ ಸುರೇಶ, ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ಸಾಕಷ್ಟು ...ಕಳೆದುಕೊಂಡು ಹಲವರ ಕೋಟ್ಯಾಂತರ ರೂಪಾಯಿಗೆ ... ಹಾಕಿ ಐದು ವರ್ಷಗಳ ಹಿಂದೆಯೇ ಮುಂಡ್ಯದಿಂದ ...ರಾರಿಯಾಗಿದ್ದಾನೆ.


ಹರ್ಷದ್ ಮೆಹ್ತಾನ ಬೆನ್ನಿಗೆ ಹಾಕಿರುವ ಚಾಕು

ಹರ್ಷದ್ ಮೆಹ್ತಾನಿಗೆ ಚಾಕು ಹಾಕುವ ಜವಾಬ್ದಾರಿಯನ್ನು ಆನೆಕೆರೆ ಬೀದಿಯ ರಾಘವೇಂದ್ರನಿಗೆ ವಹಿಸುವಂತೆ ಬಸವ ಹುಕುಂ ಮಾಡಿದ್ದ. ಆನೆಕೆರೆ ಬೀದಿಯ ಮೇಷ್ಟ್ರು ಪುಟ್ಟಸ್ವಾಮಿ ಸಭ್ಯ ಮನುಷ್ಯ. ತರಕಾರಿ ಮಂಡಿ ನಡೆಸುವ ಇವರಿಗೆ ಒಳ್ಳೆಯ ಹೆಸರಿದೆ. ಇಂತವರ ಮಗನೇ ಈ ರಾಘವೇಂದ್ರ. ಸಹವಾಸ ದೋಷದಿಂದ ರೌಡಿಸಂನ ಸೋಂಕು ಅವನಿಗೆ ತಗುಲಿಕೊಂಡಿತ್ತು. ಚಿಕ್ಕಮಂಡ್ಯ ರಸ್ತೆಯಲ್ಲಿ ಭೂಮಿಕ ದರ್ಶಿನಿ ಹೋಟೆಲ್ ನಡೆಸುತ್ತಿದ್ದ ರಾಘವೇಂದ್ರ, ಬಸವನ ಸ್ಕೆಚ್‌ನಂತೆ ಹರ್ಷದ್ ಮೆಹ್ತಾನಿಗೆ ಚಾಕು ಹಾಕಲು ಮುಹೂರ್ತ ಫಿಕ್ಸ್ ಮಾಡಿದ್ದ. ಅದಕ್ಕೆ ಮಧು, ಅಭಿನಂದನ್, ಚಂದನ್, ಸುಹಾಸ್, ಅಂದಾನಿ ಕೂಡಾ ಸಜ್ಜಾಗಿದ್ದರು.

ಹರ್ಷದ್ ಮೆಹ್ತಾ ಒಂಟಿಯಾಗಿ ಸಿಕ್ಕರೆ ಅಟ್ಯಾಕ್ ಮಾಡಬೇಕೆಂದು ಈ ತಂಡ 2-3 ದಿನ ಕಾದರೂ ಅವಕಾಶ ಸಿಕ್ಕಿರಲಿಲ್ಲ. ಆತ ಅಂಗಡಿ-ಮನೆ, ಸ್ನೇಹಿತರ ಜೊತೆಗೇ ಇರುತ್ತಿದ್ದ. ಅಷ್ಟೂ ದಿನ ಎಲ್ಲರಿಗೂ ತನ್ನ ಹೋಟೆಲ್‌ನಲ್ಲೇ ತಂಗಲು ರಾಘವೇಂದ್ರ ವ್ಯವಸ್ಥೆ ಮಾಡಿದ್ದ. ಅಕ್ಟೋಬರ್ 1ರಂದು ರಾತ್ರಿ 10 ಗಂಟೆ ಸುಮಾರಿಗೆ ಹರ್ಷದ್ ಮೆಹ್ತಾ ಬೈಕ್‌ನಲ್ಲಿ ಜಾಲಿ ರೈಡ್ ಹೊರಟಿದ್ದ. ಅವನ ಚಲನವಲನದ ಮೇಲೆಯೇ ಕಣ್ಣಿಟ್ಟಿದ್ದ ರಾಘವೇಂದ್ರನ ಟೀಮು ಆತ ಕಾಮನ ಸರ್ಕಲ್ ದಾಟಿ ಮಹಾವೀರ ಸರ್ಕಲ್ ಕಡೆ ತಿರುಗುತ್ತಿದ್ದಂತೆಯೇ ಅವನನ್ನೇ ಫಾಲೋ ಮಾಡುತ್ತಿದ್ದ ಅಂದಾನಿ, ಮಧು ಕೂಡಲೇ ಮಹಾವೀರ ಸರ್ಕಲ್‌ಗೆ ಬರುವಂತೆ ಅಭಿನಂದ್, ಚಂದನ್, ಸುಹಾಸ್‌ಗೆ ವಿಷಯ ಮುಟ್ಟಿಸಿದ್ದರು. ಹೀಗೆ ಗುಂಪಾದ ಅಷ್ಟೂ ಜನ ಹರ್ಷದ್ ಮೆಹ್ತಾನನ್ನು ಬೈಕ್‌ನಲ್ಲೇ ಹಿಂಬಾಲಿಸಿಕೊಂಡು ಬಂದಿದ್ದರು. ಒಂದು ಬೈಕ್‌ನಲ್ಲಿ ಹಿಂದೆ ಕುಳಿತಿದ್ದ ಅಭಿನಂದನ್ ಹರ್ಷದ್ ಮೆಹ್ತಾ ಬೈಕಿನ ಪಕ್ಕ ಬರುತ್ತಿದ್ದಂತೆಯೇ ಅವನಿಗೆ ಚಾಕು ಹಾಕಿದ್ದ.


ಎಸ್ಐ ವೆಂಕಟೇಗೌಡ

ಏನಾಗುತ್ತಿದೆ ಎನ್ನುವುದು ತಿಳಿಯುವ ಮೊದಲೇ ಚಾಕು ಸುಮಾರು 8 ಇಂಚಿನಷ್ಟು ಆಳ ಮಾಡಿಕೊಂಡು ಹರ್ಷದ್ ಮೆಹ್ತಾನ ಬೆನ್ನು ಹೊಕ್ಕಿತ್ತು. ತನ್ನ ಮೇಲೆ ಅಟ್ಯಾಕ್ ಆಗುತ್ತಿರುವುದು ಖಾತ್ರಿಯಾಗುತ್ತಿದ್ದಂತೆಯೇ ಜೀವವನ್ನು ಉಳಿಸಿಕೊಳ್ಳುವ ಸಲುವಾಗಿ ಆ ಪರಿ ನೋವು ಮತ್ತು ರಕ್ತದ ಮಡುವಿನಲ್ಲೂ ಬೈಕ್ ನಿಲ್ಲಿಸದೆ ಚೀರಾಡುತ್ತಾ ಜಿಲ್ಲಾಸ್ಪತ್ರೆಗೆ ಬಂದು ಬಿದ್ದಿದ್ದ. ಆತನ ಬೆನ್ನಿನಲ್ಲೆ ಚಾಕು ಹಾಗೇ ನೆಟ್ಟುಕೊಂಡಿತ್ತು. ಪರಿಸ್ಥಿತಿಯ ಗಂಭೀರತೆ ಅರಿತ ಆಸ್ಪತ್ರೆಯವರು ಮನೆಯವರಿಗೆ ಸುದ್ದಿ ಮುಟ್ಟಿಸಿ ಮೆಹ್ತಾನನ್ನು ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಗೆ ಸಾಗಿಸಿದ್ದರು.

ಎಸ್‌ಐ ವೆಂಕಟೇಗೌಡರ ಎಂಟ್ರಿ

ವಿಷಯ ತಿಳಿಯುತ್ತಿದ್ದಂತೆಯೇ ಪೂರ್ವ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ವೆಂಕಟೇಗೌಡ ತಮ್ಮ ತನಿಖೆ ಶುರು ಹಚ್ಚಿಕೊಂಡಿದ್ದರು. ಇಡೀ ಘಟನೆಗೆ ಕಾರಣವಾದ ರೌಡಿ ಚಂದಕಾಲು ಬಸವನ ಬಗ್ಗೆ ಮಹೇಂದ್ರ, ಭರತ್ ಮಾರ್ವಾಡಿ ಬ್ರದರ್ಸ್‌ಗಳು ಪೊಲೀಸರೆದುರು ಬಾಯಿಬಿಟ್ಟಿರಲಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹರ್ಷದ್ ಮೆಹ್ತಾ ಕೂಡಾ ಮಹತ್ವದ ಸುಳಿವು ನೀಡುವ ಸ್ಥಿತಿಯಲ್ಲಿರಲಿಲ್ಲ. ಮಾರ್ವಾಡಿಗಳ ಮೇಲಿನ ಅಟ್ಯಾಕ್ ಎಂದರೆ ಅದು ದುಡ್ಡಿನ ವಿಷಯವೇ ಎಂಬುದು ವೆಂಕಟೇಗೌಡರ ಪೊಲೀಸ್ ಬುದ್ಧಿಗೆ ತುಂಬಾ ಸುಲಭವಾಗಿ ಅರ್ಥವಾಗಿತ್ತು. ಹಾಗಾಗಿ ಸೇಟು ಮಹೇಂದ್ರನನ್ನು ಬಲು ವಿಶ್ವಾಸಕ್ಕೆ ತೆಗೆದುಕೊಂಡು ಒತ್ತಾಯಿಸಿದ ನಂತರ ರೌಡಿ ಚಂದಗಾಲು ಬಸವನ ಬೆದರಿಕೆ ಬಗ್ಗೆ ಬಾಯ್ಬಿಟ್ಟಿದ್ದ. ಅಲ್ಲದೆ 'ಹೋಗ್ಲಿ ಬಿಡಿ ಸಾರ್ ನಾವೇ ಹೇಗೋ ಸೆಟಲ್ ಮಾಡಿಕೊಳ್ತೀವಿ' ಎಂಬುದಾಗಿ ಎಸ್‌ಐ ವೆಂಕಟೇಗೌಡರನ್ನೇ ಸಂಭಾಳಿಸಲು ಯತ್ನಿಸಿದ್ದ.

ಪೊಲೀಸರಿಗೆ ಬೇಕಾದ ಮಾಹಿತಿ ತಿಳಿಯುತ್ತಿದ್ದಂತೆಯೇ ಡಿವೈಎಸ್ಪಿ ಉದೇಶ್, ಸಿಪಿಐ ಪ್ರೀತಂ ಮಾರ್ಗದರ್ಶನದಲ್ಲಿ ವೆಂಕಟೇಗೌಡರ ಟೀಂ ಚಂದಗಾಲು ಬಸವನ ಶಿಷ್ಯರ ಬೇಟೆಗೆ ಅಣಿಯಾಗಿತ್ತು. ಪೊಲೀಸರು ಮೊದಲು ಮಾಡಿದ ಕೆಲಸವೇ ಮೊಬೈಲ್ ಕಾಲ್ ಡೀಟೆಲ್‌ಗೆ ತಡಕಾಡಿದ್ದು. ಮಾರ್ವಾಡಿ ಮಹೇಂದ್ರನಿಗೆ ಬೆದರಿಕೆ ಹಾಕಲೆಂದೇ ರೌಡಿ ಬಸವ ಪ್ರತ್ಯೇಕ ಮೊಬೈಲ್ ಇಟ್ಟುಕೊಂಡಿದ್ದ ಸತ್ಯ ಆಗ ಬೆಳಕಿಗೆ ಬಂದಿತ್ತು. ಮತ್ತೊಂದು ಮೊಬೈಲ್‌ನಲ್ಲಿ ಬಸವ ತನ್ನ ಸಹಚರರ ಜೊತೆ ಮಾತನಾಡಿ ಡೀಲ್ ಬಗ್ಗೆ ವಿವರಿಸಿದ್ದ. ಘಟನೆ ನಡೆದ ದಿನ ರೌಡಿ ಚಂದಗಾಲು ಬಸವನ ಜೊತೆಗೆ ಆರೋಪಿಗಳೆಲ್ಲ ಸಂಪರ್ಕದಲ್ಲಿರುವುದು ಪೊಲೀಸರಿಗೆ ಖಚಿತವಾಗಿತ್ತು. ಮೊದಲಿಗೆ ಹೋಟೆಲ್ ರಾಘವೇಂದ್ರನನ್ನು ಎತ್ತಾಕಿಕೊಂಡು ಬಂದ ಪೊಲೀಸರು ತಮ್ಮದೇ ಭಾಷೆಯಲ್ಲಿ ವರ್ಕ್ ಶುರು ಹಚ್ಚಿಕೊಳ್ಳುತ್ತಿದ್ದಂತೆಯೇ ಘಟನೆಯ ಸಂಪೂರ್ಣ ವಿವರ ಮತ್ತು ಉಳಿದ ಪಾಲುದಾರರ ಹೆಸರುಗಳನ್ನೂ ಬಾಯಿಬಿಟ್ಟಿದ್ದ. ಅಕ್ಟೋಬರ್ 8ರಂದು ಎಲ್ಲಾ ಆರೋಪಿಗಳ ಹೆಡೆಮುರಿ ಕಟ್ಟಿ ಎಳೆತಂದ ಪೊಲೀಸರು ಜೈಲಿಗೆ ಗದುಮಿದ್ದಾರೆ. ಎಲ್ಲಾ ಆರೋಪಿಗಳೂ ತಮ್ಮ ತಪ್ಪು ಒಪ್ಪಿಕೊಂಡಿದ್ದಾರೆ. ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿರುವ ರೌಡಿ ಚಂದಗಾಲು ಬಸವನನ್ನು ಪೊಲೀಸ್ ಕಸ್ಟಡಿಗೆ ಕೊಡುವಂತೆ ನ್ಯಾಯಾಧೀಶರನ್ನು ಮಂಡ್ಯದ ಪೊಲೀಸರು ಕೇಳಿಕೊಂಡಿದ್ದಾರೆ.

ಕಡಿವಾಣ ಹಾಕಲಿ

ಮಂಡ್ಯದ ಭೂಗತ ಪಾತಕಲೋಕದ ಡಾನ್‌ಗಳಾದ ಅಶೋಕ್ ಪೈ, ಡೇಂಜರ್ ಶಿವ, ಚೀರನಹಳ್ಳಿ ಚೇತನ್, ಮನು ಸೇರಿದಂತೆ ಸುಮಾರು 50ಕ್ಕೂ ಹೆಚ್ಚು ರೌಡಿಗಳು ವಿವಿಧ ಪ್ರಕರಣಗಳಲ್ಲಿ ಜೈಲಿನ ಕಂಬಿ ಎಣಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಅಪರಾಧ ಪ್ರಕರಣ ಕಡಿಮೆಯಾಗಿ ಪೊಲೀಸರು ಹಾಗೂ ಜನಸಾಮಾನ್ಯರು-ವರ್ತಕರು ನೆಮ್ಮದಿಯಿಂದಿದ್ದರು.

ಆದರೆ ಕಳೆದೊಂದು ವರ್ಷದಿಂದ ಜೈಲಿನಲ್ಲಿರುವ ಭೂಗತ ಪಾತಕಿಗಳು ಮಂಡ್ಯ ಜಿಲ್ಲೆಯ ಧನಿಕ ವರ್ತಕರು, ಧನವಂತರು ಹಾಗೂ ಬೆಂಗಳೂರು-ಮೈಸೂರು ರಸ್ತೆ ವ್ಯಾಪ್ತಿಯ ಪಿತ್ರಾರ್ಜಿತ ಆಸ್ತಿ ಮಾರಾಟ ಮಾಡುವ ರೈತರನ್ನು ಬೆದರಿಸಿ ಹಣ ವಸೂಲಿ ಮಾಡುವ ದಂಧೆಯಲ್ಲಿ ನಿರತರಾಗಿದ್ದಾರೆ. ಮಂಡ್ಯ ನಗರದ ಸಬ್ ರಿಜಿಸ್ಟ್ರಾರ್ ಕಚೇರಿಯ ಸ್ಟ್ಯಾಂಪ್‌ವೆಂಡರ್ ಹಾಗೂ ರಿಯಲ್ ಎಸ್ಟೇಟ್ ಕುಳಗಳಿಂದ ಮಾಹಿತಿ ಪಡೆಯುವ ರೌಡಿಗಳು ಮೊಬೈಲ್ ಮೂಲಕ ಬೆದರಿಕೆ ಹಾಕುವ ಪ್ರಸಂಗಗಳು ವರ್ತಕರು ಹಾಗೂ ಸಿರವಂತರ ನಿದ್ದೆಗೆಡಿಸಿತ್ತು. ಇದಕ್ಕೆ ಹಿಂದಿನ ಎಸ್ಪಿ ಕೌಶಲೇಂದ್ರಕುಮಾರ್ ಕಡಿವಾಣ ಹಾಕಿದ್ದರು. ಈಗಿನ ಎಸ್ಪಿ ಭೂಷಣ್ ಬೊರಸೆ ಸಹ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಲು ಮುಂದಾಗದಿದ್ದರೆ ಎಸ್ಪಿಯವರ ಒಳ್ಳೇತನ ಪ್ರಯೋಜನವಾಗದು.

ಈ ಹಿಂದೆ ರೌಡಿ ಜಡೇಜಾ ರವಿ ಸಾಲುಸಾಲು ಕೊಲೆ ಮಾಡಿಸಲು ಮಂಡ್ಯದ ಪೊಲೀಸರ ನಿಷ್ಕ್ರಿಯತೆಯೂ ಒಂದು ಕಾರಣವಾಗಿತ್ತು. ಜಡೇಜಾ ರವಿ ಕೊಟ್ಟ ಕಾಸಿಗೆ ಎಸ್‌ಐ, ಸಿಪಿಐ ಸೇರಿದಂತೆ ಪೊಲೀಸ್ ಪೇದೆಗಳ್ ಶರಣಾಗಿದ್ದರು. ಪೊಲೀಸರ ಕುಮ್ಮಕ್ಕಿನಿಂದಲೇ ಆತ ದೊಡ್ಡ ರೌಡಿಯಾಗಿ ಮೆರೆದಾಡಿ ಕೊನೆಗೆ ಬರ್ಬರವಾಗಿ ಕೊಲೆಯಾಗಿ ಹೋದ. ಆತನ ಶಿಷ್ಯಂದಿರಾದ ಕುಮಾರ ಅಲಿಯಾಸ್ ಬಂಗಾರಪ್ಪ ಕುಂಚ ರಮೇಶ್ ಬೆಂಗಳೂರಿನಲ್ಲಿ ಹೋಟೆಲ್ ಮಾಡಿಕೊಂಡಿದ್ದಾರೆ. ರಘು ರೌಡಿಸಂ ಬಿಟ್ಟು ಮಾರ್ಕೆಟ್‌ನಲ್ಲಿ ತರಕಾರಿ ಮಂಡಿ ನಡೆಸುತ್ತಾ ಜೀವನ ನಡೆಸುತ್ತಿದ್ದಾನೆ. ಅನಂತ ಪದ್ಮನಾಭ ನಗರಸಭೆಯ ಕೌನ್ಸಿಲರ್ ಆಗಿ ರಾಜಕಾರಣಕ್ಕೆ ಇಳಿದಿದ್ದಾನೆ. ರಮೇಶ್ ಅಲಿಯಾಸ್ ದತ್ತ ಮಂಡ್ಯವನ್ನೇ ಬಿಟ್ಟಿದ್ದಾನೆ.

ಒಟ್ಟಿನಲ್ಲಿ ಮಂಡ್ಯ ತನ್ನ ನೆತ್ತರ ಚರಿತ್ರೆಯನ್ನು ಮರೆಯುವ ಹಾದಿಯಲ್ಲಿದೆ. ಇಂತಹ ಸಂದರ್ಭದಲ್ಲಿ ಜೈಲಿನಲ್ಲೇ ಕೂತು ಪಡ್ಡೆ ಹುಡುಗರ ಹಾದಿ ತಪ್ಪಿಸುತ್ತಿರುವ ಚಂದಗಾಲ ಬಸವನಂತಹ ಕ್ರಿಮಿಗಳನ್ನು ಹುದ್ದುಬಿಟ್ಟಿನಲ್ಲಿಡದಿದ್ದರೆ ರೌಡಿಸಂನ ನರಕ ಯಾತನೆ ಗೊತ್ತಿರದ ಯುವಕರು ಕ್ರಿಮಿನಲ್‌ಗಳಾಗಿ ಬದಲಾಗುವ ಅಪಾಯವನ್ನು ತಳ್ಳಿಹಾಕುವಂತಿಲ್ಲ. ಯಾವುದಕ್ಕೂ ಮಂಡ್ಯ ಪೊಲೀಸರು ಎಚ್ಚರಿಕೆ ವಹಿಸಿದರೆ ಒಳಿತು.


● ಮಂಡ್ಯ ನಾಗೇಶ್


ಬಂಧನಕ್ಕೊಳಗಾಗಿರುವ ಆರೋಪಿಗಳು

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಬಚ್ಚೇಗೌಡನ ಚೇಲಾಗಳ ಭೂಸ್ವಾಹಾ

ಸರ್ಕಾರಿ ಭೂಮಿಗೆ 'ಬೋಗಸ್' ಜಮೀನ್ದಾರರು



ಬಚ್ಚೇಗೌಡ

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮತ್ತು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನ ಟೌನ್‌ಹಾಲ್ ಮುಂಭಾಗದಲ್ಲಿ ಸತತ 37 ದಿನಗಳ ಕಾಲ ನಡೆದ ಅಹೋರಾತ್ರಿ ಧರಣಿ ಕೊಂಚಮಟ್ಟಿಗೆ ಯಶಸ್ವಿಯಾಗಿಯೇ ಸಮಾಪ್ತಿಯಾಗಿದೆ. ಸಿಲಿಕಾನ್ ಸಿಟಿ ಬೆಂಗಳೂರನ್ನೂ ಒಳಗೊಂಡಂತೆ ರಾಜ್ಯದ ವಿವಿಧೆಡೆ ಸರ್ಕಾರಿ ಜಮೀನುಗಳಿಗೆ ಅಕ್ರಮವಾಗಿ ದಾಖಲೆ ಸೃಷ್ಟಿಸಿ ಭೂಗಳ್ಳರು ಕಬಳಿಸಿರುವ ಕೋಟ್ಯಂತರ ರೂಪಾಯಿ ಬೆಲೆಬಾಳುವ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಬೇಕು ಎನ್ನುವುದೇ ಧರಣಿ ನಿರತರ ನ್ಯಾಯಯುತ ಕೂಗಾಗಿತ್ತು. ಬೆಂಗಳೂರಿನ ಭೂಕಬಳಿಕೆಯ ಕುರಿತಾದ ಎ.ಟಿ.ರಾಮಸ್ವಾಮಿ ಜಂಟಿ ಸದನ ಆಯೋಗದ ವರದಿ ಮತ್ತು ರಾಜ್ಯಾದ್ಯಂತದ ಒತ್ತುವರಿಗೆ ಸಂಬಂಧಿಸಿದ ವಿ.ಬಾಲಸುಬ್ರಮಣಿಯನ್ ವರದಿಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದರೂ ಸಾಕು, ಸಾವಿರಾರು ಭೂತಿಮಿಂಗಿಲಗಳು ಬಲೆಗೆ ತುಲಿಕೊಳ್ಳುತ್ತವೆ. ಅದರ ಜೊತೆಗೆ ಈಗಾಗಲೇ ರಾಷ್ಟ್ರಪತಿಗಳ ಮೇಜಿನ ಮೇಲಿರುವ ಕರ್ನಾಟಕ ಭೂಕಬಳಿಕೆ ನಿಷೇಧ ಮಸೂದೆಯನ್ನು ತ್ವರಿತವಾಗಿ ಜಾರಿಗೆ ತರಬೇಕೆನ್ನುವುದೂ ಧರಣಿಯ ಮುಖ್ಯ ಬೇಡಿಕೆಯಾಗಿತ್ತು. ಆದರೆ ಅದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ, ಅಧಿಕಾರಿವರ್ಗದಿಂದ ಹಿಡಿದು ರಿಯಲ್ ಎಸ್ಟೇಟ್ ದಂಧೆಕೋರರು, ಬಿಲ್ಡರ್ ಕಂಪನಿಗಳು, ರಾಜಕಾರಣಿಗಳೇ ಭೂಕಬಳಿಕೆ ಹಗರಣದ ರೂವಾರಿಗಳು ಮತ್ತು ಫಲಾನುಭವಿಗಳಾಗಿದ್ದಾರೆ. ಈ ಭ್ರಷ್ಟಕೂಟ ಕಂದಾಯ ಇಲಾಖೆಯ ತುಂಬೆಲ್ಲಾ ಭ್ರಷ್ಟತೆಯನ್ನು ಬಲು ಸಂಕೀರ್ಣವಾಗಿ ಪೋಣಿಸಿದೆ. ಅಲ್ಲದೆ ಆಡಳಿತಯಂತ್ರದ ಮೇಲೆ ಹೇಗೆಲ್ಲಾ ಒತ್ತಡ ತರಬೇಕೆನ್ನುವ ತಂತ್ರಗಾರಿಕೆಯೂ ಆ ಕೂಟಕ್ಕೆ ಸಿದ್ಧಿಸಿರುವಂತದ್ದು. ಹಾಗಾಗಿ ಏಕಾಏಕಿ ನಿರ್ಧಾರಕ್ಕೆ ಬರುವುದು ಸ್ವತಃ ಸಿದ್ದರಾಮಯ್ಯನವರಿಗೂ ಕಷ್ಟವಾಗಿತ್ತು.

ಆದರೆ ಕಡೆಗೂ ಮುಖ್ಯಮಂತ್ರಿಗಳು ಭೂಕಂಟಕರಿಗೆ ಬಿಸಿ ಮುಟ್ಟಿಸುವಂತಹ ಗಟ್ಟಿ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಮಸೂದೆಯನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರುವ ಭರವಸೆಯ ಜೊತೆಗೆ ಭೂಕಬಳಿಕೆಯ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸುವ ಸಲುವಾಗಿ ಬೆಂಗಳೂರಿಗೆ ಐಎಎಸ್ ದರ್ಜೆಯ ಇಬ್ಬರು ಹೆಚ್ಚುವರಿ ವಿಶೇಷ ಜಿಲ್ಲಾಧಿಕಾರಿಗಳನ್ನು ನೇಮಿಸಿ ಈಗಾಗಲೇ ಆದೇಶವನ್ನೂ ಹೊರಡಿಸಿದ್ದಾರೆ. ಅದಕ್ಕೂ ಮುನ್ನ ಹೊಸಕೋಟೆಯ ಸೂಲಿಬೆಲೆ ಬಳಿಯಿರುವ ಶಾಂತನಪುರದ 261 ಎಕರೆ 13 ಗುಂಟೆ ಭೂಕಬಳಿಕೆಯ ಕುರಿತು ಸಿಐಡಿ ತನಿಖೆಗೂ ಆದೇಶ ನೀಡಿದ್ದರು. ಇದೆಲ್ಲಕ್ಕೂ ಗಹನವಾದ ಸಂಗತಿಯೆಂದರೆ, ಇಂತಹ ಅನೇಕ ಭೂಕಬಳಿಕೆಗಳಲ್ಲಿ ನೇರವಾಗಿ ಶಾಮೀಲಾಗಿರುವ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಪತ್ತೆ ಮಾಡುವ ಹೊಣೆಯನ್ನು ಸಿಐಡಿಗೆ ವಹಿಸುವ ನಿರ್ಧಾರಕ್ಕೂ ಸಿದ್ದರಾಮಯ್ಯ ಮುಂದಾಗಿದ್ದಾರೆ. ಇಷ್ಟು ದಿನ ಕಡತಗಳನ್ನು ತಿದ್ದಿತೀಡಿ, ಭೂವಂಚಕರನ್ನು ರಕ್ಷಿಸುತ್ತ ಅವರ ಎಂಜಲು ಕಾಸಿನಲ್ಲೇ ಬೆಚ್ಚಗಿದ್ದ ಭ್ರಷ್ಟರಿಗೆ ನಡುಕ ಶುರುವಾಗಿರೋದೆ ಈ ನಿರ್ಧಾರದಿಂದ. ಎಷ್ಟೋ ಪ್ರಕರಣಗಳಲ್ಲಿ ಸರ್ಕಾರಿ ಜಮೀನಿನ ಭೂಕಬಳಿಕೆ ಮೇಲ್ನೋಟಕ್ಕೇ ಸಾಬೀತಾಗುವಷ್ಟು ಸ್ಪಷ್ಟವಾಗಿದ್ದರೂ ಅಧಿಕಾರಿ ಶಾಹಿಗಳು ಬೇಕುಬೇಕಂತಲೇ ಕಣ್ಮುಚ್ಚಿ ಕುಳಿತ ನಿದರ್ಶನಗಳಿವೆ.

ಜಮೀನ್ದಾರ್ ಸೀನಪ್ಪನ ಸ್ಯಾಂಪಲ್!

ಬೆಂಗಳೂರಿನಂತಹ ಮಾಯಾನಗರಿಯಲ್ಲಿ ಪುಟ್ಟದೊಂದು ಸೈಟ್ ಕೊಳ್ಳುವುದೂ ದುಸ್ತರವೆನಿಸುವ ಪರಿಸ್ಥಿತಿ ಇದ್ದರೂ ಇದೇ ಬೆಂಗಳೂರಿನ ಸೆರಗಿನಲ್ಲಿ ನೂರಾರು ಎಕರೆಗೆ ಒಡೆಯರಾಗಿರುವಂತಹ ಸಾವಿರಾರು ಜಮೀನ್ದಾರಿ ಕುಳಗಳಿಗೇನೂ ಬರವಿಲ್ಲ. ಅವರ ಅಷ್ಟೂ ಜಮೀನು ಸರ್ಕಾರಿ ಭೂಮಿಯನ್ನು ಲಪಟಾಯಿಸಿ ಬೇಲಿ ಸುತ್ತಿದ್ದು ಎನ್ನುವುದರಲ್ಲಿ ಸಂಶಯವೇ ಇಲ್ಲ. ಅಂತವರಿಗೆಲ್ಲ ಘಟಾನುಘಟಿ ರಾಜಕಾರಣಿಗಳೇ ಅಪ್ಪಂದಿರು, ಭ್ರಷ್ಟ ಅಧಿಕಾರಿಗಳೇ ಮಾವಂದಿರು! ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಕೇವಲ ಐದು ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನೇ 1,30,154 ಎಕರೆಗಳಿವೆ. ಎ.ಟಿ.ರಾಮಸ್ವಾಮಿಯವರ ಜಂಟಿ ಸದನ ಸಮಿತಿಯ ವರದಿಯ ಪ್ರಕಾರ ಈ 1,30,154 ಎಕರೆಗಳಲ್ಲಿ 27,336 ಎಕರೆಗಳನ್ನು ರಾಜಕಾರಣಿಗಳು, ಪಟ್ಟಭದ್ರರು ಮತ್ತು ಅಧಿಕಾರಸ್ಥರು ಒತ್ತುವರಿ ಮಾಡಿಕೊಂಡಿದ್ದಾರೆ. ಬಾಲಸುಬ್ರಹ್ಮಣ್ಯಂ ವರದಿಯ ಪ್ರಕಾರ ಈ ಒತ್ತುವರಿಯಿಂದ ಸರ್ಕಾರಕ್ಕೆ ಮತ್ತು ಜನರಿಗೆ ಆಗಿರುವ ನಷ್ಟ ಬರೋಬ್ಬರಿ 40,000 ಕೋಟಿ ರೂಪಾಯಿಗಳು. ಹೀಗೆ ಒತ್ತುವರಿ ಮಾಡಿಕೊಂಡಿರುವ ಜಮೀನುಗಳಲ್ಲಿ ಸಹಸ್ರಾರು ಎಕರೆ ಬಗರ್‌ಹುಕುಂ ಜಮೀನುಗಳನ್ನು ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳ ಅನೈತಿಕ ಸಂಬಂಧದಿಂದಾಗಿ ಸಾಗುವಳಿ ಚೀಟಿ ನೀಡಿ ಸಕ್ರಮಗೊಳಿಸಲಾಗಿದೆ.

ಶಕ್ತಿಕೇಂದ್ರ ವಿಧಾನಸೌಧದಿಂದ ಅಜಮಾಸು 45 ಕಿ.ಮೀ ದೂರದಲ್ಲಿರುವ ಬಿದರಳ್ಳಿಯ ಜಮೀನ್ದಾರ್ ಸೀನಪ್ಪನ ವಂಶವೂ ಅಂತಹ ಭೂಕಂಟಕರಲ್ಲಿ ಒಂದು. ಕಾನೂನುಗಳನ್ನೆಲ್ಲ ಗಾಳಿಗೆ ತೂರಿ ಈತನ ಮಕ್ಕಳು, ಮೊಮ್ಮಕ್ಕಳು ಅದ್ಹೇಗೆ ಗೋಮಾಳ, ಅರಣ್ಯ ಭೂಮಿಯನ್ನೂ ಕಬ್ಜಾ ಮಾಡಿಟ್ಟುಕೊಂಡಿದ್ದಾರೆ ಮತ್ತು ಅವರನ್ನು ತನಿಖೆಗಳಿಂದ ರಕ್ಷಿಸಲು ಅಧಿಕಾರಿವರ್ಗ ಹೇಗೆಲ್ಲಾ ಕಸರತ್ತು ನಡೆಸಿದೆ ಎಂಬ ಒಂದು ನಿದರ್ಶನ ಸಾಕು ಇಡೀ ಸಿಲಿಕಾನ್ ಸಿಟಿಯ ಭೂಕಬಳಿಕೆ ವಾಸ್ತವ ತೆರೆದಿಡಲು.




ಎನ್. ವೆಂಕಟಪ್ಪ

ಈ ಸೀನಪ್ಪ 1965-66ನೇ ಸಾಲಿನಿಂದಲೇ ಸರ್ಕಾರಿ ಗೋಮಾಳದ ಜಮೀನಿಗೆ ಬೇಲಿ ಸುತ್ತುವ ಕಾಯಕ ಶುರು ಮಾಡಿಕೊಂಡಂತವನು. ತನ್ನ ತಮ್ಮಂದಿರಾದ ನಾರಾಯಣಪ್ಪ ವೆಂಕಟೇಶಪ್ಪ ಲಕ್ಷ್ಮಣಯ್ಯರ ಜೊತೆಗೂಡಿ ಈತ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ, ಕಮ್ಮಸಂದ್ರ, ರಾಂಪುರ, ಬಂಡೆಬೊಮ್ಮಸಂದ್ರ, ಕಾಡ ಅಗ್ರಹಾರ, ಗುಂಡೂರು, ಅಣಗಲಪುರ ವ್ಯಾಪ್ತಿಗಳಲ್ಲಿ ಏನಿಲ್ಲವೆಂದರೂ 150 ರಿಂದ 170 ಎಕರೆ ಸರ್ಕಾರಿ ಜಮೀನನ್ನು ಕಬಳಿಸಿದ್ದ. ಈಗ ಸೀನಪ್ಪ ಬದುಕಿಲ್ಲವಾದರೂ ಆತನ ಮಕ್ಕಳು ಮತ್ತು ಅವನ ತಮ್ಮನ ಮಕ್ಕಳು ಈ ಆಸ್ತಿಗೆ ಬೋಗಸ್ ದಾಖಲೆಗಳನ್ನು ಸೃಷ್ಟಿಸಿ ಲಪಟಾಯಿಸುವ ಹುನ್ನಾರ ನಡೆಸಿದ್ದಾರೆ.



ದೊರೆಸ್ವಾಮಿಯವರ ನೇತೃತ್ವದಲ್ಲಿ ನಡೆದ ಪ್ರತಿಭಟನೆ




ಎಲ್. ನಾರಾಯಣಪ್ಪ ಕಾಡಅಗ್ರಹಾರದಲ್ಲಿ ನಡೆಸುತ್ತಿರುವ ಅಕ್ರಮ ಕ್ರಷರ್

ಎಲ್ಲವೂ ಸರ್ಕಾರಿ ಜಮೀನು

ಸೀನಪ್ಪನ ಖಾನ್‌ದಾನ್ ರಾಂಪುರದ ಸರ್ವೇ ನಂಬರ್ 71ರಲ್ಲಿ 18 ಎಕರೆ, ಬಂಡೆ ಬೊಮ್ಮಸಂದ್ರದ ಸ.ನಂ. 38ರಲ್ಲಿ 17 ಎಕರೆ, ಕಾಡಅಗ್ರಹಾರದ ಸ.ನಂ 34ರಲ್ಲಿ 78 ಎಕರೆ ಜಮೀನುಗಳ ಸಾಗುವಳಿ ಚೀಟಿ ಪಡೆದು ಅನುಭವಿಸುತ್ತಿದೆ. ಇವೆಲ್ಲವೂ ಸರ್ಕಾರಿ ಗೋಮಾಳದ ಜಮೀನೆನ್ನುವುದನ್ನು ಸ್ವತಃ ಸರ್ಕಾರದ ಬಂಜರು ತಃಖ್ತೆ ಪಟ್ಟಿಯೇ ಸಾರಿಸಾರಿ ಹೇಳುತ್ತದೆ. ಅದಕ್ಕಿಂತಲೂ ಮುಖ್ಯವಾಗಿ ಇದೇ ಕುಟುಂಬದ ಹೆಣ್ಣುಮಗಳೊಬ್ಬಳು ಆಸ್ತಿಯ ಹಕ್ಕಿಗಾಗಿ ಕೋರ್ಟ್ ಮೆಟ್ಟಲೇರಿದ್ದಾಗ ಸೀನಪ್ಪನ ತಮ್ಮ ವೆಂಕಟೇಶಪ್ಪ ಮತ್ತು ಮಕ್ಕಳು ಕೋರ್ಟ್‌ನಲ್ಲಿ ತಮ್ಮ ಸರ್ಕಾರಿ ವಕೀಲರ ಮೂಲಕ ಈ ಮೂರೂ ಸರ್ವೇ ನಂಬರ್‌ಗಳ ಆಸ್ತಿ ಸರ್ಕಾರಿ ಜಮೀನಾದ್ದರಿಂದ ಅವುಗಳಲ್ಲಿ ಆಕೆಗೆ ಪಿತ್ರಾರ್ಜಿತ ಆಸ್ತಿಯ ಹಕ್ಕಿಲ್ಲ ಎಂದು ವಾದ ಮಂಡಿಸಿ ಅಫಿಡವಿಟ್ ಕೂಡಾ ಸಲ್ಲಿಸಿದ್ದರು. ಅಂದರೆ ಅವು ಸರ್ಕಾರಿ ಜಮೀನೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಹಾಗಿದ್ದ ಮೇಲೆ ಒಂದೇ ಕುಟುಂಬಕ್ಕೆ ಅಷ್ಟೊಂದು ಸರ್ಕಾರಿ ಜಮೀನು ಹೇಗೆ ಬಂತೆಂಬುದೇ ಪ್ರಶ್ನೆ?

ಸಾಮಾನ್ಯವಾಗಿ ಸರ್ಕಾರದ ಬಗರ್‌ಹುಕುಂ ಜಮೀನನ್ನು ಭೂರಹಿತ ಕೃಷಿ ಕಾರ್ಮಿಕರಿಗೆ ನೀಡುವಾಗಲೂ ಒಂದಷ್ಟು ನಿಯಮಗಳಿವೆ. ಅದರಲ್ಲೂ ಮಹಾನಗರಿ ಬೆಂಗಳೂರಿಗೆ ತುಸು ಹೆಚ್ಚಿನ ನಿಬಂಧನೆಗಳೇ ಅನ್ವಯಿಸುತ್ತವೆ. ಕರ್ನಾಟಕ ಭೂ ಕಂದಾಯ ಕಾಯ್ದೆಯ ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಹೊರಹೊಲಯದಿಂದ 18 ಕಿ.ಮಿ.ಗಳ ದೂರದವರೆಗಿನ ಯಾವುದೇ ಸರ್ಕಾರಿ ಜಮೀನನ್ನು ಬಗರ್‌ಹುಕುಂ ಆಧಾರದ ಮೇಲೆ ಬಳುವಳಿಯಾಗಿ ನೀಡುವ ಹಾಗಿಲ್ಲ. ಇದರ ಹೊರಗಿನ ಜಮೀನನ್ನು ಭೂರಹಿತರಿಗೆ ಬಳುವಳಿಯಾಗಿ ನೀಡಬೇಕಾಗಿದ್ದಲ್ಲಿ ಅದಕ್ಕೆ ಕೆಲವೊಂದು ನಿಯಮಗಳನ್ನು ಪಾಲಿಸಬೇಕು. 1) ಭೂ ಬಳುವಳಿ ನಿಯಮಗಳ ಪ್ರಕಾರ ಯಾರಾದರು ತಹಸೀಲ್ದಾರರಿಗೆ ಬಗ[...] ಹುಕುಂ ಅರ್ಜಿ ಹಾಕಿಕೊಂಡರೆ ಮೊದಲಿಗೆ ತಹಸೀಲ್ದಾರ[...] ಅದು ನಗರಪಾಲಿಕೆಯ ಮಿತಿಯಿಂದ 18 ಕಿ.ಮಿ. [...] ಹೊರಗಿದೆಯೆ ಎಂದು ಪರಿಶೀಲಿಸಬೇಕು. 2) [...] ನಿಯಮವನ್ನು ಉಲ್ಲಂಘಿಸದಿದ್ದಲ್ಲಿ ಅರ್ಜಿದಾರ[...] ಭೂರಹಿತತೆ, ಆತನ ಆದಾಯ ಇತ್ಯಾದಿಗಳನ[...] ಪರಿಶೀಲಿಸಬೇಕು. 3) ಇದು ಖಾತ್ರಿಯಾದ ಪಕ್ಷದ[...] ಮಾತ್ರ ಅದನ್ನು ತಹಸೀಲ್ದಾರ್ ಸಂಬಂಧಪಟ್ಟ ಡಿಸಿಯವ[...] ರವಾನಿಸಬಹುದು. 4) ಆಗ ಡಿಸಿಯವರು ಸ್ವತಃ ಕೇಳಿಕೊಂ[...] ಜಮೀನಿಗೆ ಹೋಗಿ ಖುದ್ದು ಪರಿಶೀಲಿಸಿ ಅರ್ಜಿದಾ[...] ವಿವರಗಳು ತೃಪ್ತಿಕರವಾಗಿ ಕಂಡುಬಂದಲ್ಲಿ ಮತ್ತು ಯಾವು[...] ನಿಯಮಗಳ ಉಲ್ಲಂಘನೆಯಾಗದಿದ್ದ ಪಕ್ಷದಲ್ಲಿ [...] ಅರ್ಜಿಯನ್ನು ಸ್ಥಳೀಯ ಶಾಸಕರ ನೇತೃತ್ವದ ಸಮಿತಿ[...] ರವಾನಿಸಬಹುದು. 5) ಈ ಸಮಿತಿಯು ಸದರಿ ಅರ್ಜಿ[...] ಬಗ್ಗೆ ತನ್ನ ಸಭೆಯಲ್ಲಿ ಚರ್ಚಿಸಿ, ನಂತರ ಜಮೀನ[...] ಬಳುವಳಿಯಾಗಿ ನೀಡಬಹುದೆ, ಬೇಡವೆ ಎಂಬು[...] ಬಗ್ಗೆ ಶಿಫಾರಸ್ಸು ಮಾಡಬಹುದು. 6) ನೀಡಬಹು[...] ಎಂಬ ಶಿಫಾರಸ್ಸು ಇದ್ದಲ್ಲಿ ಮಾತ್ರ ಸರ್ಕಾರ ಅರ್ಜಿದಾರ[...] ಸಾಗುವಳಿ ಚೀಟಿ ನೀಡಬೇಕು.

ಆದರೆ ಸೀನಪ್ಪನ ಭೂಕಬಳಿಕೆಯ ವಿಚಾರದಲ್ಲಿ [...] ನಿಯಮಗಳೆಲ್ಲಾ ಸಾರಾಸಗಟಾಗಿ ಮುರಿಯಲ್ಪಟ್ಟಿ[...] ಮೊದಲನೆಯದಾಗಿ ಸೀನಪ್ಪನ ವಂಶಸ್ಥರು ಕಬಳಿಸಿರು[...] ಅಷ್ಟೂ ಜಮೀನು ಬೆಂಗಳೂರಿನ ಸೆರಗಿನಲ್ಲೇ ಇದೆ. [...] ಕಿ.ಮೀಗಿಂತ ಹೊರಗಿರಬೇಕೆನ್ನುವ ಪ್ರಾಥಮಿಕ ಅರ್ಹತೆಯ[...] ಅವುಗಳಿಗಿಲ್ಲ. ಸಾಗುವಳಿ ಚೀಟಿಯನ್ನು ನೀಡಲಿ[...] ಬರುವುದಿಲ್ಲ. ಅಲ್ಲದೆ ಒಂದು ಊರಿನ ಬಗರ್‌ಹುಕ[...] ಜಮೀನನ್ನು ಅದೇ ಊರಿನ ಭೂರಹಿತ ಬಡವರ[...] ನೀಡಬೇಕು. ಆದರೆ ಸೀನಪ್ಪ ವಾಸವಿದ್ದ ಮತ್ತು ಆ[...] ಮಕ್ಕಳು, ಮೊಮ್ಮಕ್ಕಳು ಈಗಲೂ ಇರುವ ರಾಂಪುರ[...] ಹೊರತಾಗಿ ಕಾಡಅಗ್ರಹಾರ, ಬಂಡೆಬೊಮ್ಮಸಂದ್ರದಲ[...] ಸರ್ಕಾರಿ ಜಮೀನಿನ ಸಾಗುವಳಿ ಚೀಟಿಯನ್ನೂ ಗಿಟ್ಟಿಸಿಕೊಂ[...] ಡ್ಡಾರೆ. 19.10.2010ರಲ್ಲಿ ರಾಂಪುರದ ಗ್ರಾಮ ಲೆಕ್ಕಾಧಿಕ[...] ನೀಡಿರುವ ವರದಿಯನ್ವಯ ಈ ಒಂದೊಂದು ಸರ್ವೆ[...] ನಂಬರ್‌ನಲ್ಲು ಒಬ್ಬೊಬ್ಬನ ಹೆಸರಿಗೂ ಮೂರ್‍ನಾಲ್ಕು ಬಾ[...] ಜಮೀನನ್ನು ಮಂಜೂರು ಮಾಡಲಾಗಿದೆ. ಉದಾಹರಣ[...] ಕಾಡಅಗ್ರಹಾರದ ಸರ್ವೇ ನಂಬರ್ 34ರಲ್ಲಿ ಸೀನ[...] ಮಗನಾದ ಎಸ್. ರಾಮಾಂಜನಪ್ಪ ಎನ್ನುವವನಿಗೆ ಪ್ರತ್ಯೇಕವ[...] ಐದು ಬಾರಿ ತಲಾ ಎರಡು ಎಕರೆಯಂತೆ ಹತ್ತು ಎ[...] ಮಂಜೂರು ಮಾಡಲಾಗಿದೆ. ಅದೇ ಸರ್ವೇ ನಂಬರ್[...]




ಗ್ರಾಮ ನಮೂನೆ 2 ತಾಲ್ಲೂಕು ಮೊಹರು 1 2 4 0 6 7 9 7 0 9

ರೆಕಾರ್ಡ್ ಆಫ್ ರೈಟ್ಸ್, ಗೇಣಿ ಮತ್ತು ಪಹಣಿ ಪತ್ರಿಕೆ (R.T.C) ಫಾರಂ ನಂ. 16

Print Page No: 1 — Village Account Form No. 2

11/09/2008 12:15:00 PM TO 10/01/2012



Untitled Page

ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿ

UNDER SECRETARY TO CHIEF MINISTER

CHIEF MINISTER'S SECRETARIAT, VIDHANA SOUDHA, BANGALORE

ಪತ್ರದ ಸಂಖ್ಯೆ: CM/ 46871 / REP-GEN / 2013

...ನಪ್ಪನ ತಮ್ಮ ಲಕ್ಷ್ಮಯ್ಯನ ಮಗ ಎಲ್. ನಾರಾಯಣಪ್ಪ ...ಬುದವನಿಗೆ ಪ್ರತ್ಯೇಕವಾಗಿ ನಾಲ್ಕು ಬಾರಿ ಎರಡೆರಡು ...ರೆಯಂತೆ 8 ಎಕರೆಯನ್ನು ಮಂಜೂರು ಮಾಡಲಾಗಿದೆ. ...ಗೆ ಇದೀ ಕುಟುಂಬ ಬೇರೆಬೇರೆ ಹೆಸರಲ್ಲಿ ಗೋಮಾಳದ ...ಮೀನನ್ನು ಲಪಟಾಯಿಸಿಕೊಂಡಿದೆ. ನಿಯಮದ ಪ್ರಕಾರ ...ದು ಕುಟುಂಬಕ್ಕೆ ಒಬ್ಬ ವ್ಯಕ್ತಿಗೆ ಮಾತ್ರ ಬಗರ್‌ಹುಕುಂ ...ಮೀನು ನೀಡಬಹುದೆನ್ನುವ ಮಿನಿಮಮ್ ಜ್ಞಾನವೂ ...ದಾಯ ಅಧಿಕಾರಿಗಳಿಗೆ ಇದ್ದಂತೆ ಕಂಡಿಲ್ಲ.

ಹೋಗಲಿ ಹೀಗೆ ಪಡೆದುಕೊಂಡ ಜಮೀನಿನಲ್ಲಿ ...ಸಿಮೆಯನ್ನಾದರು ಮಾಡುತ್ತಾರಾ ಎಂದರೆ ಅದೂ ...ಲ್ಲ. ಅಕ್ರಮ ಕಲ್ಲುಗಣಿಗಾರಿಕೆ, ಲೇಔಟ್ ಡೆವಲಪ್‌ಮೆಂಟ್ ...ತಹ ರಿಯಲ್ ಎಸ್ಟೇಟ್ ದಂಧೆಗಳೇ ಇವರ ಕಸುಬು. ...ತಅಗ್ರಹಾರದ ಸರ್ವೆ ನಂಬರ್ 34ರಲ್ಲಿ ಗಿಟ್ಟಿಸಿಕೊಂಡ ...ಮಾಳದ ಜಮೀನಿನಲ್ಲಿ ಲಕ್ಷ್ಮಯ್ಯನ ಮಗ ನಾರಾಯಣಪ್ಪ ...ಜಾತ ಜಲ್ಲಿ ಕ್ರಷರ್ ನಡೆಸುತ್ತಿದ್ದಾನೆ. ಅಸಲಿಗೆ ಈ ...ರ್‌ನ ಲೈಸೆನ್ಸ್ 2005ರಲ್ಲೇ ರದ್ದಾಗಿದೆ. ಆದರೂ ...ತ್ತಿ ಹೊತ್ತೂ ಅಕ್ರಮವಾಗಿ ಕಲ್ಲು ಪುಡಿ ಮಾಡುವ ...ಧೆಯಂತೂ ನಿಂತಿಲ್ಲ. ಅಧಿಕಾರಿಗಳಾಗಲಿ, ಪೊಲೀಸ ...ಗಲಿ ಕ್ಯಾರೇ ಎನ್ನುತ್ತಿಲ್ಲ. ಇನ್ನು ಎಸ್.ಎಲ್.ಎನ್. ಲ್ಯಾಂಡ್ ...ವಲಪರ್ಸ್ ಹೆಸರಲ್ಲಿ ಗೋಮಾಳದ ಭೂಮಿಗಳನ್ನು ...ೇಶನಗಳಾಗಿ ಪರಿವರ್ತಿಸಿ ಮಾರಾಟ ಮಾಡಿ ಜನರಿಗೂ ...ೋಸ ಮಾಡುತ್ತಿದ್ದಾರೆ.

ಬಚ್ಚೇಗೌಡನ ಚೇಲಾಗಳು

ಬೆಂಗಳೂರು ಪೂರ್ವ ಮತ್ತು ಹೊಸಕೋಟೆ ...ಸ್ತ್ರೆಯಲ್ಲಿ ಬಿಜೆಪಿಯ ಬಚ್ಚೇಗೌಡನದ್ದೇ ಪ್ರಖ್ಯಾಂಡ ...ಬಲ್ಯ. ಆತನ ಒಬ್ಬೊಬ್ಬ ಚೇಲಾನು ಏನಿಲ್ಲವೆಂದರೆ ...ರಿಂದ ಇಪ್ಪತ್ತು ಕೋಟಿಗೆ ತೂಗುತ್ತಾನೆ. ಸ್ವತಃ ...ಚ್ಚೇಗೌಡನೇ ಬೋಗಸ್ ಹೆಸರುಗಳಲ್ಲಿ ಸರ್ಕಾರಿ ಜಮೀನು ...ಳಿಸಿರುವುದಕ್ಕೆ ಲೆಕ್ಕವೇ ಇಲ್ಲ. ಮೊನ್ನೆ ಮುಖ್ಯಮಂತ್ರಿ ...ರಾಮಯ್ಯ ತನಿಖೆಗೆ ಆದೇಶ ನೀಡಿದ ಶಾಂತನಪುರದ ...11 ಎಕರೆ ಭೂಕಬಳಿಕೆಯಲ್ಲೂ ಬಚ್ಚೇಗೌಡನ ಹೆಸರು ...ಕು ಹಾಕಿಕೊಂಡಿದೆ. ಸೀನಪ್ಪನ ಮಕ್ಕಳು ಕೂಡಾ ...ೇ ಬಚ್ಚೇಗೌಡನ ಚೇಲಾಗಳು. ಸೀನಪ್ಪನ ಮಗ ಎನ್. ...ಕಟಪ್ಪ, ಬಚ್ಚೇಗೌಡನ ಪಾಳೇಗಾರಿಕೆಯಲ್ಲಿ ಗ್ರಾಮ ...ಚಾಯ್ತಿ ಅಧ್ಯಕ್ಷನಾಗಿ ಮೆರೆದಾಡಿದ್ದರೆ, ಅಕ್ರಮ ಕ್ರಷರ್ ...ಸುತ್ತಿರುವ ನಾರಾಯಣಪ್ಪನ ತಮ್ಮ ಮಂಜುನಾಥ್ ...ಇಬ್ಬರೂ ಸೀನಪ್ಪನ ತಮ್ಮನ ಮಕ್ಕಳು) ತಾಲ್ಲೂಕು ...ಚಾಯ್ತಿ ಅಧ್ಯಕ್ಷನಾಗಿ ರುಚಿ ಕಂಡಿದ್ದಾನೆ.


ಈ ಮೊದಲೇ ಉಲ್ಲೇಖಿಸಿದಂತೆ ಆಸ್ತಿ ವಿಚಾರವಾಗಿ ...ರ್ಟ್‌ನಲ್ಲಿ ಸರ್ಕಾರಿ ಆಸ್ತಿ ಎಂದು ಅಫಿಡವಿಟ್ ಸಲ್ಲಿಸಿದ ...ಕರ ಅಷ್ಟೂ ಜಮೀನುಗಳಿಗೆ ಬೋಗಸ್ ಪ್ರಮಾಣ ...ಗಳನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆ. ಹೇಗೂ ...ಚ್ಚೇಗೌಡನ ಪೊಲಿಟಿಕಲ್ ಸಪೋರ್ಟ್ ಇರುವುದರಿಂದ ...ಕಾರಿಗಳನ್ನು ಶಾಮೀಲು ಮಾಡಿಕೊಂಡು ಈ ಕೃತ್ಯ ...ಸುತ್ತಿದ್ದಾರೆ. ಸೀನಪ್ಪನ ಮಕ್ಕಳ ಎಸ್.ಎಲ್.ಎನ್ ಲ್ಯಾಂಡ್ ...ವಲಪರ್ಸ್ ಕಂಪನಿ ಅಡಿಯಲ್ಲಿ ರೆಡಿಯಾಗುತ್ತಿರುವ ...ಔಟ್‌ನಲ್ಲಿ ಬಚ್ಚೇಗೌಡನ ಪಾಲುದಾರಿಕೆ ಇದೆ ಎನ್ನುವ ...ತುಗಳೂ ಕೇಳಿಬರುತ್ತಿವೆ.

...ಮಾಹಿತಿ ಹಕ್ಕು ಕಾರ್ಯಕರ್ತ ಎಂ. ರಾಧಾಕೃಷ್ಣ ಈ ...ರಿತು ತಹಸೀಲ್ದಾರರಿಂದ ಮೊದಲ್ಗೊಂಡು ...ಲ್ಲಾಧಿಕಾರಿವರೆಗೆ ದೂರು ನೀಡಿದ್ದರೂ ಅಧಿಕಾರಿಗಳು ...ೇ ಎನ್ನದಿರುವುದು ಭ್ರಷ್ಟಕೂಟದ ಬಲಾಢ್ಯತೆಯನ್ನು ...ರಿಸುತ್ತದೆ. 2010ರಲ್ಲಿ ಬೆಂಗಳೂರು ಪೂರ್ವ ...ಲ್ಲೂಕಿಗೆ ತಹಸೀಲ್ದಾರ್ ಆಗಿದ್ದ ಸಿ.ಎಲ್. ಶಿವಕುಮಾರ್‌ರಿಗೆ ...ಹಲವಾರು ಬಾರಿ ಈ ಅಕ್ರಮ ಭೂಕಬಳಿಕೆಯ ಕುರಿತು ...ಖೆ ನಡೆಸುವಂತೆ ರಾಧಾಕೃಷ್ಣ ಮನವಿ ಮಾಡಿಕೊಂಡಿದ್ದರೂ ...ವ ಪ್ರಯೋಜನವೂ ಆಗಿರಲಿಲ್ಲ. ಕೊನೆಗೆ ವಿಶೇಷ ...ಲ್ಲಾಧಿಕಾರಿಯಾಗಿದ್ದ ಎಚ್. ರಾಮಾಂಜನೇಯ, ಖುದ್ದು ...ಸೀಲ್ದಾರ್‌ಗೆ ಪತ್ರ ಬರೆದು ತನಿಖೆ ನಡೆಸುವಂತೆ ...ೇಶಿಸಿದರೂ ತಾಲ್ಲೂಕು ಕಚೇರಿ ಕಿಂಚಿತ್ತೂ ಅಲ್ಲಾಡಿಲ್ಲ. ...ಷ್ಟ್ಯಾಕೆ 17.08.2013ರಲ್ಲಿ ಸ್ವತಃ ಮುಖ್ಯಮಂತ್ರಿಗಳ ...ಜ ಕಾರ್ಯದರ್ಶಿಗಳೇ ಕಂದಾಯ ಇಲಾಖೆಯ ಪ್ರಧಾನ ...ರ್ಯದರ್ಶಿಗೆ ಪತ್ರ ಸಂಖ್ಯೆ ಅಒ/46871/ ...12013 ಅಡಿಯಲ್ಲಿ ಈ ಕುಟುಂಬದ ...ಮ ಭೂಕಬಳಿಕೆ ಬಗ್ಗೆ ತನಿಖೆ ನಡೆಸುವಂತೆ ಪತ್ರ ...ದಿದ್ದರೂ ಇಲ್ಲಿಯವರೆಗೆ ತನಿಖೆಯ ಸುಳಿವು ಕೂಡಾ ...ಸರ್ಕಾರವನ್ನೇ ದಿಕ್ಕು ತಪ್ಪಿಸುವಂತಹ ಅಧಿಕಾರಿ ...ಬಿಟ್ಟರೆ ಗೋಮಾಳದ ಜಮೀನೇನು ವಿಧಾನಸೌಧವೇ ...ನಿಯಾದರೂ ಅಚ್ಚರಿ ಪಡಬೇಕಿಲ್ಲ.

...ಮುಖ್ಯಮಂತ್ರಿಗಳು ಈಗ ತೆಗೆದುಕೊಂಡಿರುವ ಖಡಕ್ ...ರ್ಧಾರದಿಂದಾಗಿ ಭೂಗಳ್ಳರು ಮತ್ತು ಇಂತಹ ...ಕಾರಿಗಳಿಗೆ ತಕ್ಕ ಶಾಸ್ತಿಯಾಗುವ ದಿನ ದೂರವೇನೂ ...ಆ ಸರದಿಯಲ್ಲಿ ಬಚ್ಚೇಗೌಡನಂತಹ ರಾಜಕಾರಣಿಗಳು, ...ಪ್ಪನ ಮಕ್ಕಳಂತಹ ಭೂಗಳ್ಳರು, ಅವರಿಗೆ ಸಾಥ್ ...ವ ಭ್ರಷ್ಟ ವೈಟ್‌ಕಾಲರ್ ಅಧಿಕಾರಿಗಳು ಖಂಡಿತ ...ಬೇಕು.

● ಗಿರೀಶ್ ತಾಳಿಕಟ್ಟೆ

ಹೊಳಲ್ಕೆರೆ ಮಾಜಿ ಶಾಸಕನ ತೆಕ್ಕೆಯಲ್ಲಿ... ಸೆಕ್ಸ್ ಸ್ಕ್ಯಾಂಡಲ್ ಮತ್ತು ಮರ್ಡರ್ ಮಿಸ್ಟರಿ



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತು ಮಕಾಡೆ ಮಲಗಿರುವ ಹೊಳಲ್ಕೆರೆಯ ಮಾಜಿ ಶಾಸಕ ಚಂದ್ರಪ್ಪ ಸದ್ಯಕ್ಕಂತು ರಾಜಕೀಯ ನಿರುದ್ಯೋಗಿ. ಚುನಾವಣೆಯ ಆ ಸೋಲಿನಿಂದ ಆತ ಪಾಠವನ್ನೇನೂ ಕಲಿತಿಲ್ಲ, ಮುಂದೆ ಕಲಿಯುವಂತೆಯೂ ಕಾಣುತ್ತಿಲ್ಲ. ಯಾಕೆಂದರೆ ದಿನಕ್ಕೊಂದು ಯಡವಟ್ಟುಗಳನ್ನು ಮೈಮೇಲೆ ಎಳೆದುಕೊಳ್ಳುತ್ತಲೇ ಬರುತ್ತಿದ್ದಾನೆ. ಮೂಲತಃ ವಿಚ್ಛಿದ್ರಕಾರಿ ವ್ಯಕ್ತಿತ್ವದ ಚಂದ್ರಪ್ಪನ ಹೆಸರು ಈಗ ಎರಡು ಪ್ರಕರಣಗಳಲ್ಲಿ ತಗುಲಿಕೊಂಡಿದೆ. ಒಂದು ಆತನೇ ನಡೆಸುತ್ತಿರುವ ಎಸ್.ಎಲ್.ವಿ ನರ್ಸಿಂಗ್ ಕಾಲೇಜ್ ಪ್ರಿನ್ಸಿಪಾಲ್‌ನ ಲೈಂಗಿಕ ಕಿರುಕುಳ ಆರೋಪ, ಮತ್ತೊಂದು ಅದೇ ಕಾಲೇಜಿನ ಆವರಣ ದಲ್ಲಿ ಚಂದ್ರಪ್ಪನ ಚೇಲಾಗಳು ನಡೆಸಿದ ವೃದ್ಧೆಯೊಬ್ಬಳ ಹತ್ಯೆ!

ಪ್ರಿನ್ಸಿಪಾಲ್‌ನ ಸೆಕ್ಸ್ ಸ್ಕ್ಯಾಂಡಲ್

ಚಿತ್ರದುರ್ಗ ಮತ್ತು ಭರಮಸಾಗರದ ತುಂಬಾ ಬಿ.ಎ, ಬಿ.ಎಡ್, ಡಿ.ಎಡ್, ಪ್ಯಾರಾಮೆಡಿಕಲ್, ನರ್ಸಿಂಗ್ ಅಂತೆಲ್ಲಾ ನಾಯಿಕೊಡೆಯಂತೆ ಬೀದಿಗೊಂದು ಕಾಲೇಜು ತೆರೆದು ಶಿಕ್ಷಣ ಮಾರಾಟಕ್ಕೆ ನಿಂತಿರುವ ಚಂದ್ರಪ್ಪ ತನ್ನ ಕಾಲೇಜಿನಲ್ಲಿ ಓದುವ ಮಕ್ಕಳ ಮಾನಕ್ಕೆ ಎಳ್ಳರ್ಧಕಾಳಿನ ಬೆಲೆ ಕೊಟ್ಟವನಲ್ಲ. ಅಂತಹ ಚಂದ್ರಪ್ಪನಿಗೆ ಚಿತ್ರದುರ್ಗದ ಎಸ್.ಎಲ್.ವಿ ನರ್ಸಿಂಗ್ ಕಾಲೇಜು ದುಡ್ಡು ತಂದುಕೊಡುವ ಕಾರ್ಖಾನೆಯಿದ್ದಂತೆ. ಕೇರಳ, ತಮಿಳುನಾಡಿನ ಹೆಣ್ಣುಮಕ್ಕಳನ್ನು ತಂದು ಎಸ್.ಎಲ್.ವಿ. ಕಾಲೇಜಿಗೆ ಅಡ್ಮಿಶನ್ ಮಾಡಿಸುವ ಶಿಕ್ಷಣ ವ್ಯಾಪಾರದ ತಂಡವೇ ಚಂದ್ರಪ್ಪನ ಬಳಿಯಿದೆ. ಹೊರರಾಜ್ಯದ ವಿದ್ಯಾರ್ಥಿನಿಯರಿಂದ ಡೊನೇಷನ್ ನೆಪದಲ್ಲಿ 3 ರಿಂದ 5 ಲಕ್ಷ ಕೀಳುವ ಚಂದ್ರಪ್ಪನ ಗ್ಯಾಂಗು ಶಿಕ್ಷಣದ ಹೆಸರಲ್ಲಿ ದುಡ್ಡು ಮಾಡುವ ದಂಧೆ ಕಂಡುಕೊಂಡಿದೆ.

ಇಂಥಾ ಎಸ್.ಎಲ್.ವಿ. ಕಾಲೇಜಿಗೆ ಒಬ್ಬ ಪ್ರಿನ್ಸಿಪಾಲ್ ಮಹಾಶಯನಿದ್ದಾನೆ. ಆವನ ಹೆಸರು ಮಹಾಂತೇಶ್. ತನ್ನ ವಿದ್ಯಾರ್ಥಿನಿಗೇ ಲೈಂಗಿಕ ಕಿರುಕುಳ ಕೊಟ್ಟು ಈಗ ಚಂದ್ರಪ್ಪನ ಪ್ರಭಾವದ ಮರೆಯಲ್ಲಿ ಎಸ್ಕೇಪಾಗಲು ಹವಣಿಸುತ್ತಿರೋದು ಇದೇ ಮಹಾಂತೇಶ. ಈತ ಅದ್ಯಾವ ಡಿಗ್ರಿ ಮಾಡಿ ಪ್ರಿನ್ಸಿಯಾಗಿ ವಕ್ಕರಿಸಿದನೋ ಭಗವಂತನೇ ಬಲ್ಲ. ಒಟ್ಟನಲ್ಲಿ ಚಂದ್ರಪ್ಪನ ದುಡ್ಡು ಮಾಡುವ ದಂಧೆಗೆ ಹೇಳಿ ಮಾಡಿಸಿದಂತಹ ಗಿರಾಕಿ.

ತಮಿಳುನಾಡು ಮೂಲದ ಮಂಜುಳಾ ಎಂಬ ವಿದ್ಯಾರ್ಥಿನಿ ಕಳೆದ ನಾಲ್ಕು ವರ್ಷಗಳಿಂದ ಇದೇ ಎಸ್.ಎಲ್.ವಿ ಕಾಲೇಜಿನಲ್ಲಿ ನರ್ಸಿಂಗ್ ಓದುತ್ತಿದ್ದಾಳೆ. ಕೇವಲ ತಾನು ಬಂದಿದ್ದಲ್ಲದೆ ಪ್ರತೀ ವರ್ಷ ತಮಿಳುನಾಡಿನಿಂದ ತನಗೆ ಗೊತ್ತಿರುವ ಮೂರ್ನಾಲ್ಕು ಹುಡುಗಿಯರನ್ನೂ ಇಲ್ಲಿಗೆ ಕರೆತಂದು ಸೇರಿಸುತ್ತಿದ್ದಳು. ಹಾಗೆ ನೋಡಿದರೆ ಮಂಜುಳ ಚಂದ್ರಪ್ಪನ ತಿಜೂರಿಗೆ ಲಾಭ ತಂದುಕೊಡುವ ವಿದ್ಯಾರ್ಥಿನಿಯಾಗಿದ್ದಳು. ಅಂತಹವಳ ಮೇಲೆ ಪ್ರಿನ್ಸಿ ಮಹಾಂತೇಶನ ಕಾಮದ ಕಣ್ಣು ಬಿದ್ದಿತ್ತು. ತನ್ನ ವಿಕೃತ ಕಾಮಕೇಳಿಗೆ ಆಕೆಯನ್ನು ಎಳೆಯಲು ಆತ ವಿಧವಿಧವಾಗಿ ಯತ್ನಿಸಿದ್ದ. 'ಬೆಂಗಳೂರಿಗೆ ಬಾ ಅಲ್ಲಿ ನನ್ನದೊಂದು ಪ್ರೈವೇಟ್ ಮನೆಯಿದೆ, ಯಾರ ಭಯವೂ ಇರೋದಿಲ್ಲ' ಎಂಬ ವಿಲಕ್ಷಣ ಆಫರ್‌ಗಳನ್ನೂ ಆಕೆಯ ಮುಂದಿಟ್ಟಿದ್ದ.

ಆದರೆ ಪ್ರಿನ್ಸಿಪಾಲ್ ಎನ್ನುವ ಗೌರವದಿಂದಲೊ ಅಥವಾ ದೂರದ ತಮಿಳುನಾಡಿನಿಂದ ಬಂದಿರುವ ತನಗೆ ಇಲ್ಲಿ ಯಾರ ಬೆಂಬಲವೂ ಇಲ್ಲವೆನ್ನುವ ಅಸಹಾಯಕತೆಯಿಂದಲೊ ಆ ಹುಡುಗಿ ಮಹಾಂತೇಶನ ಉಪಟಳವನ್ನು ಸಹನೆಯಿಂದಲೇ ಸಹಿಸಿಕೊಂಡು ಬಂದಿದ್ದಳು. ಆದರೆ ಅವನ ಬಯಕೆಗಳಿಗೆ ಕಿಂಚಿತ್ತೂ ಬಗ್ಗಿರಲಿಲ್ಲ. ಮಹಾಂತೇಶ ಮಾತ್ರ ಅಷ್ಟಕ್ಕೇ ಸುಮ್ಮನಾಗಿರಲಿಲ್ಲ. ಒಂದಲ್ಲ ಒಂದು ತಂತ್ರದ ಮೂಲಕ ವಿದ್ಯಾರ್ಥಿನಿಯನ್ನು ಮುಕ್ಕಬೇಕು ಅಂತ ಸ್ಕೆಚ್ ಹಾಕುತ್ತಲೇ ಇದ್ದ.

ಅದೇವೇಳೆಗೆ ಮಂಜುಳಾ ಅಂತಿಮ ವರ್ಷದ ಪರೀಕ್ಷೆ ಬರೆಯುವ ಸಮಯ ಬಂದಿತ್ತು. ಈ ಪರೀಕ್ಷೆ ಬರೆದರೆ ಮತ್ತಾಕೆ ತನ್ನ ಕೈಗೆ ಸಿಗದಂತೆ ತಮಿಳುನಾಡು ಸೇರಿಕೊಂಡು ಬಿಡುತ್ತಾಳೆ, ಇನ್ಯಾವತ್ತೂ ತನ್ನಾಸೆ ಈಡೇರುವುದೇ ಇಲ್ಲ ಎಂಬ ಹಿಕ್ಕಲುತನಕ್ಕೆ ಬಿದ್ದ ಮಹಾಂತೇಶ ಆ ಪರೀಕ್ಷೆಯನ್ನೇ ತನ್ನ ಬಂಡವಾಳ ಮಾಡಿಕೊಳ್ಳುವ ಹುನ್ನಾರ ನಡೆಸಿದ್ದ. ಅದರಂತೆ ಮೊನ್ನೆ ನಡೆಯಲಿದ್ದ ಪ್ರಾಕ್ಟಿಕಲ್ ಪರೀಕ್ಷೆಗೆ ಮಂಜುಳಾಗೆ ಅವಕಾಶವನ್ನೇ ನೀಡಿರಲಿಲ್ಲ.

ಅದು ಆಕೆಯ ಭವಿಷ್ಯದ ಪ್ರಶ್ನೆಯಾಗಿತ್ತಾದ್ದರಿಂದ ಬೆಚ್ಚಿಬಿದ್ದ ಮಂಜುಳಾ ಸೀದಾ ಹೋಗಿ ನಿಂತದ್ದು ಕಾಲೇಜಿನ ಕಾರ್ಯದರ್ಶಿ ಚಂದ್ರಪ್ಪನ ಮುಂದೆ. ಪ್ರಿನ್ಸಿಪಾಲ್ ಮಹಾಂತೇಶ್‌ನ ಕಿರುಕುಳವನ್ನು ಚಾಚೂತಪ್ಪದೇ ಹೇಳಿದ ಬಳಿಕ ಆಕೆಯ ನೆರವಿಗೆ ಧಾವಿಸಬೇಕಿದ್ದ ಚಂದ್ರಪ್ಪ ಅದೊಂದು ದೊಡ್ಡ ವಿಷಯವೇ ಅಲ್ಲವೆನ್ನುವಂತೆ 'ಅದೆಲ್ಲ ಕಾಮನ್ ಹೋಗಮ್ಮ, ಎಜುಕೇಶನ್ ಕಂಪ್ಲೀಟ್ ಆಗಬೇಕೆಂದರೆ ಇಂಥ ಸಣ್ಣಪುಟ್ಟ ಕಿರಿಕಿರಿಗಳನ್ನು ಸಹಿಸಿಕೋಬೇಕು' ಎಂದು ಮಂಜುಳಾಳನ್ನೇ ಲೈಂಗಿಕ ಕಿರುಕುಳಕ್ಕೆ ಅಣಿಮಾಡುವ ಪ್ರಯತ್ನ ಮಾಡಿದ್ದ. ಅಷ್ಟಲ್ಲದೇ 'ನೀನು ಈ ವರ್ಷವೂ ತಮಿಳುನಾಡಿನಿಂದ ವಿದ್ಯಾರ್ಥಿನಿಯರನ್ನು ತಂದು ಅಡ್ಮಿಶನ್ ಮಾಡಿಸು' ಎಂಬ ವ್ಯವಹಾರವನ್ನೂ ಮಾತನಾಡಿ ಆಕೆಯನ್ನು ಸಾಗಹಾಕಿದ್ದ.

ಅದು ಹೇಗೋ ಸುದ್ದಿ ಮಾಧ್ಯಮಗಳಿಗೆ ತಲುಪಿತ್ತು. ಪ್ರಿನ್ಸಿಪಾಲ್‌ನ ಸೆಕ್ಸ್ ಸ್ಕ್ಯಾಂಡಲ್ ದೊಡ್ಡ ರಾದ್ಧಾಂತವಾಗುವ ಸೂಚನೆ ಸಿಗುತ್ತಿದ್ದಂತೆಯೇ ತಾನೇ ಒಂದು ಪತ್ರಿಕಾಗೋಷ್ಠಿ ನಡೆಸಿದ ಚಂದ್ರಪ್ಪ ತಿಪ್ಪೆ ಸಾರಿಸುವ ಯತ್ನ ಮಾಡಿದ್ದ. ಅವತ್ತು ಪತ್ರಿಕಾಗೋಷ್ಠಿಯಲ್ಲಿ ಚಂದ್ರಪ್ಪ ಆಡಿದ ಮಾತುಗಳನ್ನು ಕೇಳಿ ಖುದ್ದು ಪತ್ರಕರ್ತರೇ ಸುಸ್ತಾಗಿ ಹೋಗಿದ್ದರು. ಚಂದ್ರಪ್ಪನ ಮಾತುಗಳಲ್ಲೇ ದಾಖಲಿಸುವುದಾದರೆ 'ನಂ ಪ್ರಿನ್ಸಿಪಾಲು ಒಂಥರಾ ನಿತ್ಯಾನಂದ ಸ್ವಾಮಿ ಇದ್ದಂಗೆ. ಅವ್ನಿಗೆ ಗಂಡ್‌ಸ್ತನ ಅನ್ನೋದೇ ಇಲ್ಲ, ಅಂಗನೋಡಿದರೆ ಆಕಿಗೆ ನಾನೇ ಏನಾರ ಮಾಡಬೇಕೊ ಹೊರ್‍ತು ಗಂಡ್ಸೇ ಅಲ್ಲದ ಈ ಪ್ರಿನ್ಸಿಪಾಲು ಇನ್ನೇನು ಮಾಡಿದ್ದಾನು?' ಇಂತದ್ದೊಂದು ಥರ್ಡ್‌ಕ್ಲಾಸ್ ಮಾತು ಆತನ ಬಾಯಿಂದ ಬರುತ್ತದೆಂದರೆ ಅವನ ಯೋಗ್ಯತೆ ಇನ್ನೆಂತದ್ದಿರಬೇಡ. ತನ್ನ ನಾಲಾಯಕ್ ಪ್ರಿನ್ಸಿಪಾಲನನ್ನು ರಕ್ಷಿಸುವ ಭರಾಟೆಯಲ್ಲಿ ಒಬ್ಬ ಹೆಣ್ಣುಮಗಳ, ಅದರಲ್ಲೂ ತನ್ನದೇ ಕಾಲೇಜಿನ ವಿದ್ಯಾರ್ಥಿನಿಯ ಮಾನವನ್ನೇ ಹರಾಜಾಕುವ ಮಟ್ಟಕ್ಕೆ ಚಂದ್ರಪ್ಪ ಇಳಿಯುತ್ತಾನೆಂದರೆ ಮತ ಹಾಕಿದ ಜನರ ಮಾನ ಕಾಯುವನೇ? ಜನ ಇನ್ಯಾವ ಭರವಸೆ ಇಟ್ಟು ಚಂದ್ರಪ್ಪನ ಮುಸುಡಿಗೆ ಓಟು ಒತ್ತಬೇಕು?

ಯಾವಾಗ ಪರೀಕ್ಷೆ ಬರೆಯಲಿಕ್ಕೆ ಪ್ರಿನ್ಸಿ ಅವಕಾಶ ನೀಡಲಿಲ್ಲವೊ, ಚಂದ್ರಪ್ಪ ಎನ್ನುವ ಕಾರ್ಯದರ್ಶಿ ಈ ಕುರಿತು ಕ್ಯಾರೇ ಎನ್ನಲಿಲ್ಲವೋ ಮಂಜುಳಾ ನೇರವಾಗಿ ಬೆಂಗಳೂರಿನ ರಾಜೀವ್ ಗಾಂಧಿ ಯುನಿವರ್ಸಿಟಿ ರಿಜಿಸ್ಟ್ರಾರ್‌ರಿಗೆ ಪ್ರಕರಣವನ್ನು ವಿವರಿಸಿ ನ್ಯಾಯ ಬೇಡಿದ್ದಳು. ತಕ್ಷಣವೇ ಎಸ್.ಎಲ್.ವಿ. ಕಾಲೇಜಿನ ಪ್ರಿನ್ಸಿಗೆ ಎಚ್ಚರಿಕೆ ನೀಡಿದ ವಿವಿಯ ರಿಜಿಸ್ಟ್ರಾರ್ ಖುದ್ದಾಗಿ ಪತ್ರ ಬರೆದು 'ಇದು ಹುಡುಗಿಯ ಜೀವನದ ಪ್ರಶ್ನೆ. ಈ ವಿಷಯ ಹಗರಣವಾಗುವ ಮೊದಲು ಪರೀಕ್ಷೆ ಬರೆಯಲು ಅನುಮತಿ ನೀಡಿ. ಮುಂದಿನದನ್ನು ಆಮೇಲೆ ಪರಿಗಣಿಸಿ' ಎನ್ನುವ ಆದೇಶವನ್ನೂ ರವಾನಿಸಿದ್ದರು.

ಶೈಕ್ಷಣಿಕ ವ್ಯವಸ್ಥೆಯ ಬಗ್ಗೆ ಕಿಂಚಿತ್ತಾದರು ಪ್ರಾಥಮಿಕ ಜ್ಞಾನ ಇದ್ದಿದ್ದೇ ಆದರೆ ವಿವಿ ಒಂದರ ರಿಜಿಸ್ಟ್ರಾರ್‌ರ ಘನತೆ ಎಂತದ್ದು, ಅವರ ಆದೇಶಕ್ಕೆ ಹೇಗೆ ಬೆಲೆ ಕೊಡಬೇಕು ಎನ್ನುವ ಪ್ರಜ್ಞೆ ಚಂದ್ರಪ್ಪನಿಗೆ ಇರುತ್ತಿತ್ತು. ಆದರೆ ಕಾಸು ಮಾಡಲಿಕ್ಕಷ್ಟೇ ಕಾಲೇಜು ತೆರೆದು ಕೂತಿರುವ ಚಂದ್ರಪ್ಪನಿಗೆ ಅಷ್ಟುಮಾತ್ರ ಜವಾಬ್ದಾರಿಯಾದರೂ ಎಲ್ಲಿಂದ ಬರಬೇಕು. 'ಅವನ್ಯಾವ ದಾಸಯ್ಯ ನನಗೆ ಆಜ್ಞೆ ಮಾಡಲು. ಇಂಥವರನ್ನು ನಾನು ಬಾಳ ನೋಡಿದ್ದೇನೆ' ಎಂದು ಬಹಿರಂಗವಾಗಿ ಅಬ್ಬರಿಸಿ ರಿಜಿಸ್ಟ್ರಾರ್ ಆದೇಶಪತ್ರಕ್ಕೆ ಕಸದಬುಟ್ಟಿಯ ದಾರಿ ತೋರಿದ್ದ. ಆ ಮೂಲಕ ಪ್ರಿನ್ಸಿಪಾಲನ ಕಾಮತೃಷೆಗೆ ಸಹಕರಿಸಿದ ಏಕಮಾತ್ರ ಕಾರಣವಿಟ್ಟುಕೊಂಡು ಅಮಾಯಕ ಹುಡುಗಿಯೊಬ್ಬಳ ಭವಿಷ್ಯವನ್ನೇ ಚಂದ್ರಪ್ಪ ಹೊಸಕಿ ಹಾಕಿದ್ದಾನೆ.

2013ರಲ್ಲಿ ರಾಜ್ಯದ 15 ರಿಂದ 20 ಹುಡುಗಿಯರಿಗೆ ಅಡ್ಮಿಶನ್ ನೀಡುವ ಭರವಸೆ ಕೊಟ್ಟು ಪ್ರತಿಯೊಬ್ಬರಿಂದ 4 ಲಕ್ಷ ಗೆಬರಿ, ಕೊನೆಗೆ ಹೊರರಾಜ್ಯದ ರೊಕ್ಕಸ್ಥ ಹುಡುಗರಿಗೆ ಮಣೆಹಾಕಿ ಇಲ್ಲಿನ ವಿದ್ಯಾರ್ಥಿಗಳಿಗೆ ಅಡ್ಮಿಶನ್ ನೀಡದೆ ಅವರ ಜೀವನದ ಜೊತೆ ಆಟ ಆಡಿದ್ದ ಚಂದ್ರಪ್ಪ ಇದೀಗ ತಾನು ಹೊರರಾಜ್ಯದ ವಿದ್ಯಾರ್ಥಿಗಳಿಗೂ ಸೇಫ್ ಅಲ್ಲ ಎನ್ನುವುದನ್ನು ಸಾಬೀತು ಮಾಡಿದ್ದಾನೆ. ಶಿಕ್ಷಣ ಇಲಾಖೆಯು ಚಂದ್ರಪ್ಪನ ಶಿಕ್ಷಣ ವ್ಯಾಪಾರದ ಮೇಲೆ ನಿಗಾ ಇಟ್ಟಿದ್ದಿದ್ದರೆ ಇಷ್ಟೊತ್ತಿಗಾಗಲೆ ಆತನ ಶಿಕ್ಷಣ ಮಂಡಿಗಳನ್ನು ಮುಚ್ಚಿ ಚಂದ್ರಪ್ಪನ ಕೈಗೆ ಕೋಳ ತೊಡಿಸಬೇಕಾಗುತ್ತಿತ್ತು. ಆದರೆ ವ್ಯವಸ್ಥೆಯನ್ನೇ ಘಳಗಿಸುವ ದಗಾಕೋರತನ ಚಂದ್ರಪ್ಪನಿಗೆ ಸಿದ್ಧಿಸಿರೋದರಿಂದ ರಾಜಾರೋಷವಾಗಿ ಓಡಾಡಿಕೊಂಡಿದ್ದಾನೆ.

ವೃದ್ಧೆಯ ಮರ್ಡರ್ ಮಿಸ್ಟರಿ

ಚಂದ್ರಪ್ಪ ಅದೆಂತಹ ವಿಕೃತ ಆಸಾಮಿ ಎನ್ನುವುದಕ್ಕೆ ಸಾಕ್ಷಿಯಾದ ಅದೇ ಎಸ್.ಎಲ್.ವಿ ಕಾಲೇಜು ಅವನ ಕಿರಾತಕತನಕ್ಕೂ ಸಾಕ್ಷಿಯಾಗಿದೆ. ಕಾಲೇಜಿನ ಆವರಣದಲ್ಲಿ ನಡೆದ ಈ ಕೊಲೆ ಕೇಸಿನಲ್ಲಿ ಪೊಲೀಸರು ಸ್ವಲ್ಪ ಟಫ್ ಆಗಿದ್ದರೂ ಚಂದ್ರಪ್ಪನಿಗೆ ಒಂದು ಪಾಠ ಕಲಿಸಬಹುದಿತ್ತು. ಆದರೆ ಏನೂ ಅರಿಯದ ಚಂದ್ರಪ್ಪನ ಕಾರ್ ಡ್ರೈವರ್ ಅಮಾಯಕ ಮಂಜುನಾಥಸ್ವಾಮಿಯನ್ನು ಕೊಲೆ ಕೇಸಲ್ಲಿ ಫಿಟ್ ಮಾಡಿ ಜೈಲಿಗೆ ತಳ್ಳಿದ್ದಾರೆ.

ಈ ಪ್ರಕರಣ ನಡೆದದ್ದು ಆಗಸ್ಟ್ 25ರಂದು. ಎಸ್.ಎಲ್.ವಿ ಕಾಲೇಜಿನ ಅಂಗಳದಲ್ಲಿ ಬಿದ್ದಿರುವ ಚಿಂದಿ ಆಯಲು ವೆಂಕಟೇಶ್ವರ ಬಡಾವಣೆಯ ಸ್ಲಂ ಏರಿಯಾದಿಂದ ಮಾಲಾಬಾಯಿ ದಿನನಿತ್ಯ ಬಂದುಹೋಗುತ್ತಿದ್ದಳು. ಹೀಗೆ ಬಂದುಹೋಗುವ ಮಾಲಾಬಾಯಿಗೆ ಖುದ್ದು ಚಂದ್ರಪ್ಪನೆ ಹಲವಾರು ಬಾರಿ ಎಚ್ಚರಿಕೆ ನೀಡಿದ್ದ. ಆದರೂ ಹೊಟ್ಟೆಪಾಡು ಬಿಡಬೇಕಲ್ಲ, ಪ್ರತಿ ದಿನ ಬಂದು ಚಿಂದಿ ಆಯ್ದುಕೊಂಡು ಹೋಗುತ್ತಿದ್ದಳು.

ಅದೇರೀತಿ ಅವತ್ತೂ ಕಾಲೇಜಿನ ಆವರಣಕ್ಕೆ ಬಂದಿದ್ದಳು. ಅವಳ ದುರಾದೃಷ್ಟಕ್ಕೆ ಅದೇ ಘಳಿಗೆಯಲ್ಲಿ ಚಂದ್ರಪ್ಪ ಕೂಡಾ ತನ್ನ ಪಟಾಲಂ ಸಮೇತ ಕಾಲೇಜಿನಲ್ಲಿದ್ದ. ಮಾಲಾಬಾಯಿಯನ್ನು ನೋಡುತ್ತಿದ್ದಂತೆಯೇ ಪಿತ್ತನೆತ್ತಿಗೇರಿಸಿಕೊಂಡ ಚಂದ್ರಪ್ಪ ಮಾಲಾಬಾಯಿಯಂತ ಗುಬ್ಬಿ ಮೇಲೆ ಪೌರುಷ ತೋರಲು ಮುಂದಾಗಿದ್ದ. ಚಂದ್ರಪ್ಪನೇ ಎಗರಾಡಿದ ಮೇಲೆ ಅವನ ಚೇಲಾ ಪಡೆ ಸುಮ್ಮನಿದ್ದೀತೆ, ಶಹಬ್ಬಾಸ್‌ಗಿರಿ ಗಿಟ್ಟಿಸಿಕೊಳ್ಳಲು ಅವರೂ ಮಾಲಾಬಾಯಿ ಮೇಲೆ ಹಲ್ಲೆಗೆ ಮುಂದಾಗಿದ್ದರು. ಅಪಾಯದ ಮುನ್ಸೂಚನೆ ಅರಿತ ಲಘುಬಗೆಯಲ್ಲಿ ಮಾಲಾಬಾಯಿ ಅಲ್ಲಿಂದ ಕಾಲ್ಕೀಳಲು ಯತ್ನಿಸಿದ್ದಳು. ಅಷ್ಟರಲ್ಲೇ ಚಂದ್ರಪ್ಪನ ಪಟಾಲಂನಲ್ಲಿದ್ದ ಮಂಜುನಾಥ್ ಎಂಬ ಆಸಾಮಿ ಸುಮಾರು ಸೈಜಿನ ಕಲ್ಲೊಂದನ್ನು ಆಕೆಯತ್ತ ಗುರಿಮಾಡಿ ಬೀಸಿದ್ದ. ಕಲ್ಲು ಆಯಕಟ್ಟಿನ ಜಾಗಕ್ಕೇ ಬಿದ್ದಿದ್ದೇ ತಡ ನಾಲ್ಕೆಜ್ಜೆ ನಡೆಯಲೂ ಆಗದ ಮಾಲಾಬಾಯಿ ಅಲ್ಲೇ ಕುಸಿದುಬಿದ್ದಿದ್ದಳು.

ಮನುಷ್ಯತ್ವದ ಸೆಲೆ ಕಿಂಚಿತ್ತಾದರು ಇದ್ದಿದ್ದರೆ ಆಕೆಯನ್ನು ಆಸ್ಪತ್ರೆಗೆ ದಾಖಲಿಸುವ ಇಲ್ಲವೇ ಅಲ್ಲೇ ಉಪಚರಿಸುವ ಕೆಲಸಕ್ಕಾದರೂ ಕೈಹಾಕಬೇಕಿತ್ತು. ಆದರೆ ದುಷ್ಟ ಚಂದ್ರಪ್ಪ ಕೂಡಲೇ ಅಲ್ಲಿಂದ ಪರಾರಿಯಾಗಿದ್ದ. ಪೆಟ್ಟುತಿಂದ ಮಾಲಾಬಾಯಿ ಮತ್ತೆ ಮೇಲೇಳಲೇ ಇಲ್ಲ! ಅವತ್ತೇ ಮಾಲಾಬಾಯಿಯ ಮಗಳು ಸ್ವಪ್ನ ಚಿತ್ರದುರ್ಗದ ಬಡಾವಣೆ ಠಾಣೆಯಲ್ಲಿ ಕೇಸು ದಾಖಲಿಸಿದ್ದಳು. ಪೊಲೀಸರು ಯಥಾಪ್ರಕಾರ ಚಂದ್ರಪ್ಪನ ಮೇಲೆ ಯಾವುದೇ ಕ್ರಮ ಜರುಗಿಸದೇ ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರಕ್ಕೆ ಮುಂದಾಗಿದ್ದರು.

ಕೊಲೆಯಾದ ಮಾಲಾಬಾಯಿ ಕಡೆಯವರಿಂದ ಅದ್ಯಾವ ಒತ್ತಡ ಬಂತೋ ಪೊಲೀಸರು ಅನಿವಾರ್ಯವಾಗಿ ಕಾರ್ಯೋನ್ಮುಖವಾಗಬೇಕಾಗಿ ಬಂದಿತ್ತು. ಸೆಪ್ಟೆಂಬರ್ 11ನೇ ತಾರೀಖು ಪೊಲೀಸರು ತರಾತುರಿಯಲ್ಲಿ ಚಂದ್ರಪ್ಪನ ಕಾರ್ ಡ್ರೈವರ್ ಮಂಜುನಾಥಸ್ವಾಮಿಯನ್ನು ಮಾಲಾಬಾಯಿ ಕೊಲೆ ಕೇಸಲ್ಲಿ ಅರೆಸ್ಟ್ ಮಾಡಿ ಜೈಲಿಗಟ್ಟಿದ್ದಾರೆ. ಆದರೆ ಅಸಲಿ ಸಂಗತಿಯೆಂದರೆ ಮಾಲಾಬಾಯಿಯನ್ನು ಕೊಂದದ್ದು ಡ್ರೈವರ್ ಮಂಜುನಾಥ ಸ್ವಾಮಿಯಲ್ಲ, ಚಂದ್ರಪ್ಪನ ಪಟಾಲಂನಲ್ಲಿದ್ದ ಮತ್ತೊಬ್ಬ ಮಂಜುನಾಥ್. ತನ್ನನ್ನು ಬಂಧಿಸಲು ಪೊಲೀಸರು ಸಜ್ಜಾಗುತ್ತಿದ್ದಾರೆನ್ನುವ ಸುದ್ದಿ ಕೊಲೆಗಡುಕ ಮಂಜುನಾಥನ ಕಿವಿಗೆ ಬೀಳುತ್ತಿದ್ದಂತೆಯೇ ಆತ ಕೈಯಲ್ಲಿ ಮಚ್ಚು ಹಿಡಿದು ಚಂದ್ರಪ್ಪನ ಮನೆಗೆ ನುಗ್ಗಿದ್ದ. ಒಂದುವೇಳೆ ನಾನೇನಾದರೂ ಜೈಲಿಗೆ ಹೋಗಲೇಬೇಕಾಗಿ ಬಂದರೆ ಮೊದಲು ನಿನ್ನನ್ನು ಇದೇ ಮಚ್ಚಿನಿಂದ ತೆಗೆದು ಆಮೇಲೆ ಕಂಬಿ ಎಣಿಸುತ್ತೇನೆ ಎಂದು ಚಂದ್ರಪ್ಪನ ಮುಂದೆ ಮಂಜುನಾಥ ಅಬ್ಬರಿಸಿದ್ದ. ಆಗಲೇ ಚಂದ್ರಪ್ಪನಿಗೆ ಈ ಖತರ್ನಾಕ್ ಐಡಿಯಾ ಹೊಳೆದದ್ದು. ಹೇಗೂ ಇಬ್ಬರ ಹೆಸರೂ ಮಂಜುನಾಥ್ ಆದ್ದರಿಂದ ಕೊಲೆ ಮಾಡಿದ್ದು ತನ್ನ ಡ್ರೈವರ್ ಮಂಜುನಾಥನೇ ಎಂದು ಪೊಲೀಸರಿಗೆ ಪುಸಲಾಯಿಸಿ ನಿಷ್ಠಾವಂತ ಡ್ರೈವರ್‌ನನ್ನು ಜೈಲಿಗೆ ಗದುಮಿ ಬಚಾವಾಗಿದ್ದಾನೆ. ಡ್ರೈವರ್ ಮಂಜುನಾಥಸ್ವಾಮಿ ಯಕಶ್ಚಿತ್ ಒಂದು ಇರುವೆ ಸಾಯಿಸುವಷ್ಟು ಧೈರ್ಯವಂತನಲ್ಲ. ಇದೆಲ್ಲಾ ಚಂದ್ರಪ್ಪನ ಪಿತೂರಿ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಚಂದ್ರಪ್ಪನ ಗೋಸುಂಬೆತನಕ್ಕೆ ಇವೆರಡೂ ತಾಜಾ ಉದಾಹರಣೆಗಳಷ್ಟೆ. ಬಲು ಸಭ್ಯನಂತೆ ಜನರ ಮುಂದೆ ಹೋಗಿ ಓಟು ಕೇಳುವ ಈತನ ಬೆನ್ನ ಹಿಂದೆ ಇಂತಹ ಹತ್ತಾರು ಕರಾಳ ಮುಖಗಳಿವೆ. ಚಂದ್ರಪ್ಪನ ವಿಕೃತಮನಸ್ಸಿಗೆ ಅದೆಷ್ಟೋ ಅಮಾಯಕರ ಬದುಕು ಸದ್ದಿಲ್ಲದೆ ಸಮಾಧಿಯಾಗಿ ಹೋಗಿವೆ. ಈತನ ಹೆಂಡತಿಯ ಕಾರಿಗೆ ಸಿಕ್ಕು ಸತ್ತವನ ಕುಟುಂಬ ಬೀದಿಗೆ ಬಿದ್ದಿದ್ದರೂ ಯಾರು ಕೇಳುತ್ತಿಲ್ಲ. ರಾಜಕಾರಣದಲ್ಲಿ 'ಮಾಜಿ' ಲೇಬಲ್ ಅಂಟಿಸಿಕೊಂಡಿದ್ದರೂ ಚಂದ್ರಪ್ಪ ಹಗಲಿಂದ ರಾತ್ರಿವರೆಗೂ ಬಾಟಲಿಗೆ ಬಾಯಿಟ್ಟ ಬಿಂದಾಸ್ ಆಗಿ ಕಾಲ ಕಳೆಯುತ್ತಾನೆಂದರೆ ಅದಕ್ಕೆಲ್ಲಾ ಕಾರಣ ಅವನ ಶಿಕ್ಷಣ ವ್ಯಾಪಾರೀಕರಣ ಮಂಡಿಗಳ ಕಮಾಯಿ. ಇಂತಹ ಚಂದ್ರಪ್ಪ ಮುಂದಿನ ಚುನಾವಣೆಯ ದೃಷ್ಟಿಯಿಂದ ಸಭ್ಯತೆಯ ಮುಖವಾಡ ತೊಟ್ಟು ಜನವನ್ನು ಮಾತನಾಡಿಸುವ ನಾಟಕ ಶುರು ಮಾಡಿದ್ದಾನೆ. ಆದರೆ ಹೊಳಲ್ಕೆರೆಯ ಜನ ಇವನ ಅಸಲಿಯತ್ತನ್ನು ಮರೆತು ಹೋಗುವಷ್ಟು ಮುಗ್ಧರೇನಲ್ಲ ಎಂಬ ಸತ್ಯ ಚಂದ್ರಪ್ಪನಿಗೆ ಗೊತ್ತಿದ್ದಂತೆ ಕಾಣುತ್ತಿಲ್ಲ.


● ಟಿ.ಎನ್.ಷಣ್ಮುಖ

ಕವಳನ ಪಟ್ಟಕ್ಕೆ ತಮ್ಮ ಮಣಿ ಕೂತ
ನಖರಾ ಖಚಕ್..!


ಬಿಜೆಪಿ ಶಾಸಕ ಸತೀಶ್ ರೆಡ್ಡಿ

ಸಾವು ಹೇಳಿಕೇಳಿ ಬರುವುದಿಲ್ಲ, ಆದರಲ್ಲೂ ಅಧೋ ಸಾಮ್ರಾಜ್ಯದ ಫಲಾನುಭವಿಗಳ ಪಾಲಿಗಂತೂ ಸಾವು ಬರುವ ಹೊತ್ತಿಗೆ ಸರಿಯಾಗಿ ಬುದ್ಧಿ ಕೆಲಸ ಮಾಡುವುದಿಲ್ಲ, ಇಲ್ಲದಿದ್ದರೆ ನಖರಾ ಬಾಬು ತಾನೇ ಏಕೆ ಈ ರೀತಿ ತನ್ನ ಗ್ಯಾಂಗ್ ಸಮೇತವೇ ಯಮನಧೂತರ ಬಲೆಗೆ ಬಿದ್ದು ಹೆಣವಾಗುತ್ತಿದ್ದ

ಅಂಥಾ ಕವಳನನ್ನೇ ಅಟ್ಟಾಡಿಸಿ ಕೊಂದವನು, ತಮಿಳು


ಬಾಬು ಹತ್ಯೆ ನಡೆದ ಮನೆ

ನಾಡಿನ ತನಕ ತನ್ನ ಕೊಲೆಗಡುಕರ ಪಡೆ ಕಟ್ಟಿದವನು, ಕವಳನನ್ನು ಕೊಂದ ಮೂರೇ ತಿಂಗಳಿಗೆ ಜೈಲಿಂದ ಹೊರ ಬಿದ್ದವನು ಮತ್ತು ಇಡೀ ಕವಳನ ಸಾಮ್ರಾಜ್ಯವನ್ನು ಆಳ ಹೊರಟವನು; ಇಷ್ಟೊಂದು ನಿರಾಯಾಸವಾಗಿ ಮುಗಿದು ಹೋಗುತ್ತಾನೆಂದರೆ-

ನಡೆದ ದಾಳಿ, ಅದರ ಪೂರ್ವ ತಯಾರಿ, ಬಂದವರ ಹಿಸ್ಟರಿ, ಕೊಂದ ರೀತಿ, ಕ್ರೌರ್ಯದ ಮಾದರಿ ಎಲ್ಲವೂ ಪೈಶಾಚಿಕವೆ. ಬಂದು ಬಂದದ್ದೇ ಅದೆಲ್ಲಿತ್ತೋ ಮಚ್ಚು ಲಾಂಗುಗಳಿಂದ ಸಿಕ್ಕಸಿಕ್ಕವರನ್ನು ಕತ್ತರಿಸಲಾರಂಭಿಸಿದೆ ಕವಳನ ಪಡೆ. ಬೀಸಿದ ಲಾಂಗೇಟಿಗೆ ನಖರಾ ಬಂಟ ವಿಶ್ವನ ಕೈಯೇ ತುಂಡಾಗಿ ಬಿದ್ದಿದೆ. ಹೀರಾಲಾಲ್‌ನ ಕತ್ತು, ಎದೆ, ಭುಜ, ಕಾಲೆನ್ನದೆ ಮಚ್ಚೇಟು ಬಿದ್ದಿದೆ. ಇದ್ದುದರಲ್ಲಿ ಲಕ್ಷ್ಮಣನೇ ಅದೃಷ್ಟಶಾಲಿ. ಸಣ್ಣಪುಟ್ಟ ಗಾಯಗಳ ಹೊರತಾಗಿ ಹೆಚ್ಚು ರಕ್ತ ಹರಿದಿಲ್ಲ.

ಆದರೆ ನಖರಾ ಬಾಬುವಿನ ಪಾಡು ಹಾಗಲ್ಲ; 'ವುದಾ... ಬಿಡ್ರೋ, ಅಮ್ಮಾ... ಅಮ್ಮಮ್ಮಾ....' ಎಂದು ಆತ ಚೀರಾಡುತ್ತಿದ್ದರೆ ಆತನ ದೇಹದ ಒಂದೊಂದೇ ಭಾಗವನ್ನು ಹಿಡಿಹಿಡಿದು ಕಡಿಯುತ್ತಿದ್ದರು ಆನೇಕಲ್ ನಂಜುಂಡ ಮತ್ತು ರಾಕೇಶ. ಅದು ಬರೋಬ್ಬರಿ ಹದಿನೈದು ಮಂದಿಯ ಕಿರಾತಕ ಪಡೆ. ಕೈ ಕಾಲು, ಬೆನ್ನು, ಎದೆ, ತಲೆ, ಮುಖವೆನ್ನದೆ ಚೀರಾಡುತ್ತಿದ್ದ ನಖರಾಬಾಬುವನ್ನು ಎಲ್ಲರೂ ಸೇರಿ ಕತ್ತರಿಸುತ್ತಿದ್ದ ದೃಶ್ಯ ನೋಡಿಯೇ ಆ ಮನೆಯಲ್ಲಿದ್ದ ಹೆಣ್ಣು ಮಗಳೊಬ್ಬಳು ತಲೆ ಸುತ್ತು ಬಂದು ಬಿದ್ದಳು. ಇಡೀ ಮನೆಯೇ ರಕ್ತಸಿಕ್ತ, ಮಹಡಿ ಮೆಟ್ಟಲುಗಳ ತುಂಬ ರಕ್ತ ತೊಟ್ಟಿಕ್ಕುತ್ತಿತ್ತು, ಹತ್ತೇ ನಿಮಿಷ. ನಖರಾ ಬಾಬುವನ್ನು ಮಾಂಸದ ಮುದ್ದೆ ಮಾಡಿದ ಹಂತಕ ಪಡೆ ಬಂದಷ್ಟೇ ಹುಷಾರಾಗಿ ಜಾಗ ಖಾಲಿ ಮಾಡಿತ್ತು.

ಭಾನುವಾರದ ಸಂಜೆ...!

ಪೊಲೀಸರು ಬರುವ ಹೊತ್ತಿಗೆ ಉಳಿದದ್ದು ನರಳಾಡುತ್ತಿದ್ದ ವಿಶ್ವ ಮತ್ತು ಹೀರಾಲಾಲ್‌ರ ಆಕ್ರಂದನ ಮತ್ತು ಜರಡಿಯಂತಾಗಿದ್ದ ನಖರಾ ಬಾಬುವಿನ ಹೆಣ!

ಅಕ್ಟೋಬರ್ 12ರ ಭಾನುವಾರದ ಈ ರಕ್ತ ಸಂಜೆಯನ್ನು ಬಹುಶಃ ಮಡಿವಾಳದ ಜನ ಸದ್ಯಕ್ಕೆ ಮರೆಯಲಾರರೇನೊ. ಖುದ್ದು ಪೊಲೀಸ್ ಕಮೀಷನರ್ ಎಂ.ಎನ್. ರೆಡ್ಡಿಯೇ ಧಾವಿಸಿ ಬರಬೇಕಾಯಿತು. ಜೈಭೀಮ್‌ನಗರದ 4ನೇ ಕ್ರಾಸಿನ ತುಂಬ ಪೊಲೀಸರ ಖಾಕಿ, ಚಾನಲ್ ಕ್ಯಾಮೆರಾಗಳ ರಾಶಿ ಮತ್ತು ರಕ್ತದ ಕಲೆಗಳ ಚಿತ್ತಾರ!

ಕವಳನೇನೋ ಮುಗಿದುಹೋದ. ಆದರೆ ಲೆಕ್ಕವಿನ್ನೂ ಚುಕ್ತಾಗೊಂಡಿಲ್ಲ, ಬೆಂಗಳೂರು ತಮಿಳು ಕೊಂಪೆಗಳಾದ ಭಕ್ಷಿಗಾರ್ಡನ್, ಆಂಜನಪ್ಪ ಗಾರ್ಡನ್ನುಗಳಿಂದ ಹಿಡಿದು ವಿಲ್ಸನ್ ಗಾರ್ಡನ್, ಹೊಸೂರು ರಸ್ತೆಯ ಮಡಿವಾಳದಿಂದ ತಮಿಳುನಾಡಿನ ಹೊಸೂರುತನಕ ತನ್ನ ರಾವಣ ರಾಜ್ಯವನ್ನು ಕಟ್ಟಿ ಮೆರೆದವನು ಕಿರಾತನ ಕವಳ. ಬಿಜೆಪಿ ಅಧಿಕಾರದಲ್ಲಿದ್ದಾಗ ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ಬಲಗೈ ಬಂಟನಂತೆ ವಿಜೃಂಭಿಸಿಬಿಟ್ಟ. ಆನೇಕಲ್ ಕೋರ್ಟ್ ಆವರಣದಲ್ಲೇ 200 ಕೋಟಿ ಸೊತ್ತಿನ ಜಮೀನುದಾರ ಶಾಂತಕುಮಾರ್‌ರನ್ನು ತನ್ನ ನಂಬಿಕಸ್ತ ಬಂಟ ಆನೇಕಲ್ ನಂಜುಂಡನ ಪಡೆಯನ್ನು ಛೂಬಿಟ್ಟು ಕೊಚ್ಚಿ ಹಾಕಿಸಿದ್ದು ಶಾಸಕ ಸತೀಶ್ ರೆಡ್ಡಿ ಮತ್ತು ಕವಳನ ರಿಯಲ್ ಎಸ್ಟೇಟ್ ನೆಂಟಸ್ತಿಕೆಯ ಪ್ರತೀಕವಾಗಿತ್ತು.


ಇವತ್ತು ಕೊಲೆಯಾದ ಶಾಂತಕುಮಾರ್‌ರ ಅದೇ ಸೊತ್ತು ಶಾಸಕ ಸತೀಶ್ ರೆಡ್ಡಿಯ ಪಾಲಾಗಿದೆ. ಅಲ್ಲಿ ಸತೀಶ್ ರೆಡ್ಡಿ ಭರ್ಜರಿ ಅಪಾರ್ಟ್‌ಮೆಂಟನ್ನು ಎಬ್ಬಿಸಿದ್ದಾರೆ. ಆದರೆ ಸೊತ್ತಿನ ಮಾಲಿಕನನ್ನು ಕೊಂದು ಸತೀಶ್ ರೆಡ್ಡಿಯ ಆಸ್ತಿ ಮದಕ್ಕೆ ಕಾರಣನಾದ ಕವಳ ಮುಗಿದುಹೋಗಿದ್ದಾನೆ. ಅದು ಮಡಿವಾಳ ಸೇರಿದಂತೆ ಇಡೀ ಹೊಸೂರು ರಸ್ತೆಯ ರೆಡ್ಡಿ ಭೂಪತಿಗಳ ರಿಯಲ್ ಎಸ್ಟೇಟ್ ರಾಜಕಾರಣ. ಕವಳ ಇದೇ ರೆಡ್ಡಿಗಳ ಭೂಮಾಫಿಯಾದ ಅಡ್ಡ ಪರಿಣಾಮವಾಗಿ ಹುಟ್ಟಿಕೊಂಡವನು.

ನಖರಾ...?

ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ರಿಯಲ್ ಎಸ್ಟೇಟ್ ಸಾಮ್ರಾಜ್ಯದ ದಳಪತಿಯಂತೆ ಮೆರೆದ ಕವಳನ ಕಿರಾತಕ ಪಡೆ ಕೂಡ ಸಣ್ಣದೇನಲ್ಲ, ಆಂಜನಪ್ಪ ಗಾರ್ಡನ್ನಿನ ಗಾರ್ಡನ್ ಮಣಿಯ ಭಾಮೈದ ಗುಪ್ಪ ಅಲಿಯಾಸ್ ಗುಪೇಂದ್ರ, ಈತನ ಮಚ್ಚಾ ಸೂರ್ಯ, ವಿಲ್ಸನ್ ಗಾರ್ಡನ್ನಿನ ಕಿರಾತಕ ಲಿಂಗಾ, ಮಡಿವಾಳದಲ್ಲಿ ಕವಳನ ಎರಡನೇ ಪತ್ನಿಯ ತಮ್ಮ ರಾಕಿ ಅಲಿಯಾಸ್ ರಾಕೇಶ, ಬಿಟಿಎಂ ಲೇಔಟಿಗೆಂದೇ ಬ್ಯಾಟರಿ ಸೀನ, ಚಾಮರಾಜಪೇಟೆಯಲ್ಲಿ ತಂಗಳು ಚಂದ್ರ, ಬೊಮ್ಮನಹಳ್ಳಿಯ ಝೋಪಡಿಗಳಿಗೆಂದೇ ಸರವಣ, ಕರಿಯ ಮುನಿರಾಜು, ನಾರಾಯಣ, ಚಂದಾಪುರ ಸೇರಿದಂತೆ ಸರ್ಜಾಪುರ ಸುತ್ತಮುತ್ತಲ ಏರಿಯಾಗಳ ಉಸ್ತುವಾರಿ ಹೊತ್ತ ಆನೇಕಲ್ ನಂಜುಂಡ, ಈ ಎಲ್ಲಾ ಕಿರಾತಕರನ್ನು ಸಂಭಾಳಿಸಲೆಂದೇ ಕವಳನ ಖಾಸಾ ತಮ್ಮ ಮಣಿ ಉರ್ಫ್ ಮಣಿಕಂಠ!

ಹೆಚ್ಚೂಕಮ್ಮಿ 800 ಕೋಟಿಯ ಕವಳನ ಸಾಮ್ರಾಜ್ಯ ಬೆಂಗಳೂರಿನ ಬೇರೆಲ್ಲ ರೌಡಿಗಳಿಗಿಂತಲೂ ಶ್ರೀಮಂತವಾಗಿತ್ತು, ಸುಸಜ್ಜಿತವಾಗಿತ್ತು ಮತ್ತು ರಾಜಕೀಯವಾಗಿ ಬಲಾಢ್ಯವೆನಿಸಿತ್ತು. ಇಂಥಾ ಪಾಪಕೂಪದಲ್ಲಿ ಧೂಮಕೇತುವಿನಂತೆ ಎದ್ದು ನಿಂತವನು ನಖರಾ ಬಾಬು!

ಜೈಭೀಮ್‌ನಗರದ ಕವಳನ ಮನೆಯ ಪಕ್ಕದ ರಸ್ತೆಯಲ್ಲೇ ಮನೆ ಕಟ್ಟಿಕೊಂಡಿದ್ದ ನಖರಾ ಬಾಬುವಿನ ಹೆಸರನ್ನು ಬೆಂಗಳೂರು ಅಂಡರ್‌ವರ್ಲ್ಡ್ ಮೊದಲ ಬಾರಿಗೆ ಕೇಳಿದ್ದೇ ಕವಳನ ಕೊಲೆಯ ಮೂಲಕ. ಆದರೆ ಕವಳನ ಆಪ್ತ ವಲಯದಲ್ಲಿ ಆತನ ಖದರ್ರೇ ಬೇರೆಯದ್ದು. ಬೆಂಗಳೂರಿನ


ಕವಳನ ತಮ್ಮ ಮಣಿಕಂಠ

ಹೈಟೆಕ್ ವೇಶ್ಯಾವಾಟಿಕೆಗಳಿಂದ ಮಂತ್ಲಿ ಎತ್ತುವಳಿ, ಕೋರಮಂಗಲ ಸುತ್ತಮುತ್ತಲ ಲೈವ್‌ಬ್ಯಾಂಡುಗಳಿಂದ ಹಫ್ತಾ ವಸೂಲಿ, ಮಡಿವಾಳದ ಮಾರ್ಕೆಟ್‌ನ ಮೀಟರ್ ಬಡ್ಡಿ ದಂಧೆ, ಕವಳನ ಬೇನಾಮಿ ಆಸ್ತಿಗಳ ಬಾಡಿಗೆ ವಸೂಲಿ, ಫೈನಾನ್ಸಿಂಗ್- ಹೀಗೆ ಕವಳನ ಕರಾಳ ದಂಧೆಗಳೆಲ್ಲವನ್ನೂ ತೆರೆಮರೆಯಲ್ಲಿದ್ದು ನೋಡಿಕೊಳ್ಳುತ್ತಿದ್ದದ್ದೇ ನಖರಾ ಬಾಬು.


ಕಳೆದ ಚುನಾವಣೆ ಹೊತ್ತಿಗೆ ಕವಳ ಜೈಲಿಗೆ ಹೋದಮೇಲಂತೂ ಬಾಬುವೇ ಹೆಚ್ಚೂಕಮ್ಮಿ ಕವಳನ ವಾರಸುದಾರನಾಗಿ ಬಿಟ್ಟಿದ್ದ. ಕವಳ ಎಂಥಾ ಖಾಣಪತ್ರಿಯೆಂದರೆ ಅದೆಷ್ಟೇ ಪರಮಾಪ್ತರಿಗೂ ತನ್ನ ಮನೆ ತೋರಿಸುತ್ತಿರಲಿಲ್ಲ, ಆನೇಕಲ್ ನಂಜುಂಡ, ಸರವಣ, ಕರಿಯಾ ಮುನಿರಾಜ, ಬ್ಯಾಟರಿ ಸೀನ ಇತ್ಯಾದಿ ತನ್ನ ಆಪ್ತರ್‍ಯಾರಿಗೂ ತನ್ನ ಎರಡನೇ ಪತ್ನಿಯ ಮನೆ ತೋರಿಸಿರಲಿಲ್ಲ. ಅಷ್ಟೇ ಏಕೆ, ತನ್ನೆಲ್ಲಾ ಎತ್ತುವಳಿಯನ್ನು ಸಂಭಾಳಿಸುತ್ತಿದ್ದ ನಖರಾ ಬಾಬುಗೂ ತನ್ನ ಅಡಗುತಾಣದ ಸುಳಿವು ಕೊಟ್ಟಿರಲಿಲ್ಲ.

ಮಣಿಕಂಠ

ಅತ್ತಿಬೆಲೆ ಚೆಕ್‌ಪೋಸ್ಟ್ ತನಕ ತನ್ನ ಬೆಂಗಾವಲು



ಕವಳನನ್ನು ಕೊಂದು ಪೋಜು ಕೊಟ್ಟ ನಖರಾ ಬಾಬು, ವಿಶ್ವಾ, ಹೀರಾಲಾಲ್ ಗ್ಯಾಂಗ್.



ಬಾಬು ತಂಡದ ಮೇಲೆ ನಡೆದ ಭೀಕರ ದಾಳಿಗೆ ಸಂಬಂಧಪಟ್ಟಂತೆ ಸದ್ಯ ಪೊಲೀಸರು ಬಂಧಿಸಿರುವುದು ಆನೇಕಲ್ ಸರವಣನ ಆರು ಮಂದಿಯ ಹಂತಕ ಪಡೆಯನ್ನು. ಈ ಪೈಕಿ ಶ್ಯಾಂ ಕವಳನ ಹಳೇ ಸಹಚರ. ಜೊತೆಗೆ ರಂಜಿತ್, ಕಪಿಲ್, ಜಮೀರ್ ಮತ್ತು ವಿನಯ್ ಕೂಡ ಸೆರೆ ಸಿಕ್ಕಿದ್ದಾರೆ. ಸಿಗಬೇಕಾದವನು ಆನೇಕಲ್ ನಂಜುಂಡ!

ಅವನನ್ನು ಬಿಟ್ಟರೆ ಅತ್ಯಂತ ಅಪಾಯಕಾರಿಯೆಂದರೆ ಅದು ಕವಳನ ಭಾಮೈದ ರಾಕಿ ಅಲಿಯಾಸ್ ರಾಕೇಶ. ಕರಿಯ ಮುನಿರಾಜನೂ ಪರಾರಿಯಾಗಿದ್ದಾನೆ. ಪೊಲೀಸರ ಪ್ರಕಾರ ನಖರಾ ಬಾಬು ಮತ್ತು ಕವಳನ ಗ್ಯಾಂಗ್ ನಡುವೆ ಜೈಭೀಮ್ ನಗರದ 4ನೇ ಕ್ರಾಸಿನ ರಾಜಕಮಲ್ ಮನೆಯಲ್ಲಿ ರಾಜಿ ಪಂಚಾಯ್ತಿ ವ್ಯವಸ್ಥೆಯಾಗಿತ್ತು. ಈ ರಾಜಕಮಲ್ ಇಸ್ಪೀಟ್ ಗಿರಾಕಿ ಮತ್ತು ಪಾರ್ಟ್‌ಟೈಂ ರಿಯಲ್ ಎಸ್ಟೇಟ್ ಕುಳ. ತಮಿಳು ನಟ ಕಮಲ್‌ಹಾಸನ್‌ನ ಪರಮಭಕ್ತ ಕೂಡ. ಕವಳನನ್ನು ಮುಂದಿಟ್ಟುಕೊಂಡೇ ಬಡಬಗ್ಗರ ಸೈಟ್ ಹೊಡೆಯುತ್ತಿದ್ದ.

ಆ ಕಾಲದಿಂದಲೂ ಕವಳನ ಒಡನಾಡಿಯಾಗಿದ್ದು ತನ್ನ ಹಿತೈಷಿಯಂತೆ ನಟಿಸುತ್ತಿದ್ದ ರಾಜ್‌ಕಮಲ್ "ಇನ್ನು ಮುಂದೆ ನಮ್ಮನಮ್ಮಲ್ಲಿ ಹೊಡೆದಾಡುವುದು ಬೇಡ. ಆಗಿದ್ದು ಆಗಿಹೋಯ್ತು. ನಾವಾದರೂ ಫ್ರೆಂಡ್ಸ್ ಆಗಿದ್ದು ಬಿಡೋಣ. ಏನೇ ಡೀಲು ಬಂದರೂ ಎಲ್ಲ ಸೇರಿಕೊಂಡೇ ಮಾಡೋಣ..." ಎಂದಿದ್ದನ್ನು ಬಾಬು ನಂಬಿಬಿಟ್ಟ. ಕರಿಯ ಮುನಿರಾಜನೂ ಬಾಬುವನ್ನೇ ಬೆಂಬಲಿಸುವ ಮಾತಾಡಿದ. ಬರುವಾಗ ವೆಪನ್ಸ್ ಇಟ್ಟುಕೊಂಡು ಬರಬಾರದು ಎಂದೇ ರಾಜಕಮಲ್ ಮತ್ತು ಮುನಿರಾಜ ತಾಕೀತು ಮಾಡಿದ್ದರಿಂದ ತನ್ನ ಜೊತೆ ಲಕ್ಷ್ಮಣ, ವಿಶ್ವ ಮತ್ತು ಹೀರಾಲಾಲ್‌ರನ್ನು ಕರಕೊಂಡಿದ್ದೇ ಬಾಬು ಬರಿಗೈಯಲ್ಲಿ ಬಂದುಬಿಟ್ಟ.

ಅದೇ ಆತನ ಪಾಲಿಗೆ ಮುಳುವಾಗಿತ್ತು. ಆನೇಕಲ್‌ನ ನಂಜುಂಡನ ಜೊತೆ ಅಪ್ಪಿ ಉಪ್ಪಿ, ಸುಧಿ ಮಾತ್ರವಲ್ಲದೆ ಸರವಣ ಮತ್ತು ರಾಕೇಶರದ್ದೇ ಪ್ರತ್ಯೇಕ ಗ್ಯಾಂಗ್‌ಗಳು ಅಣಿಯಾಗಿದ್ದವು. ಕೊಲ್ಲಲು ಇದಕ್ಕಿಂತ ಸುಲಭ ಅವಕಾಶ ಸಿಗುತ್ತಿರಲಿಲ್ಲ. ಉಪಾಯವಾಗಿ ರಾಜಕಮಲ್‌ನ ಮನೆಗೆ ಬಾಬುವನ್ನು ಕರೆತಂದು ಬಿಟ್ಟಿದ್ದ ಮುನಿರಾಜ ಅದೇನೋ ನೆಪವೊಡ್ಡಿ ನಾಪತ್ತೆಯಾಗಿಬಿಟ್ಟ. ಅಷ್ಟೇ; ಅರೆಕ್ಷಣದಲ್ಲೇ ಕವಳನ ಪಡೆ ದಾಳಿಯಿಟ್ಟಿತ್ತು. ಹತ್ತೇ ನಿಮಿಷದೊಳಗೆ ರಕ್ತದ ಓಕುಳಿಯಾಡಿದ ಹಂತಕ ಪಡೆ ಬಂದಷ್ಟೇ ಸಲೀಸಾಗಿ ನಾಪತ್ತೆಯಾಗಿತ್ತು.

ಈ ಮಧ್ಯೆ ತಮ್ಮ ಮಣಿಕಂಠ ಮಾತ್ರ ಎಲ್ಲೂ ಕಾಣಿಸುತ್ತಿಲ್ಲ. ನಖರಾ ಬಾಬುವೇ ಕೊಲೆಯಾದ್ದರಿಂದ ಮರ್ಮ ಗೊತ್ತಿದ್ದದ್ದು ಆತನಿಗೆ ಮಾತ್ರವೆ. ಈಗ ಮತ್ತೆ ಕವಳದ ಗ್ಯಾಂಗ್ ಜೊತೆ ಸೇರುತ್ತಾನಾ ಅಥವಾ ರಾಕೇಶನ ವಿರುದ್ಧ ಜಿದ್ದಿಗೆ ನಿಲ್ಲುತ್ತಾನಾ ಗೊತ್ತಿಲ್ಲ. ಕವಳನ ಸಾಮ್ರಾಜ್ಯಕ್ಕಾಗಿ ಅದರ ಅಧಿಪತ್ಯಕ್ಕಾಗಿ ಮಲೆಯಾಳಿ ಪ್ರವೀಣ, ಕುಟ್ಟಿ-ರಾಜಾ, ಜೆಸಿಬಿ ನಾರಾಯಣ, ಸೈಕಲ್ ರವಿ- ಹೀಗೆ ಅರ್ಧ ಡಜನ್ ಹಂತಕ ಪಡೆಗಳು ಪರಸ್ಪರ ಹೊಡೆದಾಡಿಕೊಂಡರೂ ಅಚ್ಚರಿಯೇನಿಲ್ಲ.

...ಮನ್ನು ಜೊತೆಗೊಯ್ದು ಆನಂತರ ಏಕಾಂಗಿಯಾಗಿ ...ಸೂರಿನ ತಮಿಳುನಾಡು ಗಡಿ ಹೊಕ್ಕರೆ ಆ ನಂತರ ...ಲ್ಲಿ ಮಾಯವಾಗುತ್ತಾನೆಂಬುದೇ ಗೊತ್ತಾಗುತ್ತಿರಲಿಲ್ಲ. ...ಸೂರು ದಾಟಿ ಕೃಷ್ಣಗಿರಿ ಮಾರ್ಗದ ಸಿಪ್‌ಕಾಟ್ ...ಸ್ ಠಾಣೆ ವ್ಯಾಪ್ತಿಯಲ್ಲಿ ಭರತ್ ಅಪಾರ್ಟ್‌ಮೆಂಟ್‌ನಲ್ಲಿ ತನ್ನ ಎರಡನೇ ಪತ್ನಿಯನ್ನಿಟ್ಟಿದ್ದ. ಕವಳನ ಈ ...ಮತಾಣದ ಪರಿಚಯವಿದ್ದದ್ದು ಇಬ್ಬರಿಗೆ ಮಾತ್ರ. ಈ ...ಬ್ಬ ಕವಳನ ಎರಡನೇ ಪತ್ನಿಯ ತಮ್ಮ ರಾಕೇಶ್ ...ಯಾಸ್ ರಾಕಿಯಾದರೆ ಮತ್ತೊಬ್ಬನೇ ಕವಳನ ...ನಾಕ್ ತಮ್ಮ ಮಣಿ ಉರ್ಫ್ ಮಣಿಕಂಠ!


...ಕವಳನ ಗ್ಯಾಂಗ್‌ನಲ್ಲಿ ಅತ್ಯಂತ ಚಾಲಾಕಿ ಮತ್ತು ...ಯಕಾರಿಯೆಂದರೆ ಅದು ತಮ್ಮ ಮಣಿಕಂಠನೆ. ...ಮಾರ್ಗದ ಬಳಿ ಎದುರಾಳಿ ಕುಟ್ಟಿ ಯಾನೇ ...ಮಾರನ್‌ನ ಕೊಲೆ ಯತ್ನದ ರೂವಾರಿಯೇ ಈ ...ಕಂಠ. ಕವಳನ ತಂದೆ ಮೊದಲಿಯಾರ್‌ನ ಮಲೆಯಾಳಿ ...ಮ ಮೂವರು ಮಕ್ಕಳ ಪೈಕಿ ದೊಡ್ಡವನು ಗಣೇಶ. ...ಗೂ ಆಟೋ ಓಡಿಸಿಕೊಂಡಿದ್ದಾನೆ. ಎರಡನೆಯವನು ...ಯ್ ಕುಮಾರ್ ಉರ್ಫ್ ಕವಳ. ಮೂರನೆಯವನು ...ಅಲಿಯಾಸ್ ಮಣಿಕಂಠ.

...ಕವಳನ ಎಲ್ಲಾ ಕೃತ್ಯಗಳಲ್ಲಿ ಸಹ ಆರೋಪಿಯಾಗಿ ...

ಆಗ ಜೈಲಿನಲ್ಲಿದ್ದ ಕವಳನ ಉಸಾಬರಿಯನ್ನೆಲ್ಲ ನಖರಾ ಬಾಬುವೇ ನಿಯಂತ್ರಿಸುತ್ತಿದ್ದ. ಇದರಿಂದ ರೊಚ್ಚಿಗೆದ್ದ ಮಣಿಕಂಠ ಸೀದಾ ಹೊಸೂರಿನ ಅಪಾರ್ಟ್‌ಮೆಂಟಿನಲ್ಲಿದ್ದ ತನ್ನ ಅತ್ತಿಗೆ ಅಂದರೆ ಕವಳನ ಎರಡನೇ ಪತ್ನಿಯ ಬಳಿ ಹೋಗಿದ್ದೇ ಜಗಳ ಕಾದು ಬಿಟ್ಟ. 'ಅಣ್ಣ ಪ್ರತಿಯೊಂದನ್ನೂ ನಿಮಗೇ ಮಾಡಿದ್ದಾನೆ. ನಾನು ಭಿಕಾರಿಯಂತಿದ್ದೇನೆ. ಪ್ರಾಣ ಕೊಟ್ಟು ಕಾಪಾಡಿದ್ದು ನಾನು. ನಿನಗೆ ನಿಯತ್ತು ಅನ್ನೋದೇನಾದ್ರೂ ಇದ್ರೆ ಅವನಿಗೆ ನೀನೇ ಬುದ್ಧಿ ಹೇಳು...' ಎಂದೆಲ್ಲ ಮಣಿ ಕೂಗಾಡಿದ್ದು ಜೈಲಲ್ಲಿದ್ದ ಕವಳನ ಕಿವಿ ಮುಟ್ಟಲು ಎಷ್ಟು ಹೊತ್ತು!

ಅದೇನಾಯಿತೋ ಮಣಿ ತನ್ನ ಅತ್ತಿಗೆಗೆ ರೋಪು ಹಾಕಿದ ಧೈರ್ಯ ಆನಂತರ ಉಡುಗಿಹೋಗಿತ್ತು. ಇದರ ಪರಿಣಾಮವನ್ನು ಚೆನ್ನಾಗಿ ಅರಿತಿದ್ದ ಮಣಿ ಬೆಂಗಳೂರಿನ ತನ್ನ ಮನೆ ಖಾಲಿ ಮಾಡಿದ್ದೇ ಸೀದಾ ಚಿತ್ರದುರ್ಗಕ್ಕೆ ಮನೆ ಬದಲಾಯಿಸಿದ. ಪತ್ನಿಯನ್ನೂ ಅಲ್ಲಿಗೇ ಕರೆಸಿಕೊಂಡ. ಆದರೆ ಕವಳ ಬಿಡಬೇಕಲ್ಲ. ಆನೇಕಲ್ ನಂಜುಂಡ, ಸರವಣ, ಗಗನ್, ಶ್ಯಾಂ ಮುಂತಾದ ಘಾಟಿ ಹುಡುಗರ ಟೀಮೊಂದನ್ನು ರೆಡಿ ಮಾಡಿದ್ದೇ ತಮ್ಮ ಮಣಿಯನ್ನು ಮಟ್ಟಾ ಹಾಕಲು ಆದೇಶಿಸಿದ. ಮಣಿಯನ್ನು ಹುಡುಕಿಕೊಂಡು ಚಿತ್ರದುರ್ಗಕ್ಕೆ ಬಂದ ನಂಜುಂಡನ ಪಡೆ ಆತನ ಮನೆ ಸುತ್ತುವರಿದು ಹಾವಳಿಯಿಟ್ಟಿತು. ಆವತ್ತು ಮನೆಯಲ್ಲೇ ಬಚ್ಚಿಟ್ಟುಕೊಂಡು ಇದೆಲ್ಲವನ್ನೂ ಗಮನಿಸಿದ ಮಣಿಗೆ ಅಣ್ಣ ತನ್ನನ್ನು ಕೊಲ್ಲಲೆಂದೇ ಇವರನ್ನು ಕಳಿಸಿದ್ದಾನೆಂದು ಲೆಕ್ಕ ಹಾಕಿದ.

ಆದರೆ ಕವಳ ಕಳಿಸಿದ್ದು ಕೇವಲ ಚಮಕಾಯಿಸುವುದಕ್ಕೆ ಮಾತ್ರ. ಅಂದರೆ ಅಣ್ಣ ಸಿಟ್ಟಿಗೆದ್ದಿದ್ದಾನೆಂಬುದು ಮಣಿಗೆ ಗೊತ್ತಾಗಬೇಕಿತ್ತಷ್ಟೆ. ಹೋ ಕೊಟ್ಟು ಬನ್ನಿ ಎಂದು ಕವಳ ಹೇಳಿದ್ದು ಆತನ ತಮ್ಮನ ಪಾಲಿಗೆ ಕೊಲ್ಲುವ ಯತ್ನವಾಗಿ ಕಂಡಿತ್ತು. ಅಣ್ಣನ ವಿರುದ್ಧ ಒಳಗೊಳಗೇ ಕುದಿಯುತ್ತಿದ್ದ ಮಣಿ ಕವಳನ ತಂಡದಲ್ಲೇ ಕತ್ತಿ ಮಸೆಯುತ್ತಿದ್ದ ಅತೃಪ್ತರನ್ನೆಲ್ಲ ಒಟ್ಟುಗೂಡಿಸತೊಡಗಿದ. ವಿಕಟವೆಂದರೆ ಯಾವ ನಖರಾ ಬಾಬುವಿನ ವಿರುದ್ಧ ಮಣಿಗೆ ಹೊಟ್ಟೆಕಿಚ್ಚಿತ್ತೋ ಅದೇ ನಖರಾ ಬಾಬುವೇ ಮಣಿಕಂಠನ ಜೊತೆ ಕೈಮಿಲಾಯಿಸಿಬಿಟ್ಟ. ಅದಕ್ಕೆ ಕಾರಣವಾಗಿದ್ದು ಕಳೆದ ಎಲೆಕ್ಷನ್‌ಗೂ ಮುನ್ನ ನಡೆದ ಕವಳನ ಬಂಧನ. ತಾನು ಬೆಂಗಳೂರಿಗೆ ಇಷ್ಟೇ ಹೊತ್ತಿಗೆ ಇಂಥಲ್ಲೇ ಬರುತ್ತೇನೆಂದು ಗೊತ್ತಿದ್ದದ್ದು ಬಾಬುಗೆ ಮಾತ್ರ. ಆತನೇ ತನ್ನನ್ನು ಪೊಲೀಸರಿಗೆ ಹಾಕಿಕೊಟ್ಟಿದ್ದಾನೆಂದು ಲೆಕ್ಕ ಹಾಕಿದ ಕವಳ ಜೈಲಿಂದ ಬಂದವನೇ ಬಾಬುವನ್ನು



...ಕಂಡ ಮಣಿ ಕವಳನಷ್ಟೇ, ಕವಳನಿಗಿಂತಲೂ ...ಯಕಾರಿಯೆಂಬ ಸಂಗತಿ ಪೊಲೀಸರಿಗೆ ಗೊತ್ತಾಗುವ ...ತ್ತಿಗೆ ಕವಳನೇ ಕೊಲೆಯಾಗಿ ಹೋಗಿದ್ದ. ಹಾಗಂತ ...ನ ಪರವಾಪ್ಪರಿಗೆ ಮಣಿಯ ತಾಕತ್ತು ...ನೆಂದೇನಲ್ಲ, ಬರುಬರುತ್ತ ಕವಳನ ದಂಧೆಗಳನ್ನೆಲ್ಲ ... ಬಾಬು ನಿಯಂತ್ರಿಸತೊಡಗಿದ್ದು ಬೇರೆಯದೇ ...ನೊಂದನ್ನು ಹುಟ್ಟು ಹಾಕಿತು. ತಾನು ಕವಳನಿಗೆ ...ಟ್ಟಿದ ತಮ್ಮ. ಆತನನ್ನು ಕಾಪಾಡಿದ್ದೂ ತಾನೇನೆ. ...ಪ್ರಾಣವನ್ನೂ ಲೆಕ್ಕಿಸದೆ ಅಣ್ಣನನ್ನು ಕಾಪಾಡಿದ್ದಕ್ಕೆ ಆತ ...ಸ್ವಂತ ತಮ್ಮನನ್ನೂ ನಂಬದಷ್ಟು ಸ್ವಾರ್ಥಿ. ಇದು ...ಮಣಿಕಂಠನ ತಲೆ ಕೊರೆಯಲು ಶುರುವಾಗಿದ್ದೇ ...ರಾ ಬಾಬುವಿನ ಓಡಿತದಿಂದ. ಇದೇ ಹೊತ್ತಿಗೆ ...ವಾಗಿ ಮಣಿಯ ಪತ್ನಿಯೂ ಕಿವಿ ಕಚ್ಚಿರಬೇಕು. ನಿನ್ನ ...ರಾದು ಕೋಟಿ ಆಸ್ತಿ ಮಾಡಿಕೊಂಡ. ಆದರೆ ...ಬಂದ ಲಾಭವೇನು? ಇವತ್ತಿಗೂ ನೀನು ...ಸುತ್ತಿದ್ದೀಯ... ಎಂದು ಚುಚ್ಚಿದ್ದಾಳೆ ಮಣಿಕಂಠನ ...

ಬಲಗಾಲು ಲ್ಯಾಪ್ಸ್

...ವಾಗಿದ್ದು, ಬಹುಶಃ ಕಳೆದ ಚುನಾವಣೆಯ ಹೊತ್ತಿಗೆ.



ಕಲಿಲ್ ಕವಳ, ರಾಕೇಶ್, ಆನೇಕಲ್ ನಂಜುಂಡ

ಹೊತ್ತೊಯ್ದು ಆತನ ಬಲಗಾಲನ್ನು ಕತ್ತರಿಸಿಬಿಟ್ಟ. ತನ್ನ ಬಲಗಾಲನ್ನೇ ಲ್ಯಾಪ್ಸ್ ಮಾಡಿದ ಕವಳನ ವಿರುದ್ಧ ಬಾಬು ಒಳಗೊಳಗೇ ಕತ್ತಿ ಮಸೆಯುತ್ತಿದ್ದ. ಯಾವತ್ತು ತಮ್ಮ ಮಣಿಯೇ ತನ್ನ ಅಣ್ಣನ ವಿರುದ್ಧ ಕಾರಸ್ಥಾನಕ್ಕಿಳಿದನೋ ಬಾಬುವಿಗೆ ಅದೇ ಲಾಯಕ್ಕಾಗಿ ಪರಿಣಮಿಸಿದೆ. ಇದಕ್ಕೆ ತಕ್ಕಂತೆ ಕವಳನ ದುಶ್ಮನ್‌ಗಳ ಬಲವೂ ವೃದ್ಧಿಸತೊಡಗಿತ್ತು. ಆ ಕಾಲದಿಂದಲೂ ಕವಳನಿಗೆ ಬೆಂಗಾವಲಾಗಿದ್ದ ಮಲೆಯಾಳಿ ಪ್ರವೀಣ ಮತ್ತು ಆತನ ತಮ್ಮ ರಜನಿ ಈಗ ದುಶ್ಮನ್‌ಗಳಾಗಿ ನಿಂತಿದ್ದರು. ಕವಳನ ಪಾಲಿಗೆ ದೊಡ್ಡ ತಾಕತ್ತಿನಂತಿದ್ದ ಕಾಟನ್‌ಪೇಟೆಯ ಕುಟ್ಟಿ-ರಾಜಾ ಬ್ರದರ್ಸ್ ಅಕ್ಷರಶಃ ಕವಳನನ್ನು ಮುಗಿಸಲು ನಿದ್ದೆಗೆಡತೊಡಗಿದ್ದರು. ಡೀಡಿ- ರವಿಗೂ ಕವಳನಿಗೂ ಹಿಂದಿನ ಗೆಳೆತನವಿರಲಿಲ್ಲ. ಸಾಲದ್ದಕ್ಕೆ ಸೈಕಲ್ ರವಿ ಕೂಡ ಒಳಗೊಳಗೇ ಕವಳನ ವಿರುದ್ಧ ಕತ್ತಿ ಮಸೆಯುತ್ತಲೇ ಇದ್ದ.

ತಮ್ಮನೇ ನಾಪತ್ತೆ

ಇದೆಲ್ಲದರ ಪರಿಣಾಮ ಭೀಕರವಾಗಿತ್ತು. ಲಡ್ಡು ನಾಗರಾಜ ಅಲಿಯಾಸ್ ಪ್ರಾಡ್ ರುಪಿ ಎಂಬ ಸಿನಿಮಾ ವಂಚಕನೊಬ್ಬ ಶುರುವಿನಿಂದಲೂ ಮಣಿಗೆ ಆತ್ಮೀಯನಾಗಿದ್ದ. ಆತನ ಮೂಲಕವೇ ಗರುಡಾಮಾಲ್‌ನಲ್ಲಿ ಯಾವುದೋ ಚಿತ್ರವೊಂದು ಕ್ಯಾಸೆಟ್ ಬಿಡುಗಡೆಗೆ ಕವಳ ಬರುವಂತೆ 'ಅತೃಪ್ತರ ಪಡೆ' ವ್ಯವಸ್ಥೆಗೊಳಿಸಿತು. ಕಾರ್ಯಕ್ರಮ ಮುಗಿಸಿ ಯಥಾವತ್ತು ತಮಿಳುನಾಡಿಗೆ ಎಂಟ್ರಿಯಾಗುತ್ತಿದ್ದಂತೆ ಹಂತಕ ಪಡೆ ಅಟ್ಯಾಕಾಯಿಸಿಕೊಂಡು ಕವಳನನ್ನು ಮುಗಿಸಿತು. ನಿಜಕ್ಕೂ ಅದು ನಖರಾ ಬಾಬುವಿನದ್ದೇ ಕೃತ್ಯವಾ? ಎಂಬ ಬಗ್ಗೆ ಇವತ್ತಿಗೂ ಪೊಲೀಸರಿಗೆ ಅನುಮಾನವಿದೆ. ಏಕೆಂದರೆ ಬಲಗಾಲೇ ಲ್ಯಾಪ್ಸ್ ಆಗಿ ಓಡುವುದಿರಲಿ, ನೆಟ್ಟಗೆ ನಡೆಯುವ ದಕ್ಕೂ ಆಗದ ನಖರಾ ಬಾಬು ಪಡೆ ಕಟ್ಟಿಕೊಂಡು ಕವಳನನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿ ಕೊಲ್ಲುತ್ತಾನೆಂಬುದೇ ನಂಬಲಾಗದ ಸಂಗತಿಯಾಗಿತ್ತು.

ವಿಚಿತ್ರ ಎಂಬಂತೆ ತಾನೇ ಕವಳನನ್ನು ಮುಗಿಸಿದ್ದು ಎಂದು ಬಾಬು ಸಿಸಿಬಿ ಪೊಲೀಸರೆದುರು ಸರೆಂಡರಾಗಿದ್ದ!

ಆಗಲೂ ಅಷ್ಟೇ ಕಾಲೇ ನೆಟ್ಟಗಿಲ್ಲದ ಬಾಬು ಹೇಗೆ ಈ ಘಾಟಿ ದಾಳಿ ನಡೆಸಲು ಸಾಧ್ಯ? ಎಂಬ ಗುಮಾನಿ ಪೊಲೀಸರಿಗಿದ್ದೇ ಇತ್ತು. ಇಂಥಾದ್ದೊಂದು ಅನುಮಾನ ಇನ್ನಷ್ಟು ಬಲವಾಗಿದ್ದು ಕವಳನ ಹತ್ಯೆಯ ನಂತರದ ಮಣಿಯ ವರ್ತನೆಯಿಂದ. ಒಡಹುಟ್ಟಿದ ಅಣ್ಣನದ್ದೇ ಹೆಣ ಬಿದ್ದಾಗಲೂ ತಮ್ಮ ಮಣಿ ಅಂತ್ಯಕ್ರಿಯೆಗೂ ತಲೆ ಹಾಕಲಿಲ್ಲ. ತಿಥಿಗೂ ಬರಲಿಲ್ಲ. ಎದೆ ಬಡಿದುಕೊಂಡು ಅಳುತ್ತಿರುವ ಅತ್ತಿಗೆ, ತಾಯಿ, ತಂಗಿಯರಾರನ್ನೂ ಸಂತೈಸಲಿಲ್ಲ. ಅಂದರೆ ಅಣ್ಣನ ಸಾವಿನ ಯಾವ ಪರಿಣಾಮಕ್ಕೂ ಮಣಿ ತಲೆ ಹಾಕಲೇ ಇಲ್ಲ. ಅಲ್ಲಿಗೆ ಪೊಲೀಸರಿಗೆ ಒಂದಂತೂ ಸ್ಪಷ್ಟವಾಗಿತ್ತು.

ತಮಿಳುನಾಡು ಗಡಿತನಕ ಕವಳನನ್ನು ಅಟ್ಟಾಡಿಸಿ ಕೊಲ್ಲುವಷ್ಟು ಶಕ್ತಿಯಾಗಲಿ, ಬುದ್ಧಿಯಾಗಲಿ ಬಾಬುವಿಗಿಲ್ಲ. ಅದರಲ್ಲೂ ಕಾಲು ಐಬಾದವನು ಇಂಥಾದೊಂದು ಸಾಹಸಕ್ಕಿಳಿಯುವುದು ಸಾಧ್ಯವೇ ಇಲ್ಲ. ಬಾಬು ಜೊತೆ ಪೊಲೀಸರಿಗೆ ಶರಣಾಗಿದ್ದ ವಿಶ್ವ, ಹೀರಾಲಾಲ್, ಲಕ್ಷ್ಮಣ ಇತ್ಯಾದಿಗಳ್ಯಾರೂ ಆ ಮಟ್ಟದ ಕಿಲಾಡಿಗಳಲ್ಲ. ಅಂದರೆ ಬೇರೆ ಯಾವುದೋ, ಬಲಾಢ್ಯ ಪಡೆಯೊಂದು ಕವಳನನ್ನು ಕೊಂದು ಅದಕ್ಕೆ ನಖರಾ ಬಾಬುವನ್ನು ಮುಂದಿಟ್ಟಿದೆ. ಕವಳನ ಸಾಮ್ರಾಜ್ಯದ ಆಮದನಿಯ ಆಸೆಗೆ ಬಿದ್ದು ಬಾಬು ಯಾರೋ ಮಾಡಿದ್ದನ್ನು ತನ್ನ ತಲೆಗೆ ಹೊತ್ತಿದ್ದಾನೆ. ಅಂದರೆ ಕವಳ ಹೊಸೂರಿನಲ್ಲಿ ಮನೆ ಮಾಡಿದ್ದು ಅದರ ವಿಳಾಸ ಎಲ್ಲ ಗೊತ್ತಿದ್ದದ್ದು ತಮ್ಮ ಮಣಿ ಮತ್ತು ಭಾಮೈದ ರಾಕೇಶನಿಗೆ ಮಾತ್ರ.


ಅಂದರೆ ರಾಕೇಶ, ನಂಜುಂಡ, ಸರವಣ ಮುಂತಾದವರೆಲ್ಲ ಕವಳನ ಹೆಣದ ಮುಂದೆ ನಿಂತು ಶಪಥಗೈಯುತ್ತಿದ್ದರೆ ಅಲ್ಲಿಗೆ ತಮ್ಮ ಮಣಿಕಂಠನ ಪತ್ತೆಯೇ ಇಲ್ಲವೆಂದರೆ ಏನರ್ಥ? ಒಂದೋ ಅಣ್ಣನ ಅಂತ್ಯಕ್ಕೆ ತಮ್ಮನೇ ಕೈಜೋಡಿಸಿರಬೇಕು ಅಥವಾ ಎದುರಾಳಿ ಪಡೆಗೆ ಅಣ್ಣನ ಅಡಗುತಾಣದ ಮಾಹಿತಿಯನ್ನಾದರೂ ಕೊಟ್ಟಿರಬೇಕು?

ಇಂಥದೊಂದು ಅನುಮಾನಕ್ಕೆ ಸಿಸಿಬಿ ಪೊಲೀಸರು ಬಿದ್ದಾಗಲೇ ಕವಳನ ಕೊಲೆ ಕೇಸು ಹೊತ್ತುಕೊಂಡು ತಮಿಳುನಾಡಿನ ಜೈಲು ಪಾಲಾಗಿದ್ದ ಬಾಬು ಮೂರೇ ತಿಂಗಳೊಳಗೆ ಜಾಮೀನಿನ ಮೇಲೆ ಹೊರಬಂದ. ಬಂದವನೇ ಎಪ್ಪತ್ತು ಮಂದಿ ಹುಡುಗರನ್ನು ಹಾಕಿಕೊಂಡಿದ್ದೇ ಸ್ಥಳೀಯ ಪುಢಾರಿಯೊಬ್ಬನ ಮಗನ ಮುಡಿ ತೆಗೆಯುವ ಸಮಾರಂಭಕ್ಕೆ ಬಂದು ಪೋಜು ಕೊಟ್ಟಿದ್ದ. ಕವಳನ ಸಮಸ್ತ ಸಾಮ್ರಾಜ್ಯಕ್ಕೂ ತಾನೇ ಅಧಿಪತಿಯೆಂದು ಭ್ರಮೆಗೆ ಬಿದ್ದ. ಆದರೆ ಸಾವು ಕ್ಷಣಕ್ಷಣಕ್ಕೂ ತನ್ನನ್ನು ಬೆನ್ನಟ್ಟಿ ಬರುತ್ತದೆಯೆಂಬುದನ್ನು ಮರೆತು ಬಿಟ್ಟ.


ಸಾವು ಬರುವ ಹೊತ್ತಿಗೆ ಬುದ್ಧಿ ಕೆಲಸ ನಿಲ್ಲಿಸುತ್ತದೆಯಂತೆ. ಅಕ್ಟೋಬರ್ 12ರ ಭಾನುವಾರ ಸಂಜೆ ಕರಿಯ ಮುನಿರಾಜನ ಮಾತು ನಂಬಿ ರಾಜಕಮಲ್‌ನ [illegible]ನೆ ಹೊಕ್ಕವನಿಗೆ ಅದೇ ಸಾವಿನ ಸನ್ನಿಧಿಯೆಂಬ ವಾಸ್ತವ ಅರಿವಾಗುವುದಕ್ಕೂ ಮುನ್ನವೇ ಬಾಬು ಹೆಣವಾಗಿ ಬಿದ್ದಿದ್ದ!


● ರಾ. ಸೋಮನಾಥ್

ಬೀಳಗಿ: ಶಾಸಕನ ಪರಾಕು, ಭ್ರಷ್ಟರ ಧಿಮಾಕು!



ಜೆ.ಟಿ. ಪಾಟೀಲ್





ಡಿ.ಎಫ್.ಓ. ಪಾಟೀಲ್

ಬೀಳಗಿಯ ಶಾಸಕ ಜೆ.ಟಿ.ಪಾಟೀಲ್‌ನ ದರ್ಬಾರು ದಿನದಿಂದ ದಿನಕ್ಕೆ ಬಿಗಡಾಯಿಸುತ್ತಲೇ ಹೋಗುತ್ತಿದೆ. ಮಾತುಮಾತಿಗೂ ತಾನೊಬ್ಬ ಕ್ಲೀನ್‌ಹ್ಯಾಂಡ್ ರಾಜಕಾರಣಿ ಅಂತ 'ತನ್ನಷ್ಟಕ್ಕೆ ತಾನೇ ಪರಾಕು ಹಾಕಿಕೊಳ್ಳುವ ಜೆ.ಟಿ.ಪಾಟೀಲ್‌ಗೆ ಭ್ರಷ್ಟ ಅಧಿಕಾರಿಗಳನ್ನು ಸಾಕುವುದನ್ನು ಬಿಟ್ಟು ಬೇರೆ ಯಾವ ಕ್ಯಾಮೆಯೂ ಇದ್ದಂತೆ ಕಾಣುತ್ತಿಲ್ಲ. ಇಲ್ಲದೇ ಹೋಗಿದ್ದರೆ ಅರಣ್ಯ ಇಲಾಖೆಯನ್ನು ಆರ್‌ಎಫ್‌ಓ ಹನುಮಂತ ಡೋಣಿ ಎಂಬ ರೊಕ್ಕಬಾಕನೂ, ಜಿಲ್ಲಾ ಪಂಚಾಯತ್ ಇಂಜನಿಯರಿಂಗ್ ವಿಭಾಗವನ್ನು ಮಹೇಶ್ ಕಕರೆಡ್ಡಿ ಎಂಬ ಗಂಟುಕಳ್ಳನೂ, ಕೃಷಿ ಇಲಾಖೆಯನ್ನು ನ್ಯಾಮಗೌಡರ್ ಎನ್ನುವ ಮತ್ತೊಬ್ಬ ಹೇತ್ಲಾಂಡಿಯೂ ಹರಿದು ಮುಕ್ಕುತ್ತಿರಲಿಲ್ಲ. ಇವರೆಲ್ಲರಿಗೂ ಕಳಶವಿಟ್ಟಂತೆ ಉದಯ್‌ಕುಮಾರನೆಂಬ ತಹಸೀಲ್ದಾರ್ ಕೂಡಾ ಪಾಟೀಲನ ಭಜನೆ ಮಂಡಳಿ ಸದಸ್ಯನಂತೆ ತಾಳ ಹಾಕುತ್ತಿದ್ದಾನೆ.

ತಾನು ಎಚ್.ಕೆ. ಪಾಟೀಲ್‌ರ ಸಂಬಂಧಿ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಕಮ್ ಮಾಹಿತಿ-ಜೈವಿಕ ತಂತ್ರಜ್ಞಾನ ಸಚಿವ ಎಸ್.ಆರ್. ಪಾಟೀಲ್‌ರ ಕುಲಬಾಂಧವ ಎಂಬರ್ಥದ ಡಿಪೆಂಡೆಂಟ್ ಡೈಲಾಗ್‌ಗಳ ಮೂಲಕ ಪ್ರಭಾವ ಸೃಷ್ಟಿಸಲು ಹೆಣಗಾಡುತ್ತಿರುವ ಜೆ.ಟಿ. ಪಾಟೀಲ್ ಬೀಳಗಿಗೆ ಶಾಸಕನಾಗಿ ಒಂದೂವರೆ ವರ್ಷ ಕಳೆಯುತ್ತ ಬಂದರೂ ಹೇಳಿಕೊಳ್ಳುವಂತಹ ಒಂದೇಒಂದು ಕಾಮಗಾರಿಯೂ ಜೀವ ತುಂಬಿಕೊಂಡಿಲ್ಲ. ಆಲಮಟ್ಟಿ ಹಿನ್ನೀರಿನಲ್ಲಿ ತಾಲ್ಲೂಕಿನ ಅಸ್ತಿತ್ವವೇ ಬಹುತೇಕ ಇಲ್ಲದಂತಾಗಿಹೋಗಿದೆ. ಮುಳುಗಡೆ ಸಂತ್ರಸ್ತರು ಮನೆ ಕಟ್ಟಿಕೊಳ್ಳಲು ಆಗದೆ ಮರಳು ಮಾಫಿಯಾದವರ ಕೈಯ್ಯಲ್ಲಿ ನಲುಗಿಹೋಗಿದ್ದಾರೆ. ಅವರ ಕಷ್ಟಕ್ಕೆ ಕಿವಿಯಾಗುವ ಬದಲು ಪತ್ರಿಕೆಗಳಿಗೆ ಪೋಜ್ ಕೊಟ್ಟು ಹಲ್ಲುಕಿರಿಯುವುದನ್ನೇ ಕಾಯಕವಾಗಿಸಿಕೊಂಡಿರುವ ಪಾಟೀಲ್‌ಗೆ ಅವನ ಅಧಿಕಾರಿ ವರ್ಗವೇ ಮುಳುವಾಗುತ್ತಿದೆ.

ತಹಸೀಲ್ದಾರ್ ಉದಯ್‌ಕುಮಾರ್, ಜಿ.ಪಂ. ಇಂಜನಿಯರಿಂಗ್ ವಿಭಾಗದ ಮಹೇಶ ಕಕರೆಡ್ಡಿ, ಅಗ್ರಿಕಲ್ಚರ್ ಆಫೀಸರ್ ನ್ಯಾಮಗೌಡರ್, ಜಿಎಲ್‌ಬಿಸಿ ಕೆನಾಲ್ ಸೆಕ್ಷನ್‌ನ ಸಣ್ಣಗೌಡರ್... ಇವರೆಲ್ಲಾ ಸ್ವತಃ ಜೆ.ಟಿ.ಪಾಟೀಲನೇ ಆಮದು ಮಾಡಿಸಿಕೊಂಡ ಅಧಿಕಾರಿ ಸಮೂಹ. ಇವರಿಗಿರುವ ಏಕಮಾತ್ರ ಅರ್ಹತೆಯೆಂದರೆ ಅವರೆಲ್ಲಾ ಶಾಸಕನ ಜಾತ್ಯಸ್ಥರೆನ್ನುವ ಹೆಮ್ಮೆ ಮಾತ್ರ. ಈ ಹಿಂದೆ ಎಸ್.ಎಂ. ಕೃಷ್ಣ ಸರ್ಕಾರದ ಅವಧಿಯಲ್ಲಿ ಶಾಸಕನಾಗಿದ್ದಾಗಲೂ ಜಾತಿರಾಜಕಾರಣ ಮಾಡಿಯೇ ಪಾಟೀಲ್ ಮಕಾಡೆ ಮಲಗಿದ್ದ.

ಅಂದು ಬೀಳಗಿ ಜಿ. ಪಂಚಾಯ್ತಿಯಲ್ಲಿ ಅಸಿಸ್ಟೆಂಟ್ ಇಂಜನಿಯರ್ ಆಗಿದ್ದ ಮಹೇಶ ಕಕರೆಡ್ಡಿ ಎನ್ನುವ ತನ್ನ ಕುಲಬಾಂಧವನಿಗೆ ಸುಮಾರು ಐದಾರು ಇಲಾಖಾ ಚಾರ್ಜ್ ನೀಡಿ ಮೇಯಲು ಬಿಟ್ಟಿದ್ದ. ಆನಂತರ ಈ ಕಕರೆಡ್ಡಿಯ ಅಕ್ರಮ ಆಸ್ತಿಯ ಮೇಲೆ ಲೋಕಾಯುಕ್ತರು ಮುರಕೊಂಡು ಬಿದ್ದು ಕೇಸ್ ಜಡಿದಿದ್ದು ಈಗ ಇತಿಹಾಸ. ಈಗಲೂ ಆ ಕೇಸ್ ನಡೆಯುತ್ತಲೇ ಇದೆ. ಅಂತಿಪ್ಪ ಕಕರೆಡ್ಡಿಗೆ ಮತ್ತೆ ಮಣೆ ಹಾಕಿರುವ ಜೆ.ಟಿ.ಪಾಟೀಲ್ ಜಿ. ಪಂಚಾಯ್ತಿ ಇಂಜನಿಯರಿಂಗ್ ವಿಭಾಗವನ್ನೇ ಉಂಬಳಿ ಬಿಟ್ಟಿರುವುದಲ್ಲದೆ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಹುದ್ದೆಯನ್ನೂ ದಯಪಾಲಿಸಿದ್ದಾನೆ.

ಇದೆಲ್ಲದರ ನಡುವೆ ಎಚ್.ಬಿ.ಡೋಣಿಯಂತಹ ಲಿಂಗಾಯತ ಆಸಾಮಿಯನ್ನು ಜಾತಿಸಂಕಲೆಯನ್ನೂ ಮೀರಿ ಜೆ.ಟಿ.ಪಾಟೀಲ್, ಏಕೆ ಕ್ಷೇತ್ರಕ್ಕೆ ಆಮದು ಮಾಡಿಸಿಕೊಂಡಿದ್ದ ಎನ್ನುವುದಕ್ಕೆ ಈಗೀಗ ಉತ್ತರ ಸಿಗುತ್ತಿದೆ. ಭ್ರಷ್ಟಾತಿಭ್ರಷ್ಟ ಮಹಾನ್ ಗರ್ವಿಷ್ಟ ಡೋಣಿ ಅರಣ್ಯ ಇಲಾಖೆಗೆ ಆರ್‌ಎಫ್‌ಓ ಆಗಿ ವಕ್ಕರಿಸಿದ ನಂತರ ಒಂದೇ ವರ್ಷದಲ್ಲಿ ಎರಡೂವರೆ ಕೋಟಿ ಎತ್ತುವಳಿ ನಡೆದಿದೆ!

ಆರ್‌ಎಫ್‌ಓ ಡೋಣಿ ಮೂಲತಃ ಮುಧೋಳ ತಾಲ್ಲೂಕಿನ ಮಂಟುರ ಗ್ರಾಮದವನು. 2002-03ರ ಸುಮಾರಿನಲ್ಲಿ ಹವಾಲ್ದಾರನಾಗಿ ಅರಣ್ಯ ಇಲಾಖೆಗೆ ಪಾದಾರ್ಪಣೆ ಮಾಡಿದ ಡೋಣಿ 2013ರಲ್ಲಿ ಆರ್ಟಿಕಲ್ 32ರ ಪ್ರಕಾರ ಬಡ್ತಿ ಗಿಂಜಿಕೊಂಡಿದ್ದ. ಅಸಲಿಗೆ ಅವತ್ತು ಬಡ್ತಿಯ ಜೊತೆಗೆ ಅವನನ್ನು ಮೈಸೂರು ಪ್ರಾಣಿ ಸಂಗ್ರಹಾಲಯಕ್ಕೆ ಟ್ರಾನ್ಸ್‌ಫರ್ ಮಾಡಲಾಗಿತ್ತು. ಆದರೆ ಪಕ್ಕಾ ಘಟಿಂಗನಾದ ಡೋಣಿ ಮೈಸೂರುಜೂಗೆ ಕಾಲಿಡಲೇ ಇಲ್ಲ. ಜೆ.ಟಿ. ಪಾಟೀಲ್‌ನ ಶಿಫಾರಸ್ಸು ಪತ್ರ ಕೈಲಿಡಿದು ನೇರವಾಗಿ ಅರಣ್ಯ ಮಂತ್ರಿ ಬಿ.ರಮಾನಾಥ ರೈಯನ್ನು ಎಡತಾಕಿದವನೆ ಬೀಳಗಿಗೆ ವಕ್ಕರಿಸಿದ್ದ. ಅವನನ್ನು ತನ್ನ ಕ್ಷೇತ್ರಕ್ಕೆ ತರಿಸಿಕೊಳ್ಳುವ ಸಲುವಾಗಿ ಇಲ್ಲಿ ಮೊದಲು ಆರ್‌ಎಫ್‌ಓ ಆಗಿದ್ದ ಕುಂಟೋಜಿಗೆ ಜೆ.ಟಿ. ಪಾಟೀಲನೇ ಜಾಕ್ ಏರಿಸಿ ಎತ್ತಿ ಬಿಸಾಕಿಸಿದ್ದ.

ಹೀಗೆ ಬೀಳಗಿಗೆ ವಕ್ಕರಿಸಿದ ಡೋಣಿ ತಾನೇ ಶಾಸಕನೇನೊ ಎಂಬಷ್ಟು ಹದ್ದುಮೀರಿ ವರ್ತಿಸುತ್ತಿದ್ದಾನೆ. ಡೋಣಿಯ ಅಂಡಿಗೆ ಬಿಸಿ ಮುಟ್ಟಿಸಬಹುದಾಗಿದ್ದ ಡಿಎಫ್‌ಓ ಹುದ್ದೆಯಲ್ಲಿ ಬಿ.ವಿ. ಪಾಟೀಲ್‌ನೆಂಬ 'Beer'ಬಲ್ಲ ಅಮಲುಗಣ್ಣಲ್ಲೇ ತೇಲಾಡುತ್ತಾ ಕುಳಿತಿರುವುದರಿಂದ ಡೋಣಿಯನ್ನು ಕೇಳುವವರೇ ಇಲ್ಲದಂತಾಗಿದೆ.

ಬಾಗಲಕೋಟೆಯಲ್ಲಿರುವ ಡಿಎಫ್‌ಓ ಕಚೇರಿಯ ಬಳಕೆಗೆಂದು ಸರ್ಕಾರ ನೀಡಿರುವ ಹೊಸ ಜೀಪನ್ನೇ ಡೋಣಿ ತನ್ನ ಸ್ವಂತಕ್ಕೆ ಬಳಸುತ್ತಿದ್ದಾನೆಂದರೆ ಅವನ ದಬ್ಬಾಳಿಕೆ ಅದಿನ್ನೆಂತದ್ದಿರಬೇಡ.

ಬೋಗಸ್ ಬಿಲ್ ಮತ್ತು ಕಾಮಗಾರಿಗಳ ನೆಪದಲ್ಲಿ 2012-13ರ ಒಂದೇ ವರ್ಷದಲ್ಲಿ ಎರಡೂವರೆ ಕೋಟಿ ರೂಪಾಯಿ ಪಂಗನಾಮವನ್ನು ಅರಣ್ಯ ಇಲಾಖೆಗೆ ತೀಡಲಾಗಿದೆ. ಜನರಲ್ ಕ್ಯಾಶ್‌ಬುಕ್, ಟ್ರೋಜರಿ ಟೋಕನ್ ಮುಖಾಂತರ ಬೋಗಸ್ ಕೆಲಸಗಳನ್ನು ಸೃಷ್ಟಿಸಿ ಕೂಲಿಕಾರರಿಗೆ ನೆಡುತೋಪು ನಿರ್ವಹಣೆ ಕಾಮಗಾರಿ ತೋರಿಸಿ ಬಿಲ್ ಪಾಸ್ ಮಾಡಲಾಗಿದೆ. ಆರ್‌ಎಫ್‌ಓ ಡೋಣಿ, ಯಾವುದೇ ಕಾಮಗಾರಿಗೆ ಮತ್ತು ಕೂಲಿಕಾರರಿಗೆ ಚೆಕ್ ನೀಡದೆ ಖಾಲಿ ಹೋಚರ್‌ಗಳಲ್ಲಿ ಸಹಿ ಪಡೆದು ಹಣ ಬಟಾವಣೆ ಮಾಡಿದ ದಾಖಲೆ ತೋರಿಸುತ್ತಿದ್ದಾನೆ.

ಬೀಳಗಿ ತಾಲ್ಲೂಕಿನಲ್ಲಿ ಮಾಸ್ಟರ್ ರೋಲ್ ಅಂತ ಹನ್ನೊಂದು ಜನ ಹಾಗೂ ಗುತ್ತಿಗೆ ಆಧಾರದಲ್ಲಿ ಗಾರ್ಡ್ ಹುದ್ದೆಗೆ 16 ಜನ ಸಿಬ್ಬಂದಿ ಇದ್ದಾರೆ. ಪ್ರತಿಯೊಬ್ಬರಿಗೆ 259 ರೂಪಾಯಿ ದಿನಗೂಲಿಯಂತೆ ತಿಂಗಳಿಗೆ ರೂ.7770 ಸಂಬಳ ನೀಡಬೇಕು. ಅದೂ ಚೆಕ್ ಮುಖಾಂತರ. ಕಮಕ್‌ಕಿಮಕ್ ಎಂದರೆ ಎಮ್ಮೆಲ್ಲೆ ಪಾಟೀಲ್‌ಗೆ ಹೇಳಿ ಕೆಲಸದಿಂದ ತೆಗೆಸಿಹಾಕುತ್ತೇನೆನ್ನುವ ಬೆದರಿಕೆ ಹಾಕಿರುವ ಡೋಣಿ ಅವರಿಗೆಲ್ಲಾ ಕೇವಲ ಮೂರು ಸಾವಿರ ಸಂಬಳ ನೀಡಿ ಉಳಿದಿದ್ದನ್ನೆಲ್ಲಾ ತನ್ನ ಜೇಬಿಗಿಳಿಸುತ್ತಿದ್ದಾನೆ.

ಇನ್ನು ಪ್ಲಾಂಟೇಷನ್‌ಗಳಿಗಾಗಿ ಎಸ್ಟಿಮೇಟ್ ಪ್ರಕಾರ ಸಂಬಂಧಿಸಿದ ಹವಾಲ್ದಾರ್‌ನ ಪರವಾನಗಿ ಗಣನೆಗೆ ತೆಗೆದುಕೊಂಡು ಒಬ್ಬರಿಗೆ 25 ಹೆಕ್ಟೇರ್‌ನಂತೆ ಕೆಲಸ ನಿರ್ವಹಿಸುವ ಅಧಿಕಾರ ನೀಡುವುದು ನಿಯಮ. ಆದರೆ ಡೋಣಿ ದರ್ಬಾರ್‌ನಲ್ಲಿ ಈ ನಿಯಮಕ್ಕೆ ಕಿಮ್ಮತ್ತಿಲ್ಲ. ಏಕೆಂದರೆ ಒಂದೇ ಸರ್ವೆಯಲ್ಲಿ 50 ಹೆಕ್ಟೇರ್ ಕಾಮಗಾರಿ ಒಬ್ಬರಿಗೆ ನೀಡಲಾಗುತ್ತಿದೆ. ಬಿಲ್‌ಪಾಸ್ ಮಾಡುವಾಗ ಭಾಗ ಒಂದು ಭಾಗ ಎರಡು ಎಂಬುದಾಗಿ ಅಸಂಬದ್ಧವಾಗಿ ನಮೂದಿಸಿ ಇಲಾಖೆಯ ಕಣ್ಣಿಗೆ ಮಣ್ಣೆರಚುತ್ತಿದ್ದಾನೆ.

ಅಷ್ಟೇಅಲ್ಲ, ರಿಸರ್ವ್ ಫಾರೆಸ್ಟ್ ಏರಿಯಾದಲ್ಲಿ ಬೇಕಾಬಿಟ್ಟಿ ಕಾಮಗಾರಿ, ಗಣಿಗಾರಿಕೆ ನಡೆಯುತ್ತಿವೆ. ಉದಾಹರಣೆಗೆ, ಜಿಲ್ಲಾ ಪಂಚಾಯ್ತಿ ಇಂಜನಿಯರಿಂಗ್ ವಿಭಾಗದ ಇಂಜನಿಯರ್ ಕಕರೆಡ್ಡಿ ಬೀಳಗಿಯಲ್ಲಿ ತನ್ನವರ ಅನುಕೂಲಕ್ಕಾಗಿ ಸಿಂದಗಿಯಿಂದ ಯಡಹಳ್ಳಿ (ಆರ್‌ಸಿ) ವರೆಗೆ ಡಾಂಬರ್ ರಸ್ತೆ ಕಾಮಗಾರಿಗೆ ಅನುಮತಿ ಕೊಡಿಸಿದ್ದಾನೆ. ಆ ಕಾಮಗಾರಿಯ ಗುದ್ದಲಿ ಪೂಜೆಗೆ ಸ್ವತಃ ಶಾಸಕ ಜೆ.ಟಿ.ಪಾಟೀಲನೇ ಗುದ್ದಲಿ ಹಿಡಿದು ನಿಂತಿದ್ದರೆ ಅಕ್ಕಪಕ್ಕದಲ್ಲಿ ಹಲ್ಲುಕಿರಿದು ರಾರಾಜಿಸಿದ್ದು ಇದೇ ಡೋಣಿ ಮತ್ತು ಕಕರೆಡ್ಡಿಯೆಂಬ ಹಕ್ಕಬುಕ್ಕರು.

ಅನಗವಾಡಿ, ಯಡಹಳ್ಳಿ, ಸಿದ್ದೇಶ್ವರ ಕಣಿ, ಅರಕೆರಿ ಗುಡ್ಡಗಳು ಅರಣ್ಯ ಪ್ರದೇಶಗಳಾಗಿದ್ದರೂ ಅಲ್ಲಿ ನಿರಂತರ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಡೋಣಿಯೇ ಮುಂದೆ ನಿಂತು ಕಲ್ಲುಪಿಕಾಸು ಎತ್ತುತ್ತಾನೆ. ಇದರಲ್ಲಿ ಡಿಎಫ್‌ಓ ಪಾಟೀಲ್‌ಗೆ, ಶಾಸಕ ಜೆ.ಟಿ.ಪಾಟೀಲ್‌ಗೆ ಪಾಲು ಇಲ್ಲದಿಲ್ಲ. ನೈಸರ್ಗಿಕ ಅರಣ್ಯ ಪ್ರದೇಶವನ್ನು ಹಾಳುಗೆಡವಿ ಅದೇ ಸ್ಥಳದಲ್ಲಿ ಮತ್ತೆ ಸಸಿ ನೆಡುವ 'ವಿಚಿತ್ರ' ಕಾಮಗಾರಿಗೆ ಒಂದು ವರ್ಷದಲ್ಲಿ ಕೋಟಿ ಲೆಕ್ಕದಲ್ಲಿ ಲೂಟಿ ನಡೆದಿದೆ.

ತನ್ನನ್ನು ತಾನು ಕ್ಲೀನ್‌ಹ್ಯಾಂಡ್ ಎಂದು ಜಾಹೀರಾತು ಒದರಿಕೊಳ್ಳುವ ಬದಲು ಕ್ಷೇತ್ರದಲ್ಲಿರುವ ಇಂತಹ ಖದೀಮರನ್ನು ಒದ್ದು ಓಡಿಸದಿದ್ದರೆ ಮುಂಬರುವ ಚುನಾವಣೆಯಲ್ಲಿ ಜನರೇ ಜೆ.ಟಿ. ಪಾಟೀಲನನ್ನು ಒದ್ದು ಮನೆಗೆ ಕಳುಹಿಸುವ ಚಾನ್ಸು ದಟ್ಟವಾಗಿದೆ.

– ಮೇಘರಾಜ್

ಕಂಬಾಲಪಲ್ಲಿಯ ಕವಿತೆ



ಭರತ ಖಂಡದ ಜಾತಿ ದ್ವೀಪಗಳು
ಕೂಪ ಮಂಡೂಕದ ಜಾತಿ ಹಳ್ಳಿಗಳು
ಒಂದೇ ಗುಣಗಳಿವೆಯೋ..
ಬಿಹಾರದ ಬಾಥೆ ಮಹಾರಾಷ್ಟ್ರದ ಖೈರ್ಲಾಂಜಿ
ಆಂಧ್ರದ ಚುಂಡೂರು
ಕರ್ನಾಟಕದ ಕಂಬಾಲಪಲ್ಲಿಯೋ..

ಸಮಾಧಿಯೊಳಗೆ ಸುಟ್ಟ ಜೀವಗಳು
ಕೊಳೆಯದೆಯೆ ಕಾಯುತಲಿವೆ
ಕೊಂದ ಪಾಪಿಗಳ ಕೊರಳಿಗೆ
ನೇಣಿಗಾಗಿ ತವಕಿಸುತಲಿವೆ
ಕಳೆದುಹೋದ ದಿನಗಳಲ್ಲಿ
ಕಾಲವೆ ಕಣ್ಮುಚ್ಚಿರಲೂ..
ಸುಟ್ಟ ತೊಗಲ ವಾಸನೆ ಏಕೋ ತೊಲಗುತ್ತಿಲ್ಲ.

ಸುಟ್ಟ ಬೂದಿ ತಿಪ್ಪೆ ಸೇರಿ
ಗೊಬ್ಬರ ಹೊಲವ ಸೇರಿ
ರಸವಾಗಿ ಭೂಮಿ ತೂರಿ
ಬಂದ ಬೆಳೆಗಳು ಓಲಾಡಿ
ಸಾಕ್ಷಿ ಹೇಳಲು ಬಾಯಿ ಬಿಡಲು
ಸೊಂಟ ಮುರಿದು ಮಲಗಿಸಿಹರೋ..
ಸೌಧದೊಳಗಿನ ಖಾದಿಗಳಿಗೆ ಕರುಣೆಯ ಕಣ್ಣಿಲ್ಲ.

ದುಡಿದು ತಿನ್ನುವ ಬಾಯಿಗಳಿಗೆ
ಕುಳಿತು ತಿನ್ನುವರು ಬೀಗ ಜಡಿದು

ಕೊಲ್ಲುವ ಚಿಹ್ನೆಯ ಕಣ್ಣ ಸನ್ನೆಗಳು
ನುಡಿವ ನಾಲಿಗೆಗೆ ಮೊಳೆ ಕೂಡಿಸಿ
ಕಪ್ಪು ಬಿಳುಪಿನ ಪಂದ್ಯದಲ್ಲಿ
ಪ್ರಾಣಗಳನ್ನೆ ಪಣಕೆ ಇಟ್ಟಿರೋ..
ಕೆಂಪು ಕಟ್ಟಡಕ್ಕೆ ಅರಿವ ಪರಿವೆಯಿಲ್ಲ.

ಬಂದು ಸೇರುವವೆ ಕಿರಿಯ ಟಿಗರುಗಳು?
ಕೊಂಬು ಬೆಳೆಸುವವೆ ಹಿರಿಯ ಗೂಳಿಗಳು?
ಭೂತ ಬಿಡುವುದೇ ಕೆಂಪು ಸೇನೆ?
ಕೊಡವಿ ನಿಲ್ಲುವುದೆ ಹಸಿರು ಪತಾಕೆ?
ಹೋರಾಟದ ಸಾಗರಕ್ಕೆ
ಹರಿಯಬಲ್ಲವೆ ನೂರು ನದಿಗಳೂ...
ಮರೆತುಹೋದ ಇತಿಹಾಸ ಮತ್ತೆ ಮರಳಬಹುದೇ?

ವಿಕಾಸ ಆರ್ ಮೌರ್ಯ, ಬೆಂಗಳೂರು

ಮಕ್ಕಳ ಶಿಕ್ಷಣದ ಹಕ್ಕಿಗೆ ಸಂದ ನೊಬೆಲ್

ರಾಷ್ಟ್ರದ ಅಭ್ಯುದಯಕ್ಕೆ ಮಕ್ಕಳ ಕನಸುಗಳೊಟ್ಟಿಗೆ ...ಗೆ ಮುಕ್ತವಾಗಿರುವ ತಿಳಿವಾತಾವರಣ ನಿರ್ಮಾಣ ...ಬೇಕು. ಮಕ್ಕಳು ಬೆಳೆಯಬೇಕು, ಬದುಕಬೇಕು, ...ಕೊಳ್ಳಬೇಕು, ಚರ್ಚಿಸಬೇಕು, ಹಕ್ಕುಗಳನ್ನು ಪ್ರತಿ...ಬೇಕು, ಅಭಿವೃದ್ಧಿಗೆ ಸಹಭಾಗಿಯಾಗಬೇಕು ಎಂದು ...ದಿಸಿದ್ದಲ್ಲದೇ, ಎಲ್ಲಿಯವರೆಗೆ ಮಕ್ಕಳ ಅಸ್ತಿತ್ವಕ್ಕೆ ...ತ್ವ ದೊರೆಯದೋ ಅಲ್ಲಿಯವರೆಗೂ ಆ ರಾಷ್ಟ್ರಕ್ಕೆ ...ವಿಲ್ಲವೆಂದೇ ಭಾವಿಸಿಕೊಳ್ಳಬೇಕು ಎಂಬು ...ಮಟ್ಟದಿಂದ ಸಾರತೊಡಗಿದ ಸಹಸ್ರಾರು ಮಂದಿ ...ಹಕ್ಕುಗಳ ಹರಿಕಾರರಿಗೆ ಸಂಭ್ರಮಿಸಲು ಇದ...ಉತ್ತಮ ಅವಕಾಶ ದೊರೆಯಲಾರದು. ಜಗತ್ತಿನ ...ಷ್ಠ ಪಾರಿತೋಷಕವೆಂದೇ ಪರಿಗಣಿಸಲಾಗಿ ರುವ ...ರ್ ಪುರಸ್ಕಾರಕ್ಕೆ ಮಕ್ಕಳ ಹಕ್ಕುಗಳ ಅಸೀಮ ಹೋರಾಟ...ರ ಕೈಲಾಶ್ ಸತ್ಯಾರ್ಥಿ ಮತ್ತು ಯೂಸೂಫ್ ...ರವರುಗಳು ಭಾಜನರಾಗಿದ್ದಾರೆ. ಅವರಿಬ್ಬರುಗಳ ...ಲಹರಿಗಳು ಒಂದೇ. ಕೈಲಾಶ್ ಅದರಲ್ಲಿ ...ರು, ಕಿರಿಯ ಮಲಾಲಳೂ ಹಿರಿಯ ಳಾದದ್ದು ...ದೇ. ಕಟ್ಟಿಕೊಂಡ ವಿಚಾರಗಳು, ಪ್ರಯತ್ನಗಳು ...ಯಿಲ್ಲದೇ ಸೋಲಬಾರದು, ಅವುಗಳೆಲ್ಲವೂ ...ಬೇಕು ಎನ್ನುತ್ತಲೇ ಮಕ್ಕಳ ವಿಷಯವನ್ನು ಅದರಲ್ಲಿ ...ಅವಕಾಶ ವಂಚಿತ ಹಾಗೂ ತಿರಸ್ಕರಿಸಲ್ಪಟ್ಟಂತಹ ...ವಿಚಾರ ವನ್ನು ಕೈಗೆತ್ತಿಕೊಂಡು ಅದಕ್ಕೊಂದು ...ಹೋರಾಟದ ಹಾದಿಯನ್ನು ತೋರಿಸಿಕೊಟ್ಟವರು ...ಶ್ ಸತ್ಯಾರ್ಥಿ.

...ಯಾರೀ ಕೈಲಾಶ್ ಸತ್ಯಾರ್ಥಿ?


...ನವರಿ 11-1954ರಲ್ಲಿ ಮಧ್ಯಪ್ರದೇಶದಲ್ಲಿನ ...ಜಿಲ್ಲೆಯಲ್ಲಿ ಜನಿಸಿದ ಕೈಲಾಶ್, ಪ್ರವೃತ್ತಿಯಲ್ಲಿ ...ನಿಕ್ ಇಂಜಿನಿಯರ್ ಆದರೂ ವೃತ್ತಿಯಲ್ಲಿ ...ಗಿ ಐದುವರ್ಷಗಳ ಕಾಲ ಭೋಪಾಲ್‌ನಲ್ಲಿ ಕಾರ್ಯ...ಸಿದವರು. ಇವರೆಂದಿಗೂ ಉದ್ಯೋಗವನ್ನೇ ನಂಬಿ...ದವರಲ್ಲ, ತಮ್ಮೆದುರಿನಲ್ಲೆ ಚಪ್ಪಲಿ ಹೊಲಿಯುವ ...ಬವೊಂದರ ಮಗುವೊಂದು ದುಡಿಯುತ್ತಾ, ...ದೆ ಹೊರೆಯನ್ನು ಹೊರಲಾರದೇ ಹೊರುತ್ತಾ ...ತ್ತಿರುವುದನ್ನು ನೋಡಲಾಗದೇ, ತಮ್ಮ ನಿಲುವುಗಳೆ ...ಮಕ್ಕಳ ಪರವಾಗಿರಬೇಕೆಂದು ಕೊಂಡವರು. ...ಲ್ಲಿಯೂ ಜನ, ಸಮಾಜ ಗಮನಿಸದ ಮಕ್ಕಳಿಗಾಗಿ ...ದುಡಿಯತೊಡಗಿದರು. ದೆಹಲಿಯನ್ನು ತಮ್ಮ ...ಸ್ಥಾನವನ್ನಾಗಿ ಮಾಡಿಕೊಂಡು, ಮಕ್ಕಳ ಸಮಸ್ಯೆಗಳ ...ವಿಶ್ವದಾದ್ಯಂತ ಗಮನ ಸೆಳೆಯುವ ಪ್ರಯತ್ನಕ್ಕೆ ...ಒದಗಿಸಿದರು. 1983ರಲ್ಲಿ "ಬಚಪನ್ ...ವೋ" ಆಂದೋಲನದ ಕಾರ್ಯದರ್ಶಿಯಾಗಿ ...ಕೈಗೊಂಡ ಕಾರ್ಯಕ್ರಮಗಳು ಅಗಾಧವಾದುತವು. ...ಕೈಲಾಶ್‌ರವರು ಪರಿಚಿತರು ಒಟ್ಟಿಗೆ ಕಲೆತು, ...ಡನೆ ಕೆಲಸ ಮಾಡಿದವರು.

...ನೀ ಸಮಸ್ಯೆ ಆ ದಿನಗಳಲ್ಲಿ?

...ಕ್ಕಳು ಬೆಳಕನ್ನೇ ಕಾಣದೇ ಅಜ್ಞಾನದ ಕತ್ತಲಲ್ಲಿ ...ಬೇಕು ಎನ್ನುವ ವಿಕೃತ ಮನಸ್ಸಿನ ಕ್ರೂರ ಜನರು ...ಟುಂಬಗಳಲ್ಲಿರುವ ಮಕ್ಕಳನ್ನು ಹಣ ನೀಡಿ ...ತ್ತಿದ್ದರು. ಮನೆಯಲ್ಲಿ ದುಡಿತದ ಮಗುವಿದ್ದರೆ ...ಬದುಕುವ ನಿಟ್ಟಿನಲ್ಲಿ ಇವರು ಮಧ್ಯಮ ಮತ್ತು ...ಮಧ್ಯಮವರ್ಗದ ಕುಟುಂಬಗಳಿಂದ ಮಕ್ಕಳನ್ನು ...ಣದಿಂದ ಕೊಳ್ಳತೊಡಗಿದರು. ಸುಶಿಕ್ಷಿತ ಎನ್ನುವ ...ಹಳ್ಳಿಗಾಡಿನ ಮಕ್ಕಳನ್ನು ನಗರಕ್ಕೆ ತಂದು ...ವನ್ನು ತಮ್ಮ ಲೂಟಿಗಾಗಿ ಬಳಸಿಕೊಂಡಿದ್ದು ...ಮತ್ತು ಕಟುಸತ್ಯ! ಅದಲ್ಲದೇ, ಜಮೀನ್ದಾರರು ...ಮಕ್ಕಳನ್ನು ಅಡವಿಟ್ಟುಕೊಂಡು, ಅವರ ಬೌದ್ಧಿಕ ...ಗೆಯನ್ನಷ್ಟೇ ಅಲ್ಲದೇ ದೈಹಿಕ ಬೆಳವಣಿಗೆಯನ್ನು ...ದ್ದು ಕಠೋರಸತ್ಯ. ಈ ಎಲ್ಲಾ ಕೆಲಸಗಳಿಂದ ...ತ್ತಾ ಬೆಳೆದ ಮಕ್ಕಳು ಹೋಟೆಲ್ ಉದ್ಯಮ ...ಎಂಜಲನ್ನು ಎತ್ತುತ್ತಲೇ ಎಂಜಲಾಗಿ ...ವು. ಅವರ ಮೇಲೆ ಘನ ಸರ್ಕಾರದ ಕಣ್ಣು ...ಇಲ್ಲ, ಯಾವಾಗಲೂ ಪುಸ್ತಕಾಲಯದಲ್ಲಿಯೇ ...ಉತ್ತರಕ್ಕಾಗಿ ಕೇಳಿದವರ ಕೈಯಿಂದಲೆಲ್ಲ ...ಬಿಡಿಸಿಕೊಳ್ಳುತ್ತಲೇ, ಹಸಿವು, ಸಂಕಟ ಮತ್ತು ...ಇಲ್ಲದ ಬಾಳಲ್ಲಿ ಬಿದ್ದ ಕ್ಷಣಿಕ ಜೀವಗಳ ...ಹಿಡಿದ ಹೃದಯವಂತ ಕೈಲಾಶ್! ...ವನ್ನು ಬೆಳಕಿಗೆ ತಂದಿದ್ದಲ್ಲದೇ, ಸರ್ಕಾರವು ಈ ...ಬಗ್ಗೆ ಚಿಂತಿಸುವಂತೆ ಮಾಡಿದ್ದೂ ಇವರ ...ಸ್ತುತ್ಯವೇ ಸರಿ.

...ಬೀಗುದಿಂಪುಲ್ಲಿ ಬೀಯುತ್ತಾ, ಗಣಿ ...ಕಾರ್ಖಾನೆಗಳಲ್ಲಿ, ಚರ್ಮ ಹದಗೊಳಿ...ಕಾರ್ಖಾನೆಗಳಲ್ಲಿ, ಚಿಂದಿ ಮಕ್ಕಳು ಆರಳುವ





ಮೊದಲೇ ಮುಕ್ಕಾಗಿ ಹೋಗುತ್ತಿರುವುದನ್ನು ನೋಡಲಾಗದೆ, ರಾಷ್ಟ್ರಾದ್ಯಂತ ಪ್ರವಾಸವನ್ನು ಕೈಗೊಂಡು "ಬಾಲಕಾರ್ಮಿಕ ವಿರೋಧಿ ಜಾಗೃತಿ ನಡಿಗೆ"ಯನ್ನು ಪ್ರಾರಂಭಿಸಿದರು. ಸಾಹಿತಿಗಳನ್ನು, ವಿಚಾರವಂತರನ್ನು, ಕಾರ್ಮಿಕ ಸಂಘಟನೆಗಳನ್ನೊಳಗೊಂಡಂತಹ ಹಲವಾರು ಸಂಘಟನೆಗಳನ್ನು, ಜನಸಾಮಾನ್ಯರನ್ನು ಒಳಗೊಂಡಂತೆ ಹದಿನೈದು ಸಾವಿರ ಕಿಲೋಮೀಟರ್ ಉದ್ದದ ಜಾಥಾವನ್ನು ಪ್ರಾರಂಭಿಸಿದರು. ಇದೇ ಮೊದಲ ಬಾರಿಗೆ ಮಕ್ಕಳು ಇದ್ದಾರೆ, ಅದೂ ಈ ರೀತಿಯ ನರಕದಲ್ಲಿ ಇದ್ದಾರೆ ಎಂದು ಪ್ರತೀ ಸರ್ಕಾರಗಳು ಈ ಚಳವಳಿಯಿಂದಾಗಿ ನೊಂದ ಮಕ್ಕಳೆಡೆಗೆ ದೃಷ್ಟಿಹರಿಸುವ ಪರಿಣಾಮಕಾರಿ ಬದಲಾವಣೆ ಸಾಧ್ಯವಾಯಿತು! ಮಕ್ಕಳನ್ನು ಮಾರಿ ಬದುಕುವ, ಮಕ್ಕಳನ್ನು ದುಡಿಸಿ ತಿನ್ನುವ ಕುಟುಂಬದ ಅಸಹಾಯಕತೆಯನ್ನು ಜನ ಸರ್ಕಾರದ ಗಮನಕ್ಕೆ ತಂದರು. ಇವರ ಹೋರಾಟದ ಹಾದಿ ಎಂದಿಗೂ ಸಮಾಧಾನಚಿತ್ತದಿಂದ ನಡೆದಿಲ್ಲ. ಮಕ್ಕಳನ್ನು ವೇಶ್ಯಾವಾಟಿಕೆಗೆ ದೂಡುವ ವಿಕೃತ ಜನರಿಂದ ಕೊಲೆ ಪ್ರಯತ್ನ,

ಹಾಗೆಯೇ ಪುರಿಮಂಡಿಗಳಲ್ಲಿ, ಚರ್ಮ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ಸಾವಿರಾರು ಮಕ್ಕಳು ಕಾರ್ಖಾನೆಗಳಿಂದ ಹೊರಬಂದುಬಿಟ್ಟರು. ಹೀಗೆ ಹೊರಬಂದ ಮಕ್ಕಳ ಬದುಕು ಹೇಗೆ ಎಂಬ ಪ್ರಶ್ನೆ ಎದುರಾದಾಗ "ಬಾಲಕಾರ್ಮಿಕ ವಿರೋಧಿ ಆಂದೋಲನ" ಹಾಗೂ "ಬಚಪನ್ ಬಚಾವೋ" ಆಂದೋಲ ನಗಳ ಪ್ರಯತ್ನದಿಂದಾಗಿ ಭಾರತ ಸರ್ಕಾರವು ಎನ್‌ಸಿಎಲ್‌ಪಿ (ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ) ಯೋಜನೆಯನ್ನೇ ಜಾರಿಗೆ ತಂದಿತು!

ಆಡಳಿತದಲ್ಲಿಯೂ ಮಕ್ಕಳ ಹಸ್ತಕ್ಷೇಪಗಳು ಇರಬೇಕೆಂದು, ಅವರ ನಿರ್ಣಯಗಳನ್ನು ಗೌರವಿಸಬೇಕೆಂದು ತಿಳಿಸುತ್ತಾ ಅವರ ಹಕ್ಕು ಜವಾಬ್ದಾರಿಗಳನ್ನು ಕೈಲಾಶ್‌ರವರು ಪ್ರತಿಪಾದಿಸುತ್ತಾ ಬಂದರು. "ಇಡೀ ರಾಷ್ಟ್ರವೇ ಕೋಮುವಾದ ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿಹೋಗಿದೆ. ಇಂತಹ ಸಂದರ್ಭದಲ್ಲಿ ಮಕ್ಕಳೇ ರಾಷ್ಟ್ರದ ಭವಿಷ್ಯ ಅವರೇ ಜಾಗೃತಿ ನಾಯಕರು, ಅವರನ್ನು ಜಾಗೃತಿಗೊಳಿಸೋಣ" ಎನ್ನುತ್ತಲೇ

ಮಕ್ಕಳನ್ನು ದುಡಿಸಿಕೊಳ್ಳುವಂತಿಲ್ಲ ಎಂಬುದರ ಕಾನೂನಿನ ಹಿಂದೆ ಕೈಲಾಶ್‌ರವರ ಕೈಗುಣ ಬಹುದೊಡ್ಡದಾಗಿಯೇ ಇದೆ. ಸಂರಕ್ಷಿಸಿದ ಮಕ್ಕಳ ಲಾಲನೆ, ಪಾಲನೆಗಾಗಿ ತನ್ನದೇ "ಮುಕ್ತಿ" ಆಶ್ರಮವನ್ನು ತೆರೆದು, ಅವರ ಬದುಕಿನ ದಾರಿಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಜನಾಂದೋಲನವನ್ನು ಸೃಷ್ಟಿಸಿದರು. ಹೋರಾಟವು ಜನಪರವಾಗಿರಬೇಕು, ಎಂದೆಂದೂ ಹೋರಾಟವು ನಿಲ್ಲುವುದಿಲ್ಲ, ಇದು ಕೇವಲ ಬಡತನ ನಿರ್ಮೂಲನೆ ಹಾಗೂ ಹಕ್ಕುಗಳ ರಕ್ಷಣೆಯ ಹೋರಾಟವಲ್ಲ, ಬದುಕು ಭಾವನೆಗಳ ಧಮನಿತ ಮಕ್ಕಳ ಪರವಾಗಿರುವವರ ಹೋರಾಟ ಎಂದಿರುವುದಲ್ಲದೇ, ಅನೇಕ ಮಕ್ಕಳನ್ನು ಗಾಂಧೀಮಾರ್ಗದಲ್ಲಿ ಮುನ್ನಡೆಯುವಂತೆ ಮಾಡಿದ ಈ ಹೋರಾಟಗಾರನಿಗೆ ನೊಬೆಲ್ ಪಾರಿತೋಷಕ ದಕ್ಕಿರುವುದು ಪ್ರಾಮಾಣಿಕ ಹೋರಾಟಗಾರರೆಲ್ಲರ ಎದೆಯಲ್ಲಿಯೂ ಪ್ರಶಾಂತ ದೀಪದ ಕಿಚ್ಚು ಹಚ್ಚಿಸಿದಂತಿದೆ. ಅದು ಬೆಳಗಬೇಕು, ಬೆಳೆಯಬೇಕು.....

ಯೂಸೂಫ್ ಮಲಾಲ

ತಿಕ್ಕಲು, ವಿಚಿತ್ರ ಜನರು ದಿನಕ್ಕೊಂದು ಸಂದೇಶ, ದೇವರ ನೇರ ಸಂಪರ್ಕದಲ್ಲಿದ್ದೇವೆಂದುಕೊಂಡು ಮುಗ್ಧ ಅಸಹಾಯಕರನ್ನಲ್ಲದೇ ಇಡೀ ಸಮುದಾಯವನ್ನು ದನಿ ಎತ್ತಲು ಬಿಡದ ತಾಲಿಬಾನಿಗಳು! ಹೆಣ್ಣೆಂದರೆ ಹಡೆಯುವ, ದುಡಿಯುವ ಯಂತ್ರ! ಜನರೆಂದರೆ ಇವರ ಸಹಚರರು ಎಂದೇ ಅರ್ಥ. ಶಿಕ್ಷಣಕ್ಕೆ ಹೆಣ್ಣುಮಕ್ಕಳು ಬೇಡ, ಬೇಡ ಎಂದರೆ ಬೇಡವೆಂದೇ ಅರ್ಥ. ಹೆಣ್ಣೊಂದು ಜೋರಾಗಿ ಧ್ವನಿ ಎತ್ತಲಾಗದೇ, ಜೋರಾಗಿ ಅಳಲಾಗದೇ, ಆಸ್ಪತ್ರೆ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಿಗೆ ತೆರಳಲಾಗದೇ ಇರುವ ಅಹಿತಕರವಾದ ಪರಿಸರದಲ್ಲಿ ಆ ಮುಗ್ಧ ಮಗು, ಅವಳಾಡಿದ ಮಾತಿಗೆ ಸಿಕ್ಕ ಮನ್ನಣೆ ಅಷ್ಟಿಷ್ಟಲ್ಲ, ಇಂದಿಗೆ ಆರೂವರೆ ವರ್ಷಗಳ ಹಿಂದೆ ಎದೆಗೆ ಒದ್ದಂತೆ "ಯಾವ ಧೈರ್ಯದಿಂದ ತಾಲಿಬಾನಿಗಳು ನನ್ನ ಸ್ವಾತಂತ್ರ್ಯವನ್ನು, ಭಾವನೆಯನ್ನು ಕಸಿಯಲು ಸಾಧ್ಯ, ನನ್ನ ಶಿಕ್ಷಣ ನನ್ನ





ಹಲ್ಲೆ ಇವರ ಮೇಲೆ ನಿರಂತರವಾಗಿ ನಡೆಯುತ್ತಲೇ ಬಂದಿದೆ ಹಾಗೂ ಸರ್ಕಾರಗಳು ಕೂಡ ಅವರ ವಿರುದ್ಧ ದೂರುಗಳನ್ನು ದಾಖಲಿಸುತ್ತಲೇ ಬಂದಿವೆ. ಅಷ್ಟರಮಟ್ಟಿಗೆ ಮಾತ್ರ ಕೈಲಾಶ್‌ರವರ ಪರಿಚಯ ನಮ್ಮನ್ನಾಳುವ ಸರ್ಕಾರಕ್ಕಿದೆ!! ಎಂದಿಗೂ ಈ ರೀತಿಯ ಪ್ರಯತ್ನಕ್ಕೆ ಕೃತಜ್ಞತೆಯ ನೆನಪುಗಳಿಲ್ಲವೇನೋ ನಮ್ಮ ಸರ್ಕಾರದಲ್ಲಿ.

ಇವರ ಪ್ರಯತ್ನದ ಹಾದಿಯಲ್ಲಿ ರಾಷ್ಟ್ರೀಯ ಜನರು ಅವರನ್ನು ಗುರುತಿಸಿದ್ದಾರೆ ಆದರೆ ನಮ್ಮ ಸರ್ಕಾರಗಳು ಅವರನ್ನು ಗುರುತಿಸಲಿಲ್ಲ, ಆದರೆ ಅಂತರಾಷ್ಟ್ರೀಯ ಮಟ್ಟದ ಮನ್ನಣೆಗೆ, ಗೌರವಗಳಿಗೆ ಪಾತ್ರವಾಗಿದ್ದಾರೆ. ಬಹುಮುಖ್ಯವಾಗಿ 1998ರಲ್ಲಿ ನೆದರ್‌ಲ್ಯಾಂಡ್ಸ್‌ನಿಂದ ನೀಡಲ್ಪಡುವ ಅತ್ಯುನ್ನತ ಪ್ರಶಸ್ತಿ "ಗ್ಲೋಬಲ್ ಬ್ಲಾಗ್ ಅವಾರ್ಡ್", 2007ರಲ್ಲಿ "ಇಟಲಿ ಸೆನೆಟ್ ಮೆಡಲ್", "ರಾಬರ್ಟ್ ಎಫ್ ಕೆನಡಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಪ್ರಶಸ್ತಿ", ಜರ್ಮನಿಯ "ಫೆಡ್ರಿಕ್ ಎಬರ್ಟ್ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಪ್ರಶಸ್ತಿ", 2009ರಲ್ಲಿ ಅಮೆರಿಕಾ ಸರ್ಕಾರದ "ಡಿಫೆಂಡರ್ಸ್ ಆಫ್ ಡೆಮಾಕ್ರಸಿ", ಮೊದಲಾದವುಗಳನ್ನೊಳಗೊಂಡಂತೆ 2014ರ ನೊಬೆಲ್ ಪ್ರಶಸ್ತಿ ಬರುವವರೆಗೂ ಅನೇಕ ಸಂಘಸಂಸ್ಥೆಗಳು, ಅಂತರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳು ಇವರನ್ನು ಗೌರವಿಸಿವೆ.

ಮಕ್ಕಳ ಶಿಕ್ಷಣದ ಬದುಕನ್ನು ವಂಚಿಸಿ, ಅವರಿಂದ ತಯಾರಿಸಲ್ಪಟ್ಟ ಕಾರ್ಖಾನೆಯ ವಸ್ತುಗಳನ್ನು ಗ್ರಾಹಕರು ಕೊಳ್ಳಬಾರದು ಎಂಬ ಅಂತಃಕರಣ ಪೂರ್ವಕ ಸಂದೇಶವನ್ನು ಇವರು ಬಿತ್ತರಿಸಿದರು. ಪರಿಣಾಮವಾಗಿ ಪ್ರಜ್ಞಾವಂತರಾದ ಜನಸಾಮಾನ್ಯರು ಮಕ್ಕಳಿಂದ ತಯಾರಾದ ಕೆಲವು ವಸ್ತುಗಳನ್ನು ತಿರಸ್ಕರಿಸತೊಡಗಿದರು. ಇದೊಂದು ಗಾಂಧೀಮಾದರಿಯೇ ಸರಿ! ಈ ಪ್ರಯತ್ನದಿಂದಾಗಿ 'ಶಿವಕಾಶಿ'ಯ ಪಟಾಕಿ ಉದ್ಯಮ ನಿಲ್ಲುವ ಹಂತಕ್ಕೆ ಬಂದುದ್ದಲ್ಲದೇ, ಎಷ್ಟೋ ಪಟಾಕಿ ಕಾರ್ಖಾನೆಗಳು ಮಕ್ಕಳ ದುಡಿತವಿಲ್ಲದೇ ನಿಂತುಹೋದವು.

ಮಕ್ಕಳ ಪ್ರಾಥಮಿಕ ಹಂತದಲ್ಲಿ ಉಚಿತ ಶಿಕ್ಷಣ ಜಾರಿಯಾಗಬೇಕೆಂದು ಪಣತೊಟ್ಟು, ರಾಜ್ಯಾದ್ಯಂತ, ರಾಷ್ಟ್ರಾದ್ಯಂತ ಸಾರ್ವಜನಿಕ ಹಿತಾಸಕ್ತಿ ಸಭೆಗಳನ್ನು ನಡೆಸಿ, ಮಕ್ಕಳ ಪ್ರಾಥಮಿಕ ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಿರಬೇಕೆಂದುಕೊಂಡು ಒಂಬತ್ತು ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿಯ ಹೈಕೋರ್ಟ್‌ನಲ್ಲಿ ಹಾಕಿ, ಆ ಮೂಲಕ ಮಕ್ಕಳ ಶಿಕ್ಷಣದ ಬದುಕಿಗೆ ಕುಟುಂಬ, ಸಮಾಜ ಮತ್ತು ಸರ್ಕಾರಗಳು ಸಹ ಸ್ಪಂದಿಸಬೇಕೆಂದು ಹೋರಾಡಿದರು. ಈ ಹೋರಾಟದ ಫಲವೇ "2010ರ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ"!!! ಇದು ಜಾರಿಯಾದುದ್ದನ್ನು ಯಾವೊಂದು ತಿರಸ್ಕರಿಸಲ್ಪಟ್ಟ ಮಗುವು ಭವಿಷ್ಯದಲ್ಲಿ ನೆನಪು ಮಾಡಿಕೊಳ್ಳದೇ ಇರಲಾರದು...

ಕೈಲಾಸ್ ತಂತ್ರಗಾರಿಕೆ

ಮಕ್ಕಳು ಶತಾಯಗತಾಯ ಕೆಲಸ ಮಾಡಲೇಬಾರದು, ಅವರನ್ನು ಸಮಾಜದ ಕ್ರೂರಬಾಹುಗಳಿಂದ ಸಂರಕ್ಷಿಸಲೇಬೇಕು ಎನ್ನುವ ಮತ್ತೊಂದು ಸಾತ್ವಿಕ ವಿಚಾರಕ್ಕೆ ಎಡೆಮಾಡಿ ಕೊಟ್ಟವರು ಕೈಲಾಶ್! ಮಾಧ್ಯಮಗಳನ್ನೊಳಗೊಂಡಂತೆ ಸಂಘ ಸಂಸ್ಥೆಗಳನ್ನು ಗುಂಪುಗಳನ್ನಾಗಿ ಮಾಡಿ, ಮಕ್ಕಳನ್ನು ಕ್ರೂರವಾಗಿ ದುಡಿಸುವ ಕಾರ್ಖಾನೆಗಳು, ಗ್ಯಾರೇಜ್‌ಗಳು, ಬಲವಂತದ ಜೀತ, ಇತ್ಯಾದಿಗಳ ವಿರುದ್ಧ ಧ್ವನಿ, ಪ್ರತಿಭಟನೆಗಳನ್ನು ಶೋಷಿತ ಜಾಗದಿಂದಲೇ ಮೊಳಗಿಸತೊಡಗಿದರು. ಅದಲ್ಲದೇ ರಕ್ಷಿಸಿದ ಮಕ್ಕಳಿಗೆ ಶಿಕ್ಷಣ ಹಾಗೂ ಅವರ ಬುದ್ಧಿಮತ್ತೆಗೆ ಪೂರಕವಾದಂತಹ ಕೌಶಲ್ಯ, ತರಬೇತಿ, ಆರೋಗ್ಯ ಹಾಗೂ ಸಾಮಾಜಿಕ ಸ್ಥಾನವನ್ನು ಒದಗಿಸುವ ಪ್ರಯತ್ನವನ್ನು ಸಹ ಮಾಡತೊಡಗಿದರು. 1991ರ ಅಂತರಾಷ್ಟ್ರೀಯ ಯುಎನ್ ಒಪ್ಪಂದದ ಪ್ರಕಾರ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸದ ಕಾರ್ಪೋರೇಟ್ ವಲಯಗಳು

ಹಕ್ಕು ಅದನ್ನು ಮೊಟಕುಗೊಳಿಸಲು ನೀವ್ಯಾರು? ಯಾವ ದೇವರು ನಾನು ಶಾಲೆಗೆ ಹೋಗದಂತೆ ಮಾಡಿದ ಆದೇಶಕ್ಕೆ ಸಹಿ ಹಾಕಿದವರು" ಎಂದು ತಾಲಿಬಾನಿಗಳ ವಿಕೃತಕ್ಕೆ ಸಿಡಿದೆದ್ದ ಹಾಲುಗೆನ್ನೆಯ ಬಾಲಕಿ ಯೂಸೂಫ್ ಮಲಾಲ ಸ್ಥಳೀಯ ಪೇಶುವಾರ ನಗರದ ಪತ್ರಿಕಾಗೋಷ್ಠಿಯಲ್ಲಿ ಆಡಿದ ಈ ಮಾತುಗಳು ಇಂದು ಆಕೆಯನ್ನು ಇಷ್ಟು ಎತ್ತರಕ್ಕೆ ತಂದು ನಿಲ್ಲಿಸಿವೆ. ಯಕಶ್ಚಿತ್ ಹೆಣ್ಣುಮಗಳೊಬ್ಬಳು ನಮ್ಮ ಗುರಿಗಳಿಗೆ ಅಡ್ಡಿಯಾಗಲಾರಳು, ಏಕೆಂದರೆ ನಮ್ಮ ಗುಂಡುಗಳು ಅವಳನ್ನು ಮುಚ್ಚಿಹಾಕಿಬಿಡುತ್ತವೆ ಎಂದು ತಾಲಿಬಾನ್ ಉಗ್ರರು ಅಂದುಕೊಂಡಿದ್ದರು. ಆದರೆ ಆ ರೀತಿಯಾಗಲಿಲ್ಲ ಮತ್ತು ಏನೂ ಬದಲಾಗಲಿಲ್ಲ, ಭಯ, ದೌರ್ಬಲ್ಯ ಅಸಹಾಯಕತೆ ಸತ್ತುಹೋಗಿ, ಅವುಗಳ ಜಾಗದಲ್ಲಿ ಹೊಸ ಬಲ, ಶಕ್ತಿ ಧೈರ್ಯ ಹುಟ್ಟಿವೆ ಎಂದು ಮಲಾಲ ಕಳೆದ ವರ್ಷ ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡಿದಾಗ ಇಡೀ ಜಗತ್ತೇ ಅವಳ ಪರವಾಗಿ ನಿಂತಿದ್ದಲ್ಲದೇ, ಮನೆಯ ಹೆಣ್ಣುಮಗಳೊಬ್ಬಳು ಬೆಳೆದ ಎತ್ತರವನ್ನು ನೆನೆ ನೆನೆದು ಹರ್ಷಪಟ್ಟಿದ್ದಾರೆ. ಈ ಎತ್ತರವು ಸಾಮಾನ್ಯವಾದುದ್ದಲ್ಲ, 2012 ಅಕ್ಟೋಬರ್ 9ರಂದು ನಾನು ಶಾಲೆಗೆ ಹೋಗಲೇಬೇಕು, ಪರೀಕ್ಷೆ ಬರೆಯಲೇಬೇಕೆಂದುಕೊಂಡು, ಶಾಲೆಗೆ ಹೋಗಿ ಹಿಂತಿರುಗುವಾಗ ಅದೇ ಬಸ್ಸಿನಲ್ಲಿ ಅಡಗಿದ್ದ ಬಂಧೂಕುದಾರಿ ಉಗ್ರ ಗುಂಡಿನ ದಾಳಿ ನಡೆಸಿದ. ಈ ಅಮಾನವೀಯ ಘಟನೆಗೆ ಇಡೀ ಜಗತ್ತೇ ಬೆಚ್ಚಿಬಿದ್ದಿತ್ತು ಮತ್ತು ಪಾಕಿಸ್ತಾನದ ಬಗ್ಗೆ ತಿರಸ್ಕಾರದ ನೋಟವನ್ನು ಹೆಚ್ಚಿಸಿ ಬೀರತೊಡಗಿತ್ತು, ಈ ಘಟನೆಯನ್ನು ಪಾಕಿಸ್ತಾನದ ಮಾನವಂತ ಪ್ರಜೆಗಳು ಕೂಡ ಖಂಡಿಸಿದರು. ಪರಿಣಾಮವಾಗಿ ಪಾಕಿಸ್ತಾನದಲ್ಲಿ ಹೆಣ್ಣುಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾನೂನು ಜಾರಿಯಾಯಿತು. ಈ ದಾಳಿಯಿಂದ ಸಾವು-ಬದುಕಿನ ಹೋರಾಟದಲ್ಲಿದ್ದ ಮಲಾಲಳನ್ನು ತಕ್ಷಣ

►► 15

ಕುರುಕ್ಷೇತ್ರ ಯುದ್ಧ ಆಗಿದ್ದು ನಿಜವೇ?!



ಇತ್ತೀಚೆಗೆ ನಾನು ಒಂದು ಕನ್ನಡ ಶಬ್ದಕ್ಕಾಗಿ ಕನ್ನಡ ರತ್ನಕೋಶವನ್ನು ತಿರುವಿ ಹಾಕುತ್ತಿದ್ದಾಗ ಅದರಲ್ಲಿ ಅಕ್ಷೋಹಿಣಿ (ಅಕ್ಷೌಹಿಣಿ) ಎಂಬ ಶಬ್ದದ ವಿವರ ಸಿಕ್ಕಿತು. ಕುರುಕ್ಷೇತ್ರ ಯುದ್ಧದ ಸೈನ್ಯದ ಲೆಕ್ಕಾಚಾರಕ್ಕಾಗಿ ಈ ಶಬ್ದ ಉಪಯೋಗಿಸಲಾಗಿದೆ. ಇದು ಕೇವಲ ಒಂದು ಅಂಕೆಯಲ್ಲ, ಒಂದು ಅಕ್ಷೋಹಿಣಿಯಲ್ಲಿ ನಿರ್ದಿಷ್ಟ ಸಂಖ್ಯೆಯಲ್ಲಿ ಆನೆದಳ/ ರಥದಳ/ ಕುದುರೆದಳ/ ಕಾಲ್ದಳ ಈ ನಾಲ್ಕೂ ದಳಗಳು ಇದ್ದರೇನೇ ಅದು ಅಕ್ಷೋಹಿಣಿ ಎಂದು ಕರೆಸಿಕೊಳ್ಳುತ್ತದೆ. ಒಂದು ಅಕ್ಷೋಹಿಣಿ ಎಂದರೆ ಒಟ್ಟು 2,18,700 ಹಾಗೂ ಅದರಲ್ಲಿ ಶೇ.10 (21,870) ಆನೆದಳ, ಶೇ.10 (21,870) ರಥದಳ, ಶೇ.30 (65,610) ಅಶ್ವದಳ ಹಾಗೂ ಉಳಿದ ಶೇ.50 (1,09,350) ಕಾಲ್ದಳ ಇದ್ದರೆ ಮಾತ್ರ ಅದು ಅಕ್ಷೋಹಿಣಿ ಎನಿಸಿಕೊಳ್ಳುತ್ತದೆ.

ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ಹನ್ನೊಂದು ಅಕ್ಷೋಹಿಣಿ ಮತ್ತು ಪಾಂಡವರ ಏಳು ಅಕ್ಷೋಹಿಣಿ, ಹೀಗೆ ಒಟ್ಟು ಹದಿನೆಂಟು ಅಕ್ಷೋಹಿಣಿ ಸೈನ್ಯ ಪಾಲ್ಗೊಂಡಿತ್ತು. ಹದಿನೆಂಟು ಅಕ್ಷೋಹಿಣಿ ಎಂದರೆ ಮುವ್ವತ್ತೊಂಬತ್ತು ಲಕ್ಷ ಮುವ್ವತ್ತಾರು ಸಾವಿರದ ಆರುನೂರು (2,18,700 ಘ 18 = 39,36,600). ಇದನ್ನು ನಮ್ಮ ಸರಳ ಲೆಕ್ಕಾಚಾರಕ್ಕೆ ನಾಲ್ವತ್ತು ಲಕ್ಷ ಎಂದು ರೌಂಡ್-ಅಪ್ ಮಾಡಿಕೊಳ್ಳಬಹುದು.

ಕುರುಕ್ಷೇತ್ರ ಯುದ್ಧ ಭೂಮಿಯಲ್ಲಿ ಮನುಷ್ಯರು ಮತ್ತು ಪ್ರಾಣಿಗಳ ಸಂಖ್ಯೆಯೆಷ್ಟು?

ಮೇಲೆ ಹೇಳಿದ ನಾಲ್ವತ್ತು ಲಕ್ಷದಲ್ಲಿ 10% ಎಂದರೆ ನಾಲ್ಕು ಲಕ್ಷ ಆನೆದಳ ಹಾಗೂ ನಾಲ್ಕು ಲಕ್ಷ ರಥದಳ ಆಗುತ್ತವೆ. 30% ಕುದುರೆದಳ ಎಂದರೆ ಹನ್ನೆರಡು ಲಕ್ಷ ಕುದುರೆ ಆಗುತ್ತವೆ. ಇನ್ನುಳಿದ 50% ಪೈದಲ್ ಸೈನಿಕರು ಎಂದರೆ ಇಪ್ಪತ್ತು ಲಕ್ಷ ಕಾಲ್ದಳ ಸೈನಿಕರು. ಇದರ ಲೆಕ್ಕಾಚಾರ ಇಲ್ಲಿಗೇ ಮುಗಿಯುವುದಿಲ್ಲ, ನಾಲ್ಕು ಲಕ್ಷ ಆನೆಗಳಿಗೆ ನಾಲ್ಕು ಲಕ್ಷ ಮಾವುತರಲ್ಲದೇ ಒಂದೊಂದು ಆನೆಯ ಮೇಲಿನ ಅಂಬಾರಿಯಲ್ಲಿ ಇಬ್ಬರು ಅಥವಾ ಮೂರು ಜನ ಯೋಧರಿರುತ್ತಿದ್ದರು. ಅಂದರೆ ಒಂದು ಆನೆಗೆ ಕನಿಷ್ಠ ಮೂರು ಜನ ಮನುಷ್ಯರು ಅರ್ಥಾತ್ ಒಟ್ಟು ಆನೆ ದಳದಲ್ಲಿ 12 ಲಕ್ಷ ಮನುಷ್ಯರು ಇದ್ದರು. ಅದರಂತೆ ರಥದಲ್ಲಿ ಒಬ್ಬ ಸಾರಥಿ ಮತ್ತು ಕನಿಷ್ಠ ಒಬ್ಬ ಯೋಧ ಅಂದರೆ ಒಂದು ರಥಕ್ಕೆ ಇಬ್ಬರಂತೆ ನಾಲ್ಕು ಲಕ್ಷ ರಥದ ಮೇಲೆ ಎಂಟು ಲಕ್ಷ ಮನುಷ್ಯರು. ಇನ್ನು ಅಶ್ವದಳದಲ್ಲಿ ಒಂದು ಕುದುರೆಗೆ ಒಬ್ಬ ಯೋಧನಂತೆ ಹನ್ನೆರಡು ಲಕ್ಷ ಕುದುರೆಗೆ ಹನ್ನೆರಡು ಲಕ್ಷ ಯೋಧರು. ಕೊನೆಗೆ ನಾಲ್ವತ್ತು ಲಕ್ಷದಲ್ಲಿ ಅರ್ಧದಷ್ಟು ಸೈನಿಕರು ಅಂದರೆ ಒಟ್ಟು ಇಪ್ಪತ್ತು ಲಕ್ಷ ಕಾಲ್ದಳ ಯೋಧರು. ಹೀಗೆ ಯೋಧ-ಮಾವುತ-ಸಾರಥಿಗಳನ್ನು ಒಟ್ಟುಗೂಡಿಸಿದರೆ ಒಟ್ಟು ಐವತ್ತೆರಡು ಲಕ್ಷ ಜನರು ಯುದ್ಧದಲ್ಲಿ ನೇರವಾಗಿ ಪಾಲ್ಗೊಂಡಿದ್ದರು.

ಇನ್ನು ಪ್ರಾಣಿಗಳ ಲೆಕ್ಕ ನೋಡಿದರೆ ಒಂದು ರಥಕ್ಕೆ ಎರಡು ಕುದುರೆ ಅಂದರೆ ರಥದಳದಲ್ಲಿ ಎಂಟು ಲಕ್ಷ ಕುದುರೆ. ಜತೆಗೆ ಅಶ್ವದಳದಲ್ಲಿ 12 ಲಕ್ಷ ಕುದುರೆ. ಹೀಗೆ ಒಟ್ಟು ಇಪ್ಪತ್ತು ಲಕ್ಷ ಕುದುರೆ ಮತ್ತು ನಾಲ್ಕು ಲಕ್ಷ ಆನೆ, ಈ ರೀತಿ ಇಪ್ಪತ್ನಾಲ್ಕು ಲಕ್ಷ ಪ್ರಾಣಿಗಳು ನೇರ ಯುದ್ಧಭೂಮಿಯಲ್ಲಿ ಇದ್ದವು.

ಆಹಾರ ಔಷಧ ಸ್ವಚ್ಛತೆಯ ಪ್ರಮಾಣ

ಒಂದು ತಿಂಗಳು ಯುದ್ಧದ ಪೂರ್ವ ತಯಾರಿ ಮತ್ತು ಹದಿನೆಂಟು ದಿನ ಯುದ್ಧ ಹೀಗೆ ಒಟ್ಟು ಒಂದೂವರೆ ತಿಂಗಳಿಗೂ ಹೆಚ್ಚು ನಡೆದ ಇಂತಹ ದೊಡ್ಡ ಯುದ್ಧವನ್ನು ಯಾರೂ ಖಾಲಿ ಹೊಟ್ಟೆಯಲ್ಲಿ ಮಾಡುವುದಿಲ್ಲ, ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಪ್ರತಿದಿನ ನೀರು ಆಹಾರ ನಿದ್ದೆ ಬೇಕೇ ಬೇಕು. ಇದಕ್ಕಾಗಿ ಉಪ-ಸೈನಿಕರು ಅರ್ಥಾತ್ ಸಹಾಯಕ-ಸೈನಿಕರು ಬೇಕಾಗುತ್ತಾರೆ. ಈಗಿನ ಮಿಲಿಟರಿ ಪರಿಭಾಷೆಯಲ್ಲಿ ಇವರಿಗೆ ಸಪ್ಲೈ-ಕೋರ್ (Supply Corps) ಎಂದು ಕರೆಯಲಾಗುತ್ತದೆ. ಈ ಸಪ್ಲೈ-ಕೋರ್‌ನಲ್ಲಿ ಮುಂಚೂಣಿಯ ಯೋಧರಿಗೆ ಆಹಾರ-ನೀರು ಪೂರೈಸುವವರು, ಮುರಿದ ಸಶಸ್ತ್ರಗಳ ಬದಲಿಗೆ ಹೊಸ ಸಶಸ್ತ್ರ ಗಾಯಾಳುಗಳಿಗೆ ಔಷಧ ಬ್ಯಾಂಡೇಜ್, ಪ್ರಾಣಿಗಳಿಗೆ ಹುಲ್ಲು ಆಹಾರ ನೀರು, ಗಾಯವಾದ ಪ್ರಾಣಿಗಳಿಗೆ ಔಷಧ ಬ್ಯಾಂಡೇಜ್, ಸತ್ತ ಯೋಧರ ಮತ್ತು ಪ್ರಾಣಿಗಳ ಶವಸಂಸ್ಕಾರ, ಇವೆಲ್ಲಾ ಮಾಡಲು ಇಪ್ಪತ್ತೈದು ಲಕ್ಷಕ್ಕೂ ಮಿಕ್ಕಿ ಸಹಾಯಕ ಸೈನಿಕರು ಬೇಕೇ ಬೇಕು. ಈ ರೀತಿ ಒಟ್ಟು 80 ಲಕ್ಷ ಮನುಷ್ಯರಿಗೆ ಹಾಗೂ ಇಪ್ಪತ್ನಾಲ್ಕು ಲಕ್ಷ ಪ್ರಾಣಿಗಳಿಗೆ 45-50 ದಿನಗಳ ಕಾಲ ಬೇಕಾಗುವ ಆಹಾರ ನೀರು ಎಣ್ಣೆ ಔಷಧ ಬಟ್ಟೆ ಸೋಮರಸ ತಂಬಾಕು, ಅಡುಗೆಗೆ ದೊಡ್ಡ ದೊಡ್ಡ ಹಿತ್ತಾಳೆ ಅಥವಾ ತಾಮ್ರದ ಪಾತ್ರೆಗಳು (ಆಗ ಅಲ್ಯೂಮಿನಿಯಂ/ ಸ್ಟೀಲ್ ಇರಲಿಲ್ಲ), ಜತೆಗೆ ಸೌದೆ ಕಟ್ಟಿಗೆ, ಪ್ರಾಣಿಗಳಿಗೆ ಹುಲ್ಲು ಹುರುಳಿ ಕಬ್ಬು ಇತ್ಯಾದಿ, ಇವನ್ನೆಲ್ಲ ಲಕ್ಷಾಂತರ ಟನ್ನು ಪ್ರಮಾಣದಲ್ಲಿ ದೂರದ ಊರುಗಳಿಂದ ಸಂಗ್ರಹಿಸಿ ಯುದ್ಧ ಭೂಮಿಗೆ ಸಾಗಿಸಲು ಲಕ್ಷಾಂತರ ಸಂಖ್ಯೆಯಲ್ಲಿ ಎತ್ತಿನಗಾಡಿ ಅಥವಾ ಕುದುರೆ ಗಾಡಿ ಬೇಕಾಗುತ್ತವೆ. ಒಂದೂವರೆ ತಿಂಗಳಕಾಲ ನಾಲ್ಕು ಲಕ್ಷ ಆನೆ ಇಪ್ಪತ್ತು ಲಕ್ಷ ಕುದುರೆಗಳಿಗೆ ಬೇಕಾಗುವ ಬೃಹತ್ ಪ್ರಮಾಣದ ಆಹಾರ ನೀರು ಎಷ್ಟೆಂದು ಊಹಿಸಿ. ಇವನ್ನೆಲ್ಲ ಸ್ಟಾಕ್ ಮಾಡಿ ಇಡಲು ಬೃಹತ್ ಗೋಡೌನ್‌ಗಳು ಬೇಕು. ಈ ಗೋಡೌನ್ ಕಟ್ಟಲು ಮತ್ತು ನೋಡಿಕೊಳ್ಳಲು ನುರಿತ ಜನರು ಬೇಕು. ಅಡುಗೆ ಮಾಡಲು ಬಾಣಸಿಗರು, ಗಾಯಾಳುಗಳಿಗೆ ವೈದ್ಯರು, ಪ್ರಾಣಿಗಳಿಗಾಗಿ ವೆಟರ್ನರಿಗಳು ಬೇಕು. ಮುರಿದ ಸಶಸ್ತ್ರ ರಥಗಳನ್ನು ರಿಪೇರಿ ಮಾಡಲು ಕಮ್ಮಾರ-ಬಡಗಿಗಳು ಬೇಕು.

ಸೂರ್ಯ ಮುಳುಗಿದ ತಕ್ಷಣ ಯುದ್ಧ ನಿಲ್ಲುತ್ತಿತ್ತು. ಮರುದಿನ ಸೂರ್ಯ ಮೂಡುವವರೆಗೆ ಸೈನಿಕರಿಗೆ ಮತ್ತು ಪ್ರಾಣಿಗಳಿಗೆ ವಿಶ್ರಾಂತಿ ಸ್ಥಳ ಬೇಕು. ಲಕ್ಷಾಂತರ ಟೆಂಟು ಚಪ್ಪರಗಳು ಬೇಕು. ರಾತ್ರಿ ಕಾಲದ ಬೆಳಕಿಗಾಗಿ ಲಕ್ಷಾಂತರ ದೀವಟಿಗೆಗಳು ಬೇಕು. ದೀವಟಿಗಳಿಗೆ ಬಟ್ಟೆ ಸುತ್ತಿ ರಾತ್ರಿ ಯಿಡೀ ಎಣ್ಣೆ ಹಾಕುತ್ತಾ ಎಲ್ಲೆಡೆ ತಿರುಗಾಡಲು ಜನ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಪ್ರಕೃತಿಯ ಕರೆಗೆ ಸರಿಯಾದ ಜಾಗ ಬೇಕು. 24 ಲಕ್ಷ ಪ್ರಾಣಿಗಳು ಇಕ್ಕುವ ಟನ್ನುಗಟ್ಟಲೆ ಲದ್ದಿಗಳನ್ನು ದಿನಾಲೂ ಇತರೆಡೆ ಸಾಗಿಸಲು ಕೂಲಿಗಳು ಮತ್ತು ಎತ್ತಿನ ಗಾಡಿಗಳು ಬೇಕು, ಕಾರಣ ಅದುವೇ ಒಂದು ದೊಡ್ಡ ಪರ್ವತವಾಗಿ ಅದರಲ್ಲಿ ಹುಳುಗಳಾಗಿ ರೋಗರುಜಿನ ಹರಡುತ್ತವೆ. ಲದ್ದಿ-ಸೆಗಣಿಯಿಂದ ಹುಟ್ಟುವ ಗೋಬರ್-ಗ್ಯಾಸ್ ಭಾರಿ ಅನಾರೋಗ್ಯಕರ ಮತ್ತು ಅತಿ ಜ್ವಲನಶೀಲ.

ಶವಸಂಸ್ಕಾರ

ಪುರಾಣಗಳಲ್ಲಿ ಹೇಳುವ ಪ್ರಕಾರ ಈ ಯುದ್ಧದಲ್ಲಿ ಕೇವಲ ಹನ್ನೆರಡು ಜನರನ್ನು ಹೊರತುಪಡಿಸಿ ಉಳಿದ ಎಲ್ಲಾ ಐವತ್ತೆರಡು ಲಕ್ಷ ಯೋಧರು ಮತ್ತು ಬಹಳಷ್ಟು ಸಹಾಯಕರೂ ಸತ್ತರಂತೆ. ಪಾಂಡವರ ಕಡೆಯಲ್ಲಿ ಎಂಟು ಜನ- ಅಂದರೆ ಐವರು ಪಾಂಡವರು ಕೃಷ್ಣ ಸಾತ್ಯಕಿ ಯುಯುತ್ಸು ಹಾಗೂ ಕೌರವರಲ್ಲಿ ನಾಲ್ಕು ಜನ- ಅಂದರೆ ಕೃಪಾ, ಕೃತವರ್ಮ, ವೃಷಕೇತು ಮತ್ತು ಅಶ್ವತ್ಥಾಮ ಮಾತ್ರ ಬದುಕುಳಿದಿದ್ದು. ಸತ್ತ ಲಕ್ಷಾಂತರ ಜನರನ್ನು ಸುಡಲು ಅಥವಾ ಹೂಳಲು ಕೊನೆಗೆ ಜನರೇ ಉಳಿದಿರಲಿಲ್ಲವಲ್ಲ,

ಹಾಗಾದರೆ ಹಾಗೆಯೇ ಕೊಳೆಯಲು ಬಿಟ್ಟ ಮನುಷ್ಯರ ಮತ್ತು ಪ್ರಾಣಿಗಳ ಕಳೇಬರಗಳಿಂದ ಉಂಟಾದ ಸಾಂಕ್ರಾಮಿಕ ರೋಗ ಯಾವ ಮಟ್ಟದಿರಬಹುದು? ನಾಯಿ- ಹದ್ದುಗಳು ಅರ್ಧ ತಿಂದು ಬಿಟ್ಟ ಕೊಳೆತ ಶವಗಳಿಂದ ಹೊರಡುವ ದುರ್ವಾಸನೆ ಮತ್ತು ಹುಳಗಳನ್ನು ಯಾರಿಂದ ತಡೆಯಲು ಸಾಧ್ಯ? ಸೊಳ್ಳೆ ಇಲಿ ನಾಯಿ ಹದ್ದು ಕಾಗೆಗಳ ಕಾಟ ಬೇರೆ. ದೇಹ ಮಣ್ಣಾದರೂ ಎಲುಬು ಮಣ್ಣಾಗುವುದಿಲ್ಲ, ಹಾಗೂ ಈ ಎಲುಬು ಲಕ್ಷಾಂತರ ವರ್ಷ ಉಳಿಯುತ್ತವೆ. ಕೇವಲ ಮೂರು ಸಾವಿರ ವರ್ಷಗಳ ಹಿಂದೆ ಸತ್ತ ನಾಲ್ಕು ಲಕ್ಷ ಆನೆಗಳ ಭಾರಿ ಗಾತ್ರದ ಎಲುಬು ಮತ್ತು ದಂತದ ಪರ್ವತ ಈಗಲೂ ಇರಬೇಕಿತ್ತಲ್ಲವೇ? 52 ಲಕ್ಷ ಯೋಧರ ಮತ್ತು 24 ಲಕ್ಷ ಕುದುರೆಗಳ ಕೋಟ್ಯಾಂತರ ಟನ್ನು ಎಲುಬು ಏನಾಯಿತು? 25-30 ಲಕ್ಷ ಸಹಾಯಕ ಸೈನಿಕರು ಏನಾದರು? ಲಕ್ಷಾಂತರ ಸಂಖ್ಯೆಯಲ್ಲಿ ಸತ್ತ ಯೋಧರ ಹೆಂಡತಿ ಮಕ್ಕಳ ಗತಿ ಏನಾಯಿತು? ಸತ್ತ ಲಕ್ಷಾಂತರ ಯೋಧರಿಗೆ ತಮ್ಮ ತಮ್ಮ ಮಕ್ಕಳಿಂದ ವಿಧಿವತ್ತಾಗಿ ಉತ್ತರಕ್ರಿಯೆ-ಶ್ರಾದ್ಧ ಆಗದೇ ಅವರೆಲ್ಲ ಅಂತರ ಪಿಶಾಚಿಗಳಾಗಿರಬಹುದೇ?

ದಿನಕ್ಕೆ ಮೂರು ಲಕ್ಷ ಸೈನಿಕರು ಮತ್ತು ಒಂದು ಲಕ್ಷ ಪ್ರಾಣಿಗಳು ಕುರುಕ್ಷೇತ್ರ ಯುದ್ಧದಲ್ಲಿ ಸಾಯುತ್ತವೆ ಎಂದು ಇಟ್ಟುಕೊಂಡರೂ ಅವರ ಶವಗಳನ್ನು ಸುಡಲು ಅಥವಾ ಹೂಳಲು ಬೇಕಾಗುವ ಸ್ಥಳ, ಕಟ್ಟಿಗೆ, ಹಾರೆ- ಪಿಕಾಸುಗಳೊಂದಿಗೆ ನುರಿತ ಕೆಲಸಗಾರರು ಬೇಕು. ದಿನಕ್ಕೆ ನಾಲ್ಕು ಲಕ್ಷ ಶವಗಳನ್ನು ಕುರುಕ್ಷೇತ್ರ ಎಂಬ ಸಣ್ಣ ಊರಲ್ಲಿ ಸುಡಲು ಅಥವಾ ಹೂಳಲು ಸಾಧ್ಯವಿತ್ತೇ? ದಿನವೊಂದಕ್ಕೆ ಯುದ್ಧದಲ್ಲಿ ಸಾಯುತ್ತಿದ್ದ ಇಪ್ಪತ್ತು ಸಾವಿರ ಆನೆಗಳ ಭಾರಿ ಕಳೇಬರವನ್ನು ಹೇಗೆ ದೂರ ಸಾಗಿಸಿ ಹೂಳುತ್ತಿದ್ದರು? ಆಗ ಕ್ರೇನ್, ದೊಡ್ಡ ಟ್ರಕ್ಕು ಮತ್ತು ಮಣ್ಣು ಅಗೆಯುವ ಜೆಸಿಬಿ ಯಂತ್ರಗಳು ಇರಲಿಲ್ಲವಲ್ಲ, ಕೇವಲ ಇಪ್ಪತ್ನಾಲ್ಕು ಗಂಟೆಯಲ್ಲಿ ಕೊಳೆಯಲು ಶುರುವಾಗುವ ಶವಗಳಿಂದ ಹರಡುವ ಸಾಂಕ್ರಾಮಿಕ ರೋಗ, ಆಗುವ ವಾಯು ಮಾಲಿನ್ಯ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಪ್ರತಿದಿನ ಕನಿಷ್ಠ ಒಂದು ಲಕ್ಷ ಸೈನಿಕರು ಕೈಕಾಲು ತುಂಡಾಗಿ ಗಾಯಗೊಂಡು ರಣಾಂಗಣದಲ್ಲಿ ಬಿದ್ದುಕೊಂಡು ಆರ್ತನಾದ ಮಾಡುತ್ತಿದ್ದಿರ ಬಹುದು. ಅವರನ್ನು ಹಾಗೇ ಸಾಯಲು ಬಿಡುತ್ತಿದ್ದರೆ? ಅವರನ್ನು ಬೇರೆಡೆ ಸಾಗಿಸಿ ಶುಶ್ರೂಷೆ ಮಾಡಲು ಎಷ್ಟು ಬೃಹತ್ತಾದ ವೈದ್ಯಕೀಯ ವ್ಯವಸ್ಥೆ ಬೇಕು? ಕಾರಣ 4-5 ದಿನಗಳ ಯುದ್ಧದ ನಂತರ ಗಾಯಗೊಂಡು ನಂಜಾಗಿರುವ 4-5 ಲಕ್ಷ ಯೋಧರನ್ನು ಆರೈಕೆ ಮಾಡುವಂತಹ ವೈದ್ಯಕೀಯ ವ್ಯವಸ್ಥೆ ಎಷ್ಟು ದೊಡ್ಡದಿರಬೇಕು ಊಹಿಸಿ. (ಮಿಲಿಟರಿಯಲ್ಲಿದ್ದ ನನ್ನ ಭಾವ ಮದ್ರಾಸ್ ರೆಜಿಮೇಂಟಿನಲ್ಲಿ ಲ್ಯಾಂಸ್-ನಾಯಕ್ ಆಗಿದ್ದರು ಹಾಗೂ ಅವರು 1962 ರ ಚೀನಾ ಯುದ್ಧದಲ್ಲಿ ನೇರವಾಗಿ ಭಾಗವಹಿಸಿ ಗಾಯ ಗೊಂಡಿದ್ದರು).

ಪ್ರಕೃತಿ ಕರೆ

ಎಲ್ಲಕ್ಕಿಂತ ತಮಾಷೆಯ ದೃಶ್ಯವೆಂದರೆ 80 ಲಕ್ಷ ಜನರು ಬೆಳಗೆದ್ದು ಪ್ರಕೃತಿ ಕರೆಗೆ ಹೋಗುವುದು! ಈಗಿನ ಕಾಲದಲ್ಲಿ ಯುದ್ಧ ಭೂಮಿಯೆಂದರೆ ನೂರಾರು ಮೈಲಿ ಹರಡಿರುತ್ತದೆ. ಆದರೆ ಆಗಿನ ಕುರುಕ್ಷೇತ್ರ ಯುದ್ಧ ಧರ್ಮಯುದ್ಧವಾಗಿತ್ತು, ಅಂದರೆ ಇಬ್ಬಿಬ್ಬರೇ ಕೈ ಕೈ ಮಿಲಾಯಿಸಿ ಎದುರು-ಬದುರಾಗಿ ಹೋರಾಡುವ ಯುದ್ಧ. ಇದು ನಡೆದಿದ್ದು ಕೇವಲ ಹತ್ತು ಕಿಲೋಮೀಟರ್ ಉದ್ದಗಲದ ಒಂದು ಮೈದಾನದಲ್ಲಿ, ಅಂದರೆ ಈಗಿನ ಬೆಂಗಳೂರಿನ ಕಾಲುಭಾಗದಷ್ಟು ಸ್ಥಳದಲ್ಲಿ. ಬೆಂಗಳೂರಿನ ಈಗಿನ ಜನಸಂಖ್ಯೆಯೆಲ್ಲಾ (80 ಲಕ್ಷ ಜನರು) ಬೆಳ-ಬೆಳಗ್ಗೆ ಒಂದೇ ಬಯಲಲ್ಲಿ ಒಟ್ಟಿಗೆ ಕಕ್ಕಸಿಗೆ ಹೋಗಬೇಕಾಗಿ ಬಂದಾಗ ಪರಿಸ್ಥಿತಿ ಹೇಗೆ ಕಾಣಬಹುದು ಎಂದು ಯೋಚಿಸಿದಾಗ ನಗು ಬರುವುದಿಲ್ಲವೇ? ಇಡೀ ಕುರುಕ್ಷೇತ್ರ ಹೊಲಸಿನಿಂದ ಗಬ್ಬೆದ್ದಿತ್ತೇ?

ಯುದ್ಧ ನಡೆದಿದ್ದು ಹದಿನೆಂಟು ದಿನ, ಆದರೆ ಅದಕ್ಕಿಂತ ಒಂದು ತಿಂಗಳು ಮೊದಲಿನಿಂದಲೇ ಯುದ್ಧದ ತಯಾರಿಗಾಗಿ ಎಲ್ಲರೂ ಕುರುಕ್ಷೇತ್ರದಲ್ಲಿ ನೆರೆದಿದ್ದರು. ಅಂದರೆ ಸುಮಾರು ಒಂದೂವರೆ ತಿಂಗಳು ಇವರ ಸ್ನಾನಕ್ಕೆ ಬೇಕಾಗುವ ನೀರೆಷ್ಟು? ಸೈನಿಕರು ಪ್ರಕೃತಿ ಕರೆ ಪೂರೈಸಿದ ಹೊಲಸು ಮೈದಾನದಲ್ಲಿಯೇ ನಂತರ ಯುದ್ಧ ಮಾಡಬೇಕಾದ ಪರಿಸ್ಥಿತಿಯಿತ್ತೇ? ಆಗ ಕುರುಕ್ಷೇತ್ರದಲ್ಲಿ ಐದು ಸಣ್ಣ ಕೆರೆಗಳು ಇದ್ದವಂತೆ. ಅವು ಪ್ರಾಣಿಗಳ ಮತ್ತು ಯೋಧರ ರಕ್ತದಿಂದ ತುಂಬಿದ್ದವಂತೆ! ಶುದ್ಧ ನೀರು ಎಲ್ಲಿಯೂ ಇರಲಿಲ್ಲ,

ಯುದ್ಧ ಭೂಮಿಯಲ್ಲಿ ಪ್ರಾಣಿಗಳ ವರ್ತನೆ

ಆನೆಯನ್ನು ಹಿಂದಿನ ಕಾಲದಲ್ಲಿ ಕೇವಲ ಭಾರತದಲ್ಲಿ ಮಾತ್ರ ಯುದ್ಧಕ್ಕೆ ಉಪಯೋಗಿಸಲಾಗುತಿತ್ತು, ಆದರೆ ಆನೆಗಳನ್ನು ಯುದ್ಧಕ್ಕೆ ತರುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು ಆಗುತ್ತಿತ್ತು, ಅಲೆಕ್ಸಾಂಡರ್ ಭಾರತಕ್ಕೆ ದಂಡೆತ್ತಿ ಬಂದಾಗ ಪೌರವನ ಸೈನ್ಯದಲ್ಲಿ ಇದ್ದ ಕೇವಲ 50 ಆನೆಗಳನ್ನು ನೋಡಿ ಅಲೆಕ್ಸಾಂಡರ್ ಆತಂಕಿತನಾಗಿದ್ದನು. ಆದರೆ ಆನೆಗಳು ಸಿಡಿಮದ್ದು ಸದ್ದಿಗೆ ಮತ್ತು ನಗಾರಿ ಡೊಳ್ಳುಗಳ ಭೀಕರ ಸದ್ದಿಗೆ ಹೆದರುತ್ತವೆ ಎಂದು ಗುಪ್ತಚಾರರಿಂದ ತಿಳಿದುಕೊಂಡ ಅವನು ಅದೇ ತಂತ್ರವನ್ನು ಯುದ್ಧದಲ್ಲಿ ಉಪಯೋಗಿಸಿದನು. ಅಲೆಕ್ಸಾಂಡರನ ಸೈನಿಕರ ಸಿಡಿಮದ್ದು ಮತ್ತು ನಗಾರಿ ಸದ್ದಿನ ಕಂಪನಕ್ಕೆ ಪೌರವನ ಆನೆಗಳಿಗೆ ಹುಚ್ಚು ಹಿಡಿದಂತೆ ಅವು ತಮ್ಮ ಸೈನ್ಯವನ್ನೇ ತುಳಿಯುತ್ತಾ ಓಡಿಹೋದುದರಿ ಪೌರವ ಸೋತಿದ್ದು, ಹಾಗಾದರೆ ಕುರುಕ್ಷೇತ್ರದಲ್ಲಿ ನಾಲ್ಕು ಲಕ್ಷ ಆನೆಗಳು ನಗಾರಿ ಸದ್ದಿಗೆ ಹೆದರಿ ತ ಸೈನ್ಯವನ್ನೇ ತುಳಿದು ಮಾಡಿದ ಅನಾಹುತ ಎಷ್ಟಿರಬಹುದ

ಎರಡನೆಯದಾಗಿ ಯುದ್ಧಕ್ಕೆ ಕೇವಲ ಗಂಡು ಆನೆಗ ಮಾತ್ರ ಉಪಯೋಗಿಸಲಾಗುತ್ತಿತ್ತು, ಸಾಕಿದ ಗಂಡು ಆನೆಗ ಇನ್ನೊಂದು ಪರಕೀಯ ಗಂಡು ಆನೆ ನೋಡಿದಾಗ ಅ ತನ್ನದೇ ಸೈನ್ಯದ್ದಾದರೂ ಅದರೊಂದಿಗೆ ಕಾದಾ ಇಳಿಯುತ್ತದೆ. ಹೀಗಿರುವಾಗ ಅಷ್ಟು ದೊಡ್ಡ ಸಂಖ್ಯೆಯ ಗಂಡು ಆನೆಗಳನ್ನು ಒಂದೆಡೆ ಇಡಲು ಸಾಧ್ಯವೇ? ಒ ಆನೆಗೆ ಕನಿಷ್ಠ 20x20 ಅಡಿಯ ಜಾಗ ಬೇಕು, ಅ ಕಾಲಿಗೆ ಕಟ್ಟಲು ಲಕ್ಷಾಂತರ ಸರಪಳಿ ಬೇಕು. ಸರ ಮಾಡಲು ಸಾವಿರಾರು ಟನ್ನು ಉಕ್ಕು ಮತ್ತು ಕಮ್ಮಾ ಬೇಕು. ಹಾಗಾಗಿ ಕುರುಕ್ಷೇತ್ರ ಯುದ್ಧಭೂಮಿಯ ವಿಸ್ತಾ ನಾಲ್ಕು ಲಕ್ಷ ಆನೆಗಳನ್ನು ಕೇವಲ ಸಾಲಾಗಿ ನಿಲ್ಲಿಸ ಸಾಲದು. ಇನ್ನು ಅವುಗಳು ಕಾದಾಟಕ್ಕೆ ಇಳಿದಾಗ ಅ ಬೇಕಾಗುವ ವಿಶಾಲ ಜಾಗವೆಷ್ಟು? ಗಾಯಗೊಂಡ ವರ್ತಿಸುವ ಭೀಕರ ರೀತಿಗೆ ಅಲ್ಲಿರುವ ರಥದಳ, ಅಶ್ವ ಕಾಲ್ದಳ ಎಲ್ಲಾ ಹೇಗೆ ಅಪ್ಪಚ್ಚಿಯಾಗಿ ಹೋಗಿರಬಹು ಊಹಿಸಿ. ಗಾಯಗೊಂಡ ಆನೆಗಳಿಗೆ ಯಾರು ತಮ್ಮ ಯಾರು ವೈರಿ ಕಡೆಯವರು ಎಂದು ವಿವೇಚಿಸುವ ತಾಳ್ಮೆ ಇರುವುದಿಲ್ಲ.

ಕುದುರೆಗಳು ಗಾಯಗೊಂಡಾಗ ವಿಪರೀತ ಹಿಂಸಾ ವಾಗಿ ವರ್ತಿಸುತ್ತವೆ. ಆಗ ಅವುಗಳನ್ನು ನಿಯಂತ್ರಿ ಆಗುವುದಿಲ್ಲ, ಈ ಬಗ್ಗೆ ಬೆಂಗಳೂರಿನ ರೇಸ್ ಕೋ ಕೆಲಸಗಾರರನ್ನು ಕೇಳಿದರೆ ತಿಳಿಯುತ್ತದೆ.


ಇನ್ನು ನಾಲ್ಕು ಲಕ್ಷ ಗಂಡು ಆನೆಗಳನ್ನು ಕಾಡಿ ಖೆಡ್ಡಾದಲ್ಲಿ ಬೀಳಿಸಿ ಹಿಡಿದು ತಂದು ಅವುಗಳನ್ನು ಪ ಯುದ್ಧದ ತರಬೇತಿ ಕೊಟ್ಟು ತಯಾರು ಮಾಡಲು ಒಂದೊಂದು ಆನೆಗೆ 25 ಜನರಾದರೂ ಬೇಕು ಹ ವರ್ಷಗಟ್ಟಳೆ ಪರಿಶ್ರಮ ಬೇಕು. ಹಾಗಾದರೆ ನಾಲ್ಕು ಆನೆಗಳನ್ನು ಹಿಡಿದು ಅವುಗಳನ್ನು ಪಳಗಿಸಲು ಒ ಕೋಟಿ ನುರಿತ ಜನರು ಬೇಕು. ಅದೂ ಅವರೆಲ್ಲ ವರ್ಷ ಬೇರೆ ಎಲ್ಲಾ ಕೆಲಸ ಬಿಟ್ಟು ಸತತ ಇದೇ ಕೆಲಸ ತೊಡಗಿರಬೇಕು. ಅದೇ ಪ್ರಕಾರ 24 ಲಕ್ಷ ಕುದುರೆಗ ಪಳಗಿಸಿ ಯುದ್ಧಕ್ಕೆ ತರಬೇತಿ ಕೊಡಲು ಒಂದು ಕುದ ನಾಲ್ಕು ಜನರಂತೆ ಇದಕ್ಕೂ ಒಂದು ಕೋಟಿ ನ ಜನರು ಬೇಕು. ಇಷ್ಟೆಲ್ಲ ನಿಪುಣತೆಯುಳ್ಳ ಕೋಟ ಜನರು ಆಗ ಲಭ್ಯವಿದ್ದರೆ?

ಒಬ್ಬೊಬ್ಬ ಯೋಧನಿಗೂ ಹತ್ತಾರು ಖಡ್ಗ ಭಲ್ಲೆ ಗದೆ ಬೇಕು. ಒಬ್ಬೊಬ್ಬ ಬಿಲ್ಲುಗಾರನಿಗೂ ನೂರಾರು ಗಳು ಬೇಕು. ಈ ಲೆಕ್ಕದಲ್ಲಿ ಐವತ್ತೆರಡು ಲಕ್ಷ ಯೋ ಕೋಟ್ಯಾಂತರ ಸಂಖ್ಯೆಯಲ್ಲಿ ಉಕ್ಕಿನ ಭರ್ಜಿ ಖಡ್ಗ ಗದೆ ಬಿಲ್ಲುಬಾಣಗಳನ್ನು ತಯಾರಿಸಲು ಎಷ್ಟು ಕ ನುರಿತ ಕಮ್ಮಾರರು ಬೇಕು? ಎಲ್ಲಾ ಸೈನಿಕರ ಉಕ್ಕಿನ ಶಿರಾಸ್ತ್ರ ದೇಹಕ್ಕೆ ಉಕ್ಕಿನ ಕವಚ ಬೇಕು. ಇ ಎಷ್ಟು ಲಕ್ಷ ಟನ್ನು ಕಬ್ಬಿಣ ಬೇಕು? ಅಷ್ಟು ಭಾರತದಲ್ಲಿ ಆಗಿನ ಕಾಲದಲ್ಲಿ ತಯಾರಾಗುತ್ತಿತ್ತೇ? ಸ್ಟೀಲ್ ಮಿಲ್ಲುಗಳು ಇರಲಿಲ್ಲವಲ್ಲ, ಆಗ ಕೇವಲ ಕಮ ಸ್ವತಂತ್ರವಾಗಿ ಸ್ವಲ್ಪ ಸ್ವಲ್ಪ ಕಬ್ಬಿಣ ತಯಾರಿಸುತ್ತಿದ್ದರು ಲಕ್ಷಾಂತರ ಕುದುರೆಗಳ ಲಗಾಮಿಗೆ ಮತ್ತು ಬೇಕಾಗುವ ಚರ್ಮದ ಪ್ರಮಾಣ ಮತ್ತು ಐವ ಲಕ್ಷ ಸೈನಿಕರಿಗೆ ಬೇಕಾಗುವ ಪಾದರಕ್ಷೆ ಹಾಗೂ ತಯಾರಿಸಲು ಬೇಕಾಗುವ ಚರ್ಮಕಾರರ ಸಂಖ್ಯೆ ಉ ಆಗೆಲ್ಲ ಸಾಮಾನ್ಯ ಜನರು ಊಟಕ್ಕೆ ಮಣ್ಣಿನ ಲೋಟಗಳನ್ನೇ ಬಳಸುತ್ತಿದ್ದರು. ಲಕ್ಷಾಂತರ ಸೈನಿಕರ ಬೇಕಾಗುವ ಪಾತ್ರೆ-ಲೋಟಗಳನ್ನು ತಯಾರಿಸಲು ಸ ಕುಂಬಾರರು ಬೇಕು. ಐವತ್ತೆರಡು ಲಕ್ಷ ಸೈನಿಕರಿಗೆ ಬೇರೆ ಬಣ್ಣದ ಸಮವಸ್ತ್ರಕ್ಕೆ ಕೋಟ್ಯಾಂತರ ಗಜ ಬೇಕು, ಅದನ್ನು ಕೈಮಗ್ಗದಲ್ಲಿ ನೇಯಲು ಲ ನೇಕಾರರು ಬೇಕು. ಯೂನಿಫಾರ್ಮ್ ಹೊಲಿದು ಕ ಲಕ್ಷಾಂತರ ದರ್ಜಿಗಳು ಬೇಕು. ಆಗ ಹೊಲಿಗೆ ಇರಲಿಲ್ಲ ಕೇವಲ ಕೈಯಿಂದಲೇ ಹೊಲಿಯುತ್ತಿದ್ದರು. ಲಕ್ಷ ರಥ ಅಥವಾ ಆನೆಯ ಅಂಬಾರಿ ತಯಾ ಎಷ್ಟು ಲಕ್ಷ ಬಡಗಿಗಳು ಎಷ್ಟು ದಶಕಗಳ ಕಾಲ ದ ಬೇಕಾಗುತ್ತದೆ? ಅದಕ್ಕೆ ಎಷ್ಟು ಕೋಟಿ ಮರಮಟ್ಟು ಇವೆಲ್ಲವನ್ನೂ ದೇಶದ ಮೂಲೆಮೂಲೆಯಿಂದ ಕುರು ಸಾಗಿಸಬೇಕು. ದೂರದ ಅಸ್ಸಾಮ್ ಕೇರಳ ಸಿಂಹಳ ಗಾಂಧಾರ (ಅಫಘಾನಿಸ್ತಾನ) ದೇಶಗಳಿಂದ ಗುಡ್ಡಗಾಡು ಹಾಗೂ ನದಿಕೊಳ್ಳಗಳ ಮುಖಾಂತರ ನಡಿಗೆಯಿಂದ ಲಕ್ಷಾಂತರ ಆನೆ- ಕುದುರೆ- ರಥ- ಸೈ ಪ್ರಾಣಿಗಳ- ಮನುಷ್ಯರ ಆಹಾರ ಪದಾರ್ಥ, ಔಷಧ ಎರಡು ಸಾವಿರ ಮೈಲಿ ದೂರದ ಈಗಿನ ದಿಲ್ಲಿಯ ಕುರುಕ್ಷೇತ್ರಕ್ಕೆ ಹೇಗೆ ಸಾಗಿಸಿರಬಹುದು? ಹಗಲು ಆನೆ ಮತ್ತು ಕಾಲ್ದಳ ಸೈನಿಕರು ದಿನವೊಂದಕ್ಕೆ

...ಕಿಲೋಮೀಟರ್ ನಡೆಯಲು ಸಾಧ್ಯ. ಒಂದು ...ವಾದರೂ ನಡೆಯಬೇಕಾದ ದುರ್ಗಮ ಪರ್ವತದ ...ಯಲ್ಲಿ ಸುಸ್ತಾಗಿ ಅಥವಾ ರೋಗಗಳಿಂದ ಎಷ್ಟು ...ಗಳು ಮತ್ತು ಮನುಷ್ಯರು ಸತ್ತಿರಬಹುದು? ಯಾವ ...ವಿನಲ್ಲಿ ಯುದ್ಧ ನಡೆದಿದೆಯೋ ಆ ಋತುವಿಗೆ ಮನುಷ್ಯರಿಗೆ ಬಟ್ಟೆಬರೆ ಜತೆಗೆ ಪ್ರಾಣಿಗಳಿಗೆ ವಿಭಿನ್ನ ...ರ ಬೇಕು ತಾನೇ. ನಮ್ಮ ಉಪಖಂಡದ ಸಾವಿರಾರು ...ಗೆ-ಸಾಮಂತರಿಗೆ ಯುದ್ಧದಲ್ಲಿ ಪಾಲ್ಗೊಳ್ಳಲು ಆಹ್ವಾನ ...ಸಲು ಆಗ ಫೋನು-ಫ್ಯಾಕ್ಸ್-ಇಮೇಲ್ ಇರಲಿಲ್ಲವಲ್ಲ. ...ದರೆ ಎಲ್ಲ ರಾಜರಿಗೆ ರಾಯಭಾರಿ ಮುಖಾಂತರ ...ದ ಮುಟ್ಟಿಸಲು ಎಷ್ಟು ತಿಂಗಳು ಹಿಡಿದಿರಬಹುದು? ...ದೆ. ಆಧುನಿಕ ಕಾಲದಲ್ಲೂ ನಮ್ಮ ಮನೆಯ ...ವೆಯಲ್ಲಿ ಕೇವಲ ಮುನ್ನೂರು ಸಂಬಂಧಿಕರ ವಿಳಾಸ ...ಸಿ ಅವರಿಗೆ ಅಂಚೆಯಲ್ಲಿ ಆಹ್ವಾನ ಕಳುಹಿಸಲು ...ಷ್ಟು ಕಷ್ಟಪಡುತ್ತೇವೆ ನೆನಪಿಸಿಕೊಳ್ಳಿ).

ಭರತಖಂಡದ ಒಟ್ಟು ಜನಸಂಖ್ಯೆ ಎಷ್ಟಿತ್ತು?

...ದಾರು ಸಾವಿರ ವರ್ಷಗಳ ಹಿಂದೆ ಕುರುಕ್ಷೇತ್ರ ...ದ್ದದ ಕಾಲದಲ್ಲಿ ಸಮಸ್ತ ಭರತ ಖಂಡದ ಒಟ್ಟು ...ಸಂಖ್ಯೆ ಐದು ಕೋಟಿ ಮೀರಿರಲಿಕ್ಕಿಲ್ಲ, ಅದರಲ್ಲಿ ... ಮಾಡಲು ಯೋಗ್ಯ ದೈಹಿಕ ಕ್ಷಮತೆ ಇದ್ದವರು ...ದು ಕೋಟಿ ಜನರಿಗಿಂತ ಹೆಚ್ಚಿರಲಿಕ್ಕಿಲ್ಲ. ಆದರೆ



...ಸುತೆ ಕುರುಕ್ಷೇತ್ರದ ಲೆಕ್ಕಾಚಾರ ನೋಡಿದಾಗ ದೇಶದ ... ಜನತೆ ಯುದ್ಧದ ತಯಾರಿಯಲ್ಲಿಯೇ ತೊಡಗಿ ...ಅಥವಾ ಇತರ ಕೆಲಸ ಯಾರೂ ಮಾಡುತ್ತಿರಲಿಲ್ಲವೆನಿ... ಅದರಿಂದ ಆಹಾರ ಧಾನ್ಯಗಳ ಕೊರತೆಯುಂಟಾಗಿ ...ಮನುಷ್ಯರು-ಪ್ರಾಣಿಗಳು ಸತ್ತಿರಬಹುದು? ಮಕ್ಕಳು ...ಯರ ಸಹಿತ ಕನಿಷ್ಠ ಐದು ಕೋಟಿ ಜನರು ...ಕೆಲಸ ಬದಿಗಿಟ್ಟು ಕೇವಲ ಯುದ್ಧದ ...ರಿಗಾಗಿಯೇ ದುಡಿಯುತ್ತಿದ್ದರೇ? (ಹನ್ನೊಂದನೆ ...ಾನದಲ್ಲಿ ಯವನರು ಭಾರತಕ್ಕೆ ದಾಳಿ ಮಾಡಿದಾಗ ...ಇದ್ದ ಜನಸಂಖ್ಯೆ ಹತ್ತು ಕೋಟಿಗೂ ಕಡಿಮೆ).

...ದೇಶದ ವಿವಿಧ ಮೂಲೆಯಿಂದ ಬಂದ ಸೈನಿಕರು ...ಸಹಾಯಕರು ತಮ್ಮ ತಮ್ಮೊಳಗೆ ಯಾವ ಭಾಷೆಯಲ್ಲಿ ...ಾಡುತ್ತಿದ್ದರು? ಈಗಿನಂತೆ ಆಗಿನ ಜನರು ಹಲವು ...ಯಲ್ಲಿ ಪರಿಣಿತಿ ಹೊಂದುತ್ತಿರಲಿಲ್ಲ. ಸಂಸ್ಕೃತ ಭಾಷೆ ...ಕೇವಲ ಮೇಲ್ಜಾತಿಯವರಿಗೆ ಮಾತ್ರ ಗೊತ್ತಿತ್ತು, ...ಗಳಾಗಿದ್ದ ಬಹುಸಂಖ್ಯಾತರಿಗೆ ಕೇವಲ ಸ್ಥಳೀಯ ...-ದ್ರಾವಿಡ ಆದು ಭಾಷೆ ಮಾತ್ರ ಗೊತ್ತಿತ್ತು. ಹಾಗಾಗಿ ...ದ ವ್ಯೂಹ ರಚನೆಗೆ ಸೈನಿಕರಿಗೆ ಯಾವ ಭಾಷೆಯಲ್ಲಿ ...ಕೊಡಲಾಗುತಿತ್ತು? ಸೈನಿಕರಲ್ಲಿ ಎಲ್ಲ ಜಾತಿಯವರು ...ತಾನೇ. ಹಾಗಾಗಿ ಆಗಲೂ ಸೈನಿಕರೊಳಗೆ ಊಟ ...ವಿಷಯದಲ್ಲಿ ಜಾತಿಯಾಧಾರಿತ ಪಂಕ್ತಿ ಭೇದ ...ಾಗುತ್ತಿತ್ತೇ? ಘಟೋತ್ಕಚನ ಸಾವಿರಾರು ರಾಕ್ಷಸ ...ದಿ ಸೈನಿಕರೂ ಅವರೊಟ್ಟಿಗೆ ಇದ್ದರೇ? ಈ ರಾಕ್ಷಸರು ...ಅಡಿ ಎತ್ತರವಿದ್ದದ್ದು ನಿಜವಾಗಿದ್ದರೆ, ಅವರು ...ಐದಾರು ಅಡಿ ಎತ್ತರವಿದ್ದ ಇತರ ಸೈನಿಕರೊಂದಿಗೆ ...ಯುದ್ಧ ಮಾಡುತ್ತಿದ್ದರು? (ಮೂಲತಃ ರಾಕ್ಷಸ ಎಂಬ ...ನೇ ಈ ಜಗತ್ತಿನಲ್ಲಿ ಇರಲಿಲ್ಲ, ಹಾಗೂ ಸೈಂಧವನು ...ಐವತ್ತು ಅಡಿ ಎತ್ತರವಿದ್ದ ಎನ್ನುವುದೆಲ್ಲ ಶುದ್ಧ ...).

...ಸ ಲೆಕ್ಕಾಚಾರ ನೋಡಿದಾಗ ಪುರಾಣದಲ್ಲಿ ಬರೆದ ...ದಲ್ಲಿ ಕುರುಕ್ಷೇತ್ರ ಯುದ್ಧ ನಡೆದಿರಲು ಸಾಧ್ಯವೇ ...ಸುತ್ತವೆ. ಆದರೂ ಈ ಎಲ್ಲ ಅವಾಸ್ತವಿಕ ...ಗಳನ್ನು ಗಣನೆಗೆ ತೆಗೆದುಕೊಳ್ಳದೇ ಕುರುಕ್ಷೇತ್ರ ...ನಡೆದದ್ದು ನಿಜ ಮತ್ತು ಶ್ರೀ ಕೃಷ್ಣನು ಆ ಭೀಕರ ಯುದ್ಧ ಭೂಮಿಯಲ್ಲಿಯೇ ಗೀತೆ ಬೋಧಿಸಿದ್ದೂ ನಿಜ ಎಂಬ ವಾದ ಒಂದು ಕ್ಷಣ ಒಪ್ಪಿದರೂ 745 ಚರಣಗಳಿರುವ ಗೀತೆಯನ್ನು ಸಂಸ್ಕೃತ ಕಾವ್ಯ ರೂಪದಲ್ಲಿ ಬೋಧಿಸಿ ನಂತರ ಅದರ ಅರ್ಥವನ್ನು ಅರ್ಜುನನಿಗೆ ಗದ್ಯದಲ್ಲಿ ತಿಳಿಸಿ ಹೇಳಲು ಕೃಷ್ಣನಿಗೆ ಕನಿಷ್ಠ ಮೂರು ದಿನಗಳಾದರೂ ಬೇಕು.

ಹಾಗಾದರೆ ಅಷ್ಟು ಸಮಯ ಇತರ ಸೈನಿಕರು ಯುದ್ಧ ಮಾಡುವುದನ್ನು ಬಿಟ್ಟು ಭಜನೆ ಮಾಡುತ್ತಿದ್ದರೆ? ಯುದ್ಧಭೂಮಿಯಲ್ಲಿಯೇ ಶ್ರೀ ಕೃಷ್ಣನು ಅರ್ಜುನನಿಗೆ ವಿಶ್ವರೂಪ ತೋರಿಸಿದಾಗ ಇತರ ಲಕ್ಷಾಂತರ ಸೈನಿಕರಿಗೂ ಅದು ಕಾಣಿಸಬೇಕಿತ್ತು ತಾನೇ? ಕಾಣಿಸಿದ್ದರೆ ಅವರೆಲ್ಲಾ ಯುದ್ಧ ತೊರೆದು ಕೃಷ್ಣನಿಗೆ ಯಾಕೆ ಶರಣಾಗಲಿಲ್ಲ?

ಗಣಿತದ ಶೂನ್ಯವು ಭಾರತೀಯರ ಸಂಶೋಧನೆ ಎಂಬುದು ನಿಜ. ಅಷ್ಟು ಮಾತ್ರಕ್ಕೆ ನಾವು ಎಲ್ಲಾ ಪುರಾಣಗಳಲ್ಲಿ ಬೇಕಾಬಿಟ್ಟಿ ಶೂನ್ಯಗಳನ್ನು ಉಪಯೋಗಿಸಿ ಲಕ್ಷ-ಕೋಟಿ-ಅರ್ಬುದ-ಖರ್ವ- ಜಲಧಿ ಎಂದು ಎಣಿಸುವುದು ಸರಿಯೇ?

ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯದ ಇತಿಹಾಸ ಸಂಶೋಧಕರೇ ಕುರುಕ್ಷೇತ್ರ-ಥಾನೇಶ್ವರ್ ಎಂಬಲ್ಲಿ ನಡೆಸಿದ ಉತ್ಖನನದಲ್ಲಿ ಕಂಡುಬಂದಿದ್ದೇನೆಂದರೆ ಆ ಪ್ರದೇಶದಲ್ಲಿ 3000 ರಿಂದ 3500 ವರ್ಷಗಳ ಪೂರ್ವದಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ನಾಲ್ಕು ಯುದ್ಧಗಳು ನಡೆದಿರುವುದು ನಿಜ; ಆದರೆ ಅವುಗಳಲ್ಲಿ ಯಾವುದೇ ಯುದ್ಧದಲ್ಲೂ ಎರಡೂ ಕಡೆಯವರು ಕೂಡಿ ಒಟ್ಟು ಹತ್ತು ಸಾವಿರಕ್ಕಿಂತ ಹೆಚ್ಚು ಸೈನಿಕರು ಭಾಗವಹಿಸಿಯೇ ಇಲ್ಲ ಎಂಬ ನಿಷ್ಕರ್ಷೆಗೆ ಬಂದಿದ್ದಾರೆ. ಜತೆಗೆ ಆಗ ಉಪಯೋಗಿಸಿದ ಅಸ್ತ್ರ ಶಸ್ತ್ರಗಳೆಲ್ಲವೂ ಸಾಧಾರಣ ಖಡ್ಗ ಭರ್ಜಿ ಗದೆ ಬಿಲ್ಲು-ಬಾಣ ಗಳಾಗಿದ್ದವೇ ವಿನಹ ಕೆಲವರು ಹೇಳುವಂತೆ ಸ್ವಯಂಚಾಲಿತ ಮಿಸೈಲ್, ಅಣುಬಾಂಬ್, ವಿಮಾನಗಳನ್ನು ಆಗಿನವರು ಉಪಯೋಗಿಸಿದ್ದಾರೆ ಎಂಬುದು ಕೇವಲ ಕಾಲ್ಪನಿಕ ಎನ್ನುವುದೂ ಕಂಡುಬಂದಿದೆ. ಒಟ್ಟಾರೆ ಮಹಾಭಾರತದಲ್ಲಿ ವರ್ಣಿಸಲ್ಪಟ್ಟ ಕುರುಕ್ಷೇತ್ರ ಯುದ್ಧವು ವಾಸ್ತವತೆಯ ಅರಿವೇ ಇಲ್ಲದ ಲೇಖಕರು ಬರೆದ ಕಾಲ್ಪನಿಕ ಕಥೆ ಮಾತ್ರವಾಗಿದೆ ಎನ್ನುವುದಕ್ಕೆ ಮೇಲಿನ ಅಂಕೆ-ಸಂಖ್ಯೆಗಳೇ ಸಾಕ್ಷಿ. ಈಗಿನ ಸಂಶೋಧಕರ ಅಭಿಪ್ರಾಯದಂತೆ ಕನಿಷ್ಠ 500 ವರ್ಷಗಳ ಕಾಲ ಬೇರೆ ಬೇರೆ ಲೇಖಕರು ಮಹಾಭಾರತ ಮತ್ತು ಭಗವದ್ಗೀತೆಯನ್ನು ಪರಿಷ್ಕರಿಸಿ ಈಗಿನ ರೂಪಕ್ಕೆ ತಂದಿದ್ದಾರೆ. ಮೂಲ "ಜಯ" ಎಂಬ ಹೆಸರಿನ ಕಥೆಯನ್ನು ಬೇರೆ ಬೇರೆ ಲೇಖಕರು ವಿಸ್ತರಿಸಿ ಬೃಹತ್ ರೂಪ ಕೊಟ್ಟಾಗ ಅದು ಮಹಾಭಾರತ ಎನಿಸಿಕೊಂಡಿತು.

ಗೌತಮ ಬುದ್ಧನ ಕಾಲದಲ್ಲೂ ಈ ಪುರಾಣವನ್ನು ಪರಿಷ್ಕರಿಸಿ ಬುದ್ಧನ ನೀತಿಗಳನ್ನು ಅದರಲ್ಲಿ ಸೇರಿಸಲಾಗಿದೆಯಂತೆ. ಮಂಗಳೂರು ವಿಶ್ವವಿದ್ಯಾಲಯದ ಡಾ. ಕೃಷ್ಣಾನಂದ ಹೆಗ್ಡೆ ಎಂಬವರು ಮಹಾಭಾರತ ಮತ್ತು ಗೀತೆಯ ಮೂಲ ಲೇಖಕರ ಬಗ್ಗೆ ಹಲವಾರು ವರ್ಷ ಸಂಶೋಧನೆ ಮಾಡಿ ಸಂಶೋಧನಾ ಗ್ರಂಥ ಬರೆದಿದ್ದಾರೆ.

ಅವರ ಅಭಿಪ್ರಾಯದಂತೆ 15-20 ಋಷಿಗಳು 'ವ್ಯಾಸ' ಎಂಬ ಕಾವ್ಯನಾಮದಲ್ಲಿಯೇ ಆಗ ಬರೆಯುತ್ತಿದ್ದರಂತೆ. ಮಹಾಭಾರತದಲ್ಲಿ ಬರೆದುದ್ದೆಲ್ಲವನ್ನೂ ನಾವು ತರ್ಕದ ಒರೆಗೆ ಹಚ್ಚಿ ಪ್ರಾಕ್ಟಿಕಲ್ ಆಗಿ ವಿವೇಚಿಸಿದರೆ ಇನ್ನೂ ಅನೇಕ ಮೂಲಭೂತ ಪ್ರಶ್ನೆಗಳು ಜನಸಾಮಾನ್ಯರ ಮನದಲ್ಲಿ ಏಳುತ್ತಲೇ ಇರುತ್ತವೆ.

ಅವ್ಯಕ್ತ ಭಯ ಹಾಗೂ ಪಾಪಪ್ರಜ್ಞೆಯನ್ನು ಬದಿಗಿಟ್ಟು ಪುರಾಣಗಳನ್ನು ನಾವು ವಿಮರ್ಶಿಸಿದರೆ ಪುರಾಣ ಕಥೆಗಳಲ್ಲಿಯ ಕೃತಿಮತೆ ಬಯಲಾಗುತ್ತದೆ ಹಾಗೂ ಶ್ರೀಕೃಷ್ಣ ನಿಜವಾಗಿ ಗೀತಾಚಾರ್ಯನೇ ಎಂಬ ಪ್ರಶ್ನೆ ಹುಟ್ಟುತ್ತದೆ.

● ಪ್ರವೀಣ್ ಎಸ್ ಶೆಟ್ಟಿ

ಮಕ್ಕಳ ಶಿಕ್ಷಣದ ಹಕ್ಕಿಗೆ ಸಂದ ನೊಬೆಲ್

13 ◀◀

ಅವಳ ಉಳಿವಿಗಾಗಿ ಬ್ರಿಟನ್ನಿಗೆ ಕರೆದೊಯ್ಯಲಾಯಿತು. ತಾಲಿಬಾನಿಗಳ ಧರ್ಮವಲ್ಲದ ಅತಿರೇಕದ ಧರ್ಮದ ಉಸಿರುಗಟ್ಟಿಸುವ ಬಿಗಿಮುಷ್ಟಿಯಲ್ಲಿ ತಮ್ಮೆಲ್ಲಾ ಧ್ವನಿಗಳನ್ನು ಅಡವಿಟ್ಟಿದ್ದ ಸಹಸ್ರಾರು ಹೆಣ್ಣುಮಕ್ಕಳ ಆಶಯದ ಪ್ರಾರ್ಥನೆಯಂತೆ ಮತ್ತೆ ಚಿಗುರಿ ನಿಂತ ಎಳೆಯ ಜೀವ ಪಾಕಿಸ್ತಾನದ ಮುಂದಿನ ಭವಿಷ್ಯವನ್ನು ಬರೆಯತೊಡಗಿದಳು. ಈಕೆಯ ಪುಟ್ಟಪುಟ್ಟ ಹೆಜ್ಜೆಗಳು ತಾಲಿಬಾನಿಗಳ ಬಂದೂಕಿಗಿಂತಲೂ ತೀವ್ರವಾಗಿರುತ್ತದೆ ಎಂಬುದನ್ನು ಯಾರೂ ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ!

ಹೋರಾಟಗಾರ್ತಿಯ ಹುಟ್ಟು

ಜುಲೈ 12, 1997ರಲ್ಲಿ ಪಾಕಿಸ್ತಾನದ ಸ್ವಾಟ್ ಕಣಿವೆಯ ಮೊಗೇರಾದಲ್ಲಿ ಜನಿಸಿದ ಮಲಾಲಳ ತಂದೆ ಜಿಯಾದ್ದೀನ್ ಯೂಸುಫ್ ಕವಿಹೃದಯದ ಶಿಕ್ಷಣತಜ್ಞ, ಅಲ್ಲಿ ಶಾಲೆಯೊಂದನ್ನು ನಡೆಸುತ್ತಿದ್ದವರು. ತಾಯಿ ಟೂರ್‌ಪೆಕೈ ಯೂಸುಫ್.

ಅವಳೇ ಹೇಳಿದ ಮಾತುಗಳು


- ಪಾಕಿಸ್ತಾನದಲ್ಲಿ ನಡೆಯುವ ಹೋರಾಟಗಳು ಅದರಲ್ಲಿಯೂ ಸೈನ್ಯ ಮತ್ತು ಉಗ್ರಗಾಮಿಗಳ ಹೋರಾಟದಿಂದಾಗಿ ಅನೇಕ ಶಾಲೆಗಳು ಮುಚ್ಚಲ್ಪಡುತ್ತಿವೆ, ಧ್ವಂಸವಾಗುತ್ತಿವೆ. ಇದರಿಂದ ನನಗನಿಸುವುದು ಅಲ್ಲಿಯ ರಾಜಕೀಯ ಇಚ್ಛಾಶಕ್ತಿಯ ಕೊರತೆ ಅಭಿವೃದ್ಧಿಯಲ್ಲಿ ಕಂಡುಬರುತ್ತಿದೆ. ಹಾಗಾಗಿ ನಾನು ಅತ್ಯುತ್ತಮ ರಾಜಕಾರಣಿಯಾಗಬೇಕೆಂದು ಯಾವಾಗಲು ಮನಸ್ಸು ತುಡಿಯುತ್ತಿರುತ್ತದೆ. ಇದು ನನಗೆ ನಿರಂತರವಾಗಿ ಬೀಳುವ ಕನಸು.
- ಪುಸ್ತಕಗಳನ್ನು, ಲೇಖನಿಗಳನ್ನು ಎತ್ತಿಕೊಳ್ಳೋಣ, ಅವುಗಳೇ ನಮ್ಮ ಪ್ರಬಲವಾದ ಅಸ್ತ್ರಗಳು.
- ಇಡೀ ಜಗತ್ತು ತಣ್ಣಗಾದಾಗ ಒಂದು ಧ್ವನಿ ಪ್ರತಿಧ್ವನಿಯಾಗುತ್ತದೆ.
- ಒಂದು ಮಗು, ಒಬ್ಬ ಶಿಕ್ಷಕ, ಒಂದು ಪುಸ್ತಕ, ಒಂದು ಲೇಖನಿ ಇಡೀ ಜಗತ್ತನೇ ಬದಲಾಯಿಸಬಲ್ಲದು.

ಶಾಂತಿ ನೊಬೆಲ್ ಪಡೆದ ಪಾಕಿಸ್ತಾನದ ಮೊದಲ ಪ್ರಜೆ ಹಾಗೂ ಪ್ರಶಸ್ತಿ ಪುರಸ್ಕಾರದಲ್ಲಿ ಆಕೆಯೇ ಕಿರಿಯಳು, ಆದರೆ ಅವಳು ತನ್ನ ಪ್ರಶಸ್ತಿಯನ್ನು ಧಮನಿತ ಮಕ್ಕಳಿಗೆ ಅರ್ಪಿಸಿದ್ದಾಳೆ. ಅವಳಿಗೆ ತಾಲಿಬಾನಿಗಳ ವಿರೋಧ ಬೇಕಾಗಿಲ್ಲ; ಅವಳಿಗೆ ಬೇಕಾಗಿರುವುದು ತಾಲಿಬಾನಿಗಳ ಮಕ್ಕಳು, ಸೋದರರು ಶಿಕ್ಷಿತರಾಗಬೇಕೆಂಬುದು ನಿರಂತರವಾಗಿ ಪಾಕಿಸ್ತಾನದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ತುಡಿಯುವ ಹೋರಾಟಗಾರ್ತಿ. ಈಗಾಗಲೇ "ನಾನು ಮಲಾಲ" ಎಂಬ ಜೀವನ ವೃತ್ತಾಂತವನ್ನು ಹೊರತಂದಿರುತ್ತಾಳೆ. ಅವಳ ಹೋರಾಟಗಳು ಹಸಿರಾಗಲಿ, ಬಾಳು ಬೆಳಗಲಿ, ಆದರೆ ಈಗಾಗಲೇ ತಾಲಿಬಾನಿಗಳು ಅವಳ ವಿರುದ್ಧ ಧ್ವನಿ ಎತ್ತತೊಡಗಿದ್ದಾರೆ. ಮಲಾಲ ದೇವರಲ್ಲಿ ನಂಬಿಕೆ ಇಲ್ಲದ ಪಂಗಡದ ಏಜೆಂಟ್ ಎಂದಿರುವುದಲ್ಲದೇ, ಬಹಳಷ್ಟು ತಿಳಿವಳಿಕಸ್ಥರಂತೆ ಮಾತನಾಡುವ ಈಕೆ, ಬಂದೂಕು ಮತ್ತು ಶಸ್ತ್ರಾಸ್ತ್ರಗಳ ಹಿಂಸೆ ಬಗ್ಗೆ ಸಾಕಷ್ಟು ಮಾತನಾಡುತ್ತಿರುವ ಮಲಾಲ ತಾನು ತೆಗೆದುಕೊಂಡಿರುವ ಪ್ರಶಸ್ತಿಯ ವಿನಾಶಕಾರಿ ವಸ್ತುವನ್ನು ಕಂಡುಹಿಡಿದ ವ್ಯಕ್ತಿ ಎಂಬ ಅರಿವಿಲ್ಲದಂತಿದೆ ಎಂದು ಟೀಕಿಸಿದ್ದಾರೆ. ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಕಂಡುಹಿಡಿದದ್ದು ಪ್ರಯತ್ನಕ್ಕೆ, ಪ್ರಯೋಗಕ್ಕೆ, ಜೀವನ ಸಾರ್ಥಕತೆಗೆ ಹಾಗೂ ಸರಳತೆಗೆ ಎಂಬುದರ ಮನವರಿಕೆ ಇಲ್ಲದಂತಿರುವ ತಲೆಕೆಡುಕಜ್ಞಾನಿಗಳಿಗೆ ಉತ್ತರಿಸಬೇಕಾಗಿಲ್ಲ, ಮಲಾಲಳ ಅಂತಃಕರಣದಲ್ಲೇ ಎಲ್ಲಾ ಉತ್ತರವೂ ಅಡಗಿದೆ. ಅವಳ ಹೆಣ್ಣುಮಕ್ಕಳ ಶಿಕ್ಷಣ ಸಶಕ್ತತೆಯ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸುವುದು ಅರ್ಥಪೂರ್ಣ. ಪಾಕಿಸ್ತಾನದ ಮಹಿಳೆಯರು ಅವರ ಹೆಂಗೆಳೆಯರು ತಮ್ಮ ಸಾಕ್ಷರತೆಯ ಸ್ವಾಭಿಮಾನದ ಹೂನಗೆ ನಗುವಂತಾಗಲಿ ಮುಸುಕಿನಲ್ಲಾದರೂ!

ಅದಲ್ಲದೇ ಅತೀಮುಖ್ಯವಾಗಿ ಇವರಿಬ್ಬರೂ ಸಮಾಜದ ಮೇಲ್‌ಸ್ತರಕ್ಕೆ ಬರಲು ಸಾಮಾಜಿಕ ಜಾಲತಾಣಗಳು, ಸ್ವಯಂ ಸೇವಾಸಂಸ್ಥೆಗಳು, ಜನಸಾಮಾನ್ಯರು ಹಾಗೂ ಮಾಧ್ಯಮಗಳ ಪಾತ್ರ ಹಿರಿದಾದುದ್ದೆ, ಅದರಲ್ಲಿಯೂ ಮಲಾಲಳ ಹಿರಿಮೆಯನ್ನು ಬಿಂಬಿಸಿದ ಅವುಗಳ ಪಾತ್ರ ಮರೆಯುವಂತಿಲ್ಲ.

ಕ್ರೌರ್ಯವನ್ನು ಕಡೆಗಾಣಿಸುವ ನಿಟ್ಟಿನಲ್ಲಿ ಕೈಲಾಶ್ ಸತ್ಯಾರ್ಥಿ ಮತ್ತು ಯೂಸೂಫ್ ಮಲಾಲರವರು ಪಣವೊಂದನ್ನು ತೊಟ್ಟಿದ್ದಾರೆ. "ಪಾಕಿಸ್ತಾನ ಹಾಗೂ ಭಾರತದ ನಡುವಿನ ಸಂಬಂಧ ಸಹೋದರತ್ವದಿಂದ ಕೂಡಿದೆ. ಸಂಬಂಧಗಳು ಮಮಕಾರದಿಂದ ಗಟ್ಟಿಗೊಳ್ಳಲು ನಾವಿಬ್ಬರೂ ಪ್ರಯತ್ನಿಸುತ್ತೇವೆ. ದೇಶಗಳೆರಡೂ ಉತ್ತಮ ಬಾಂಧವ್ಯದಿಂದ ಇರಲೇಬೇಕು, ಶಾಂತಿಯಿಂದಿರಬೇಕು. ಕೆಲವು ಕ್ಷುಲ್ಲಕ ಕಾರಣಗಳಿಂದ ವ್ಯಾಘ್ರವಾಗಿರುವ ದೇಶೀಜನರ ಒಡಲಿನಲ್ಲಿ ಶಾಂತಿ ಪಸರಿಸಬೇಕು. ಆ ನಿಟ್ಟಿನಲ್ಲಿ ನಮ್ಮಿಬ್ಬರ ಪ್ರಯತ್ನವಿದೆ" ಎಂಬ ಸಂದೇಶವನ್ನು ಸಾರಿರುತ್ತಾರೆ. ಈ ಸಂದೇಶ ನಿಜವಾಗಲಿ ಎಂದು ಎಲ್ಲಾ ತಾಯ್ತನದ ಮನಸ್ಸುಗಳು ಹಾರೈಸುತ್ತವೆ.

● ಸ್ಯಾನಿ ಮತ್ತು ಪರಶು



ನೊಬೆಲ್ ಬೆಳಕಿನ ಬೆನ್ನು ಹತ್ತಿ

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com


ನಾನು ಐದನೇ ತರಗತಿಯಲ್ಲಿ ಓದುತ್ತಿದ್ದಾಗ ಇದ್ದಂತಹ ಮೂರು ಪಾಠಗಳು ನನ್ನ ನೆನಪಿನಲ್ಲಿ ಅಚ್ಚಳಿಯದೇ ಉಳಿದಿವೆ. ಒಂದು ಪಾಠ ಪುಣ್ಯಕೋಟಿಯದು. ಗದ್ಯ-ಪದ್ಯ ಎರಡೂ ಮಿಶ್ರವಾಗಿದ್ದಂತಹ ಪಠ್ಯ. ಕೊಟ್ಟ ಭಾಷೆಗೆ ತಪ್ಪಲಾರದ ಪ್ರಾಮಾಣಿಕ ಹಸು, ಹಸುವಿನ ಪ್ರಾಮಾಣಿಕತೆಗೆ ಮೆಚ್ಚಿ ಪ್ರಾಣ ಬಿಡುವ ಹುಲಿ! ಅಯ್ಯೋ ಅದು ಅಷ್ಟಕ್ಕೆಲ್ಲಾ ಸಾಯಬೇಕಾ? ಎಂಬುದು ಆಗಿನ ಎಳೆಯ ಮನಸ್ಸಿಗೆ ವಿಚಿತ್ರವಾದ ಸಂಗತಿ. ಹುಲಿ ಹಸುವಿನಿಂದ ಪ್ರಾಣ ಬಿಟ್ಟಿದ್ದೂ ಅಷ್ಟು ಬೇಸರವಾಗುತ್ತಿರಲಿಲ್ಲ, ಕೇವಲ ಮಾತಿಗಾಗಿ ಹಾರಿ ಪ್ರಾಣ ಬಿಟ್ಟ ಸಂಗತಿ ವಿಚಿತ್ರವಾದ ಪರಿಸ್ಥಿತಿಯಲ್ಲಿ ನಿಲ್ಲಿಸಿತ್ತು. ಜೊತೆಗೆ ಹಸು ವಾಪಾಸ್ಸು ಮನೆಗೆ ಹೋಗಿ ಕರುವನ್ನು ಸೇರಿಕೊಂಡಿತೇ? ಎಲ್ಲಾ ಊಹೆಗಳಾಗಿ ಕಾಡಿದ್ದವು. ಇವುಗಳ ಜತೆಗೆ ಹಸು ಅಷ್ಟೊಂದು ಪ್ರಾಮಾಣಿಕ ಅಂದಹಾಗೆ ಅದು ಸುಂದರವಾಗಿಯೂ ಇರಲೇಬೇಕೆಂಬ ಭಾವ. ನಮ್ಮೂರು ಮಲೆನಾಡ ಸೆರಗಿನ ಪ್ರದೇಶವಾಗಿದ್ದು, ಆಗ ಅಲ್ಲಿದ್ದ ಎಲ್ಲಾ ಹಸುಗಳೂ ಸಾಮಾನ್ಯವಾಗಿ ಮಲೆನಾಡ ಗಿಡ್ಡ ಜಾತಿಗೆ ಸೇರಿದವೇ ಆಗಿದ್ದ ಕಾರಣವೂ ಇದ್ದೀತು. ಏಕೆಂದರೆ ಈ ಮಲೆನಾಡು ಗಿಡ್ಡಗಳು ಅಷ್ಟೇನೂ ಆಕರ್ಷಕವಲ್ಲದ ದೇಹವನ್ನು ಹೊಂದಿದ್ದವು. ಆದರೆ ಅವುಗಳ ಬಣ್ಣ ಮಾತ್ರ ವೈವಿಧ್ಯಮಯವಾಗಿರುತ್ತಿದ್ದವು. ಆಗ ನೋಡುತ್ತಿದ್ದ ಸುಂದರವಾದ ಹೋರಿಗಳೆಂದರೆ ಹಾಸನ ಜಾತ್ರೆಯಿಂದ ತಂದಂತಹ ಎತ್ತುಗಳು. ಊರಿನ ರೈತರ ಮನೆಗಳಲ್ಲಿ ಕಂಡ ನೆನಪುಗಳು. ಅವುಗಳ ಮೈಕಟ್ಟೂ ಆಕರ್ಷಕವಾಗಿದ್ದು ಪುಣ್ಯಕೋಟಿಯೂ ಅಷ್ಟೇ ಆಕರ್ಷಕವಾಗಿದ್ದು ಅದರ ಊರು ಹಾಸನದ ಕಡೆ ಇರಬಹುದೆಂಬ ಆಲೋಚನೆ. ಅದಕ್ಕೇ ಕಾಳಿಂಗ ಗೊಲ್ಲನ ಸುಪರ್ದಿಯಲ್ಲಿದ್ದ ಪುಣ್ಯಕೋಟಿಯದ್ದೂ ಕೂಡ ಹಾಸನವೇ ಇರಬೇಕೇನೋ ಅನ್ನಿಸಿದ್ದೂ ಅಲ್ಲದೇ ಹೌದು ಎಂಬ ತೀರ್ಮಾನ ಮಾಡಿಕೊಂಡೂ ಆಗಿತ್ತು. ಹಾಸನದ ಕಡೆಯ ಆಕರ್ಷಕ ಅಮೃತಮಹಲ್ ಮತ್ತು ಹಳ್ಳಿಕಾರ್ ತಳಿಗಳ ಸೌಂದರ್ಯ ಪುಣ್ಯಕೋಟಿಯ ಜತೆಗೆ ಸಮೀಕರಿಸಿತ್ತು.


ಇನ್ನು ಎರಡನೆಯದು ಪಾಠ. ಒಲಂಪಿಕ್ ಕುರಿತದ್ದು. ಗ್ರೀಕ್‌ನ ಒಲಂಪಿಯಾ ಬಯಲಲ್ಲಿ ಆರಂಭಗೊಂಡ ಆಟಗಳ ಕುರಿತ ಪಾಠ. ಅದು ವಿವಿಧ ದೇಶಗಳ ನಡುವಣ ಸೌಹಾರ್ದತೆಯ ಸಂಕೇತವಾಗಿ ಬೆಳೆದ ಆಟಗಳ ಕುರಿತ ಪಾಠ. ಒಲಂಪಿಯಾ ಬಯಲೆಂದರೆ ಅತೀ ದೊಡ್ಡದಾದ ಬಯಲೆಂದೂ ಓದಿದ್ದು ನಮ್ಮ ಶಾಲೆಯ ಬಯಲೂ -ಸುಮಾರು ಹತ್ತಾರು ಎಕರೆ ಇದ್ದು- ಎಳೆಯ ಮನಸ್ಸಿಗೆ ಬೃಹತ್ತಾಗಿ ಕಂಡು ಅದೇ ಒಲಂಪಿಯಾ ತರಹ ಎನಿಸಿತ್ತು. ಶಾಲಾಕ್ರೀಡಾ ಕೂಟಗಳಲ್ಲಿ ನಡೆವ ಸಂಭ್ರಮದಲ್ಲಿ ಅಲ್ಲಿನ ಆಟಗಳಲ್ಲೂ ಕಂಡ ಕನಸು ಒಲಂಪಿಯಾದ ತರಹವೇ ಆಗಿದ್ದವು. ಒಟ್ಟಾರೆ ಆಟಗಳು ಗೆಳೆತನ ಬೆಳೆಸುವ ಕೂಟಗಳು ಎನ್ನಿಸಿದ್ದವು.

ಮೂರನೆಯ ಪಾಠ 'ಮಹಾದಾನಿ ನೊಬೆಲ್' ಎಂಬ ಹೆಸರಿನದು. ಆಲ್‌ಫ್ರೆಡ್ ನೊಬೆಲ್ ಎಂಬ ವಿಜ್ಞಾನಿಯು ಡೈನಮೇಟ್‌ನ್ನು ಕಂಡುಹಿಡಿದು ಅದರಿಂದ ಸಾಕಷ್ಟು ಲಾಭ ಗಳಿಸಿ ಬಂದ ವಿಪರೀತ ಹಣವನ್ನೆಲ್ಲಾ ಜಗತ್ತಿನ ಶ್ರೇಷ್ಠ ಸಂಶೋಧನೆಗೆ ಬಹುಮಾನವಾಗಿ ಕೊಡಲು ಉಯಿಲು ಬರೆದಿಟ್ಟ ಕಥೆಯ ಹಿನ್ನೆಲೆಯ ಪಾಠ. ಆದರಲ್ಲೂ ಸಂಶೋಧನೆಯು ಮಾನವತೆಗೂ ಕೊಡುಗೆಯಾಗಿರಲೇಬೇಕೆಂಬ ಬಗೆಗೆ ಓದಿದ ನೆನಪು! ಅದರ ಮೊತ್ತವೆಂಬುದು ಆಗಿನ ಊಹೆಗೂ ಮೀರಿದ್ದು. ಆಗೆಲ್ಲಾ ಐದು ಪೈಸೆಗೆಲ್ಲಾ ಬಾಳೆಹಣ್ಣು, ಐಸ್ ಕ್ಯಾಂಡಿ ಸಿಗುತ್ತಿದ್ದ ಕಾಲ. ಅಂತಹದರಲ್ಲಿ ಎಣಿಸಲಾಗದಷ್ಟು ಎಂಬ ಹಣದ ಬಗೆಗಿನ ಬೆರಗೇ ಅದ್ಭುತ. ಹೀಗೆ ಎಣಿಸಲು ಆಗದಷ್ಟು ಹಣ ಸಿಗಲು ಜಗತ್ತಿನಲ್ಲೇ ಶ್ರೇಷ್ಠ ಸಂಶೋಧನೆ ಮಾಡಬೇಕೆಂಬ ಕಥೆ.

ಇವು ಮೂರು ಹಲವಾರು ಬಾರಿ ಓದಿದ ಪಾಠಗಳು. ಪ್ರಾಮಾಣಿಕತೆ-ಜಾಗತಿಕ ಸೋದರತ್ವ-ಶ್ರೇಷ್ಠ ಸಂಶೋಧನೆ, ಸದಾ ನನ್ನನ್ನು ಕಾಡಿರುವ ಸಂಗತಿಗಳು. ಪ್ರಾಮಾಣಿಕ ಬದುಕಿನ ನಡುವೆಯೇ ಗೆಳೆತನದ ಜೊತೆಗೆ ಶ್ರೇಷ್ಠತೆಯ ಬೆನ್ನು ಹತ್ತುವ ಅಪಾಯಕಾರಿ ಸವಾಲುಗಳು ನನ್ನನ್ನುದ್ದಕ್ಕೂ ಕಾಡುತ್ತಿವೆ, ಜೊತೆಗೆ ಎಂದೂ ಬಿಡದಂತಹ ಆಶಾಕಿರಣಗಳಾಗಿಯೂ ಗೋಚರಿಸಿವೆ. ಇವೇ ಜೀವನದ ಮುಖ್ಯ ಮಾರ್ಗದರ್ಶಕಗಳಾಗಿಯೂ ಹಲವು ಬಾರಿ ಅನ್ನಿಸಿದೆ. ಅಲ್ಲದೇ ಅವೇ ನಿಜವಾದ ಮಾರ್ಗದರ್ಶಕವೂ ಆಗಿವೆ.

ನಂತರದ ದಿನಗಳಲ್ಲಿ ವಿಜ್ಞಾನದ ಬೆಳಕಿನ ಬೆನ್ನು ಹತ್ತಿ, ಮಣ್ಣಿನ ಹಿಂದೆ ಹೋಗಿ ಅದರ ಕುರಿತೇ ಸಂಶೋಧನೆಯಲ್ಲಿ ತೊಡಗಿದಂತೆ ನೆಲದ ಅರಿವಿನ ಬೃಹತ್ ದರ್ಶನ ನನ್ನನ್ನು ಚಿಕ್ಕವನ್ನಾಗಿಸುತ್ತಾ ಸಾಗಿತು. ನೆಲದ ಕಥೆಯ ಹಿಂದೆ ಸಾಗಿದಂತೆ ಹೆಜ್ಜೆಗಳು ಸ್ಪಷ್ಟವಾಗಲು ಸಾಕಷ್ಟು ಸಮಯವೇ ತೆಗೆದುಕೊಂಡವು. ಇದೇ ಸಮಯದಲ್ಲಿ ಅದು ಹೇಗೋ ಶ್ರೇಷ್ಠತೆಯ ಸಂಶೋಧನೆಯು ಮಾನವತೆಯ ಸಾಕರಕ್ಕೆ ಬೇಕು ಎಂಬ ಹಂಬಲವೂ ಬೆಳೆಯತೊಡಗಿತು. 80 ದಶಕದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಗ್ರಂಥಾಲಯದಲ್ಲಿ ಕಣ್ಣಿಗೆ ಬಿದ್ದ ನೊಬೆಲ್ ಪುರಸ್ಕೃತರ ಭಾಷಣಗಳ ಪುಸ್ತಕಗಳು, ಎದುರಿಗೆ ಮಿಂಚು ಹೊಳೆದಂತೆ ಕಂಡವು. ಮತ್ತದೇ ಐದನೇ ತರಗತಿಯ ಪಾಠಗಳು ನೆನಪಾಗಿ ನೊಬೆಲ್ ನೇರ ಎದುರಿಗೇ ಬಂದಂತಾಗಿ ಆಶ್ಚರ್ಯ ಮತ್ತು ಖುಷಿ ಒಟ್ಟಿಗೇ ಆದವು. ಆಗತಾನೆ ವಿಶ್ವವಿದ್ಯಾನಿಲಯದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿದ್ದ ಸಮಯ. ಅಷ್ಟಿಟ ಇಂಗ್ಲಿಷಿನ ನೊಬೆಲ್ ಭಾಷಣಗಳು ಅಷ್ಟೇನು ಅರ್ಥವಾಗಲಿಲ್ಲ, ಆದರೂ ಒಂದೆರಡನ್ನು ಸುಮ್ಮನೇ ಓದಿದೆ. ಅದರಲ್ಲೂ ಸಾರಜನಕದ ನೈಸರ್ಗಿಕ ಸ್ಥಿರೀಕರಣ ರಸಾಯನಿಕ ಕ್ರಿಯೆಗಳ ಕುರಿತ 1945ರ ನೊಬೆಲ್ ಪುರಸ್ಕೃತ ಫಿನ್‌ಲೆಂಡ್‌ನ ಆರ್ಟುರಿ ಇಲ್ಮಾರಿ ವಿರ್ಟನೆನ್ ಅವರ ಜೈವಿಕ ಸಾರಜನಕ ಸ್ಥಿರೀಕರಣ ಕುರಿತ







ಭಾಷಣ. ಸಾರಜನಕವು ಜೈವಿಕ ಅಗತ್ಯದ ಮೂಲವಸ್ತುವಾಗಿದ್ದು ಗೊಬ್ಬರದ ನೆನಪಿನಲ್ಲಿ ಒಂದಷ್ಟು ಅರ್ಥವಾಗಿರಬೇಕು. ಆದರೂ ಸಂಪೂರ್ಣ ಏನೂ ಮನಸ್ಸನ್ನು ಹೊಕ್ಕಲಿಲ್ಲ, ಮಣ್ಣಿನ ಮತ್ತು ರಸಾಯನಶಾಸ್ತ್ರದ ಸಂಬಂಧದ ನಿರೂಪವಿದ್ದ ಕೆಲ ಅಂಶಗಳು ಹೇಗೋ ತಿಳಿದವು ಅಷ್ಟೇ. ಇತ್ತೀಚೆಗೆ ನೊಬೆಲ್ ಕುರಿತ ಅರಿವು ಎಂದರೆ ಆಯಾ ವರ್ಷದಲ್ಲಿ ಅಕ್ಟೋಬರ್‌ನಲ್ಲಿ ಪುರಸ್ಕಾರಗಳು ಸುದ್ದಿಯಾದಾಗ ಎಷ್ಟೋ ಅಷ್ಟೇ. ಯಾವುವೂ ನೆನಪಿನಲ್ಲಿ ಉಳಿಯುತ್ತಿರಲಿಲ್ಲ. ಆದರಲ್ಲೂ ಯಾವುದಕ್ಕೆ ಎಂಬ ವಿಷಯವಂತೂ ನೆನಪಲ್ಲೇ ಉಳಿಯುತ್ತಿರಲಿಲ್ಲ, ಕೆಲವೊಮ್ಮೆ ಇಂತಹವರಿಗೆ ನೊಬೆಲ್ ಬಂತು ಎಂಬ ವಿಚಾರವಷ್ಟೇ ಉಳಿದಿರಬಹುದು. ಆದರೂ ಯಾವುದಕ್ಕೆ ಎಂಬ ವಿಷಯ ಕನಿಷ್ಠ ಆ ಶ್ರೇಷ್ಠ ಹಾಗೂ ಮಾನವತೆಗೆ ನೆರವಾಗುವ ಕಾರಣಕ್ಕಾದರೂ ಬಹುವಾಗಿ ಕಾಡಿದ್ದುಂಟು.

ಕಾಲ ಹೀಗೇ ಇರುವುದಿಲ್ಲ. ಅದೋ ಬಲು ಚಲನಶೀಲ. ಅರಿವಿನ ಮಹಾಪೂರವೆಂಬಂತೆ ಇಂಟರ್‌ನೆಟ್ ಸಾಧ್ಯತೆಗಳು ವಿಕಾಸಗೊಂಡವು. ತಿಳಿವಿನ ಹೊಸ ಬಾಗಿಲುಗಳು ತೆರೆದವು. ನೊಬೆಲ್ ಕುರಿತ ಪ್ರತಿ ವಿಚಾರಗಳೂ, ವಿವರಗಳೂ ಸಿಗತೊಡಗಿದವು. ಚಿಕ್ಕ ವಯಸ್ಸಿನಲ್ಲೇ ಹೊಕ್ಕ ವಿಷಯಗಳು ಪಕ್ವಗೊಂಡ ಫಲವೋ ಏನೋ, ಅಂತೂ ನೊಬೆಲ್ ಕುರಿತ ವಿಚಾರಗಳ ಹಿಂದೆ ಓಡುವ ಮನಸ್ಸಾಯಿತು. 2006ರಿಂದ ಸುದ್ದಿಗಳನ್ನು ಹಿಂಬಾಲಿಸುವ ಹೊತ್ತಿಗೆ ನನ್ನ ಇ-ಮೇಲ್‌ನ ಇನ್‌ಬಾಕ್ಸ್‌ಗೆ ನೊಬೆಲ್ ಸಮಿತಿಯು ಹೊರಡಿಸುವ ತಿಂಗಳ ವಾರ್ತಾಪತ್ರ ಬರುವಂತಾಯಿತು. ಸರಿ ಪ್ರತೀ ತಿಂಗಳೂ ಹೊಸದೇನಾದ್ದೂ ವಿಚಾರ, ಇತ್ಯಾದಿ ಮಾಹಿತಿಯು ನನ್ನ ಕಂಪ್ಯೂಟರಿನ ಕಿಟಕಿಯಲ್ಲಿ ಕಾಣತೊಡಗಿತು. ಶಿವಮೊಗ್ಗ ಹತ್ತಿರ ಹಳ್ಳಿಯ ಶಾಲೆ ಪಠ್ಯಪುಸ್ತಕದಲ್ಲಿ ಮೊದಲು ಕಂಡ ಆಲ್ಫ್ರೆಡ್ ನೊಬೆಲ್ ಚಿತ್ರ! ಈಗ ಬಹುದೂರದ ಸ್ಟಾಕ್‌ಹೋಮ್ ನಗರದ ನೊಬೆಲ್ ಸಮಿತಿಯ ಕಾರ್ಯಕ್ರಮಗಳು ಪುಟ್ಟ ಕನ್ನಡಿಯಂತಹ ಸ್ಕ್ರೀನಿನಲ್ಲಿ ಕಾಣತೊಡಗಿದವು. ವಿಜ್ಞಾನದ ಆಸಕ್ತಿಯಿಂದ ಹೈಸ್ಕೂಲಿನಲ್ಲೇ ಬಿತ್ತಿದ್ದ ಶ್ರೇಷ್ಠತೆಯ ಬೀಜವೂ ಮೊಳೆತಿತ್ತು, ಕನಸೆಂಬ ಹೂಗಳ ಬಿಟ್ಟು ನಳನಳಿಸಿತ್ತು. ಹೈಸ್ಕೂಲ್ ತಲುಪುವಷ್ಟರಲ್ಲಿ ಮುಂದೆ ಗೆದ್ದರೆ ನೊಬೆಲ್ ಗೆಲ್ಲಬೇಕು ಎಂಬ ಅನಿಸಿಕೆಗೆ ಕಂಪ್ಯೂಟರಿನ ಕಿಟಕಿಗಳಲ್ಲಿಯ ನೊಬೆಲ್ ವಿಚಾರಸಂಕೀರ್ಣ ಕಂಡು ಏನೋ ಗೆದ್ದ ಸಂಭ್ರಮ. ಪುಟ್ಟ ಮನಸ್ಸಿನ ಆಸೆಗಳಿಗೆ ಸಿಕ್ಕ ಸಂದರ್ಭಗಳ ಖುಷಿ. ಆದರೇನು ಕನಿಷ್ಠ ಡಾಕ್ಟರೇಟ್ ಪಡೆದು ವಿಜ್ಞಾನದ ಹಿಂದೋಡುವ ಕನಸುಗಳ ಕಟ್ಟಿ ಓಡಾಡುವ ದಿನಗಳಿಗೆ ಮೊದಲಾಗಿವೆ. ನಿಂತಲ್ಲಿ ನಿಲ್ಲಲಾರದ ನೆಲ-ನೆಲೆ ನನ್ನ ಕಾಲ ಕೆಳಗಿದೆ. ವಿಜ್ಞಾನ ಸಂಸ್ಥೆಗಳ ಪರ್ಯಟನದ ಹಾದಿಯಲ್ಲಿ ನೆಲದ ಜವಾಬ್ದಾರಿಯು ಮಾನವರ ಮತ್ತು ಜೀವಿಗಳೆಲ್ಲರ ಹಸಿವಿನ ಹಂಚಿಕೊಳ್ಳುವ ಬಗೆಗಿನ ತಿಳಿವಿನಲ್ಲಿ ಒಂದಷ್ಟು ಹೆಜ್ಜೆಗಳನ್ನಿಡಲು ಆಯಿತು. ಅಂತೂ ದೇಶದ ಮೊದಲನೆಯದೆಂಬಂತಹ ಮಣ್ಣು ಪರೀಕ್ಷಾ ಕಿಟ್ ಒಂದನ್ನು ತಯಾರಿಸುವ ಭಾಗ್ಯ ನನ್ನದಾಯಿತು. ಅದೀಗ ಹನ್ನೆರಡು ವರ್ಷಗಳಿಂದ ರೈತರ ನಡುವೆ ಓಡಾಡುತ್ತಾ ದೇಶ ಸಂಚಾರದಲ್ಲಿದೆ. ಅದೊಂದು ಮೊಬೈಲ್ ಕಿಟ್ ರೈತರು ತಾವೇ ತಮ್ಮ ಜಮೀನಿನಲ್ಲೇ ಮಣ್ಣು ಪರೀಕ್ಷಿಸಿಕೊಳ್ಳುವ ಸಾಧನ! ವಿಜ್ಞಾನಿಗಳೆಂದರೆ ಏನಾದರೂ ಕಂಡುಹಿಡಿದೇ ಇರಬೇಕೆಂಬ, ತಿಳಿವಲ್ಲಿ ನೀನು ಏನು ಕಂಡುಹಿಡಿದಿದ್ದೀಯ? ಎಂದು ಆಗ ನನ್ನ ಪುಟ್ಟ ಮಗ ಕೇಳುತ್ತಿದ್ದ ಪ್ರಶ್ನೆಗೆ ಉತ್ತರಿಸಲು ಅದು ನೆರವಾಗಿತ್ತು.

ನೊಬೆಲ್ ಸಪ್ತಾಹದ ವೆಬ್‌ಕಾಸ್ಟ್

ಇವೆಲ್ಲವುಗಳ ಜೊತೆಗೆ ಇತ್ತೀಚೆಗೆ ಕಳೆದ ಒಂದೆರಡು ವರ್ಷದಿಂದ ನೊಬೆಲ್ ಸಮಿತಿಯ ಇ-ವಾರ್ತಾಪತ್ರ ನನ್ನ ಮೇಲ್ ಬಾಕ್ಸ್‌ಗೆ ಬರುತ್ತಿದ್ದಂತೆ ಅವರ ಆಸಕ್ತಿಯು ಹೆಚ್ಚೇ ಆಯಿತು. 2012ನೇ ವರ್ಷದಂದು ಆರಂಭಿಸಿದ ನೊಬೆಲ್ ಸಪ್ತಾಹದ ಕಾರ್ಯಕ್ರಮಗಳಲ್ಲಿನ ವೆಬ್‌ಕಾಸ್ಟ್ (ಇಂಟರ್‌ನೆಟ್‌ನಲ್ಲಿ ನಡೆಸುವ ಸೆಮಿನಾರು)ನಲ್ಲಿ ಭಾಗವಹಿಸಲು ಸಾಧ್ಯವಾಯಿತು. ಅದಕ್ಕಾಗಿ ಮೊದಲು ಅರ್ಜಿ ಸಲ್ಲಿಸಿ ಕಾಯುತ್ತಾ ಕುಳಿತಾಗ, ನನ್ನ ಬಯಕೆಯಂತೆ ಆಯ್ಕೆಯಾದಾಗ ಆದ ಸಂತಸ ಹೇಳತೀರದು. ಯಾರಾದರೂ ಅರ್ಜಿ ಸಲ್ಲಿಸಬಹುದಿತ್ತು, ಸಲ್ಲಿಸದವರೆಲ್ಲರಿಗೂ ಸಿಗುತ್ತಿತ್ತು ಎನ್ನುವುದು ಬೇರೆಯೇ! ಅದಕ್ಕೂ ಹೆಚ್ಚಿನ ಖುಷಿ ಎಂದರೆ ಇನ್ನೇನು ಸೆಮಿನಾರು ಆರಂಭವಾಗಬೇಕೆನ್ನುವ ಹೊತ್ತಿಗೆ ಕೆಲವೇ ಸೆಕೆಂಡುಗಳಿದ್ದಾಗ ನನ್ನ ಮೊಬೈಲಿನಲ್ಲಿ ಮೆಸೇಜ್ ಬಂದ ಸದ್ದು. ನೋಡಿದರೆ ನೊಬೆಲ್ ಮಾಧ್ಯಮ ಕಳಿಸಿದ್ದ ಸುದ್ದಿ. "ನೊಬೆಲ್ ಸಪ್ತಾಹದ ಬಗ್ಗೆ ನಿಮ್ಮ ಆಸಕ್ತಿಗೆ ಧನ್ಯವಾದಗಳು, ವೆಬ್‌ಕಾಸ್ಟ್ ಈಗಷ್ಟೇ ಇನ್ನೇನು ಆರಂಭವಾಗಲಿದೆ", ಎಂಬ ಮಾಹಿತಿ ಮೂಡಿತ್ತು. ಆಗಲೇ ಕಂಪ್ಯೂಟರಿನ ಮುಂದೆ ಕುಳಿತ ನನಗೆ ಎದುರಿನ ಪರದೆಯ ಮೇಲೆ ನಿಧಾನವಾಗಿ ಮೂಡುವ ಚಿತ್ರದಿಂದ ನೊಬೆಲ್ ಮಾಹಿತಿಯ ಸಂಭ್ರಮ! ಮಧ್ಯಾಹ್ನ ಆರಂಭವಾದ ಸೆಮಿನಾರು ಸರಿ ರಾತ್ರಿವರೆಗೂ ನಡೆದಿತ್ತು. ಇದಕ್ಕಾಗಲಿ ನೊಬೆಲ್ ಇ-ವಾರ್ತಾಪತ್ರಕ್ಕಾಗಲಿ ಯಾರಾದರೂ ಸದಸ್ಯರಾಗಬಹುದು. ನೊಬೆಲ್ ವೆಬ್ ಪುಟಗಳಲ್ಲಿ ಈ ಕುರಿತು ಮಾಹಿತಿಯಿದೆ. ಹಾಗಾಗಿ ಇದೇನು ಹೆಚ್ಚೇನಿಲ್ಲ, ನಿಜ ಯಾರಿಗಾದರೂ ಈ ಸೌಲಭ್ಯ ಲಭ್ಯವಿದೆ. ಸಮಯಕ್ಕೆ ಸರಿಯಾಗಿ ನನ್ನ ಮೊಬೈಲ್‌ಗೇ ಮೆಸೇಜ್ ಬಂದದ್ದು ಖುಷಿಯೇ ಬೇರೆಯದು. ಅವರ ಸಮಯಪ್ರಜ್ಞೆ ಮತ್ತು ಕಾರ್ಯನಿರ್ವಹಿಸುವ ಶ್ರೇಷ್ಠತೆಯ ಹೆಗ್ಗುರುತು. ಶಿಸ್ತು ಶ್ರೇಷ್ಠತೆಯ ಬಗೆಗೆ ಯಾರಿಗಾದರೂ ಅಭಿಮಾನ ಮೂಡದಿರದು. ಅಂತಹ ಅನುಭವ ಪಡೆಯಲು ಕನ್ನಡಿಗರಿಗೆ ಪರಿಚಯಿಸಲೆಂಬುದೇ ಈ ಟಿಪ್ಪಣಿಗಳ ಆಶಯ. ಹೆಚ್ಚೂಕಡಿಮೆ ಹತ್ತು ವರ್ಷದವನಿದ್ದಾಗ ಪರಿಚಯವಾದ ನೊಬೆಲ್ ಸುಮಾರು ನಲವತ್ತು ವರ್ಷಗಳ ತರುವಾಯು ಹೀಗೆ ಅನಾವರಣಗೊಳ್ಳುತ್ತಾರೆಂದು ಊಹಿಸಿರಲಿಲ್ಲ. ಈಗಾಗಲೇ ಎರಡು ಬಾರಿ ಈ ವೆಬ್‌ಕಾಸ್ಟ್‌ನಲ್ಲಿ ಭಾಗವಹಿಸಿದ ಖುಷಿಯು ಸಿಕ್ಕಿದೆ.

ಸಾರ್ವಜನಿಕರಿಗಾಗಿ ನೊಬೆಲ್ ಸಮಿತಿ ನಡೆಸುವ ವಿಶೇಷ ಸಪ್ತಾಹ ಇದು. ಇದೊಂದು ವೈಜ್ಞಾನಿಕ ವಿಚಾರಗಳ ಸಾರ್ವಜನಿಕ ಅರಿವಿಗಾಗಿ ನಡೆಸುವ ಚರ್ಚೆ. ಸಾಮಾನ್ಯವಾಗಿ ಘನತೆವೆತ್ತ ವಿಜ್ಞಾನಿಗಳು, ಆಯಾ ವಿಚಾರಗಳ ಸಂಬಂಧಿತ ಗಣ್ಯರೂ ಇದರಲ್ಲಿ ಭಾಗವಹಿಸಿ ಸಾರ್ವಜನಿಕರಿಗೆ ವಿಜ್ಞಾನದ ಅಪ್‌ಡೇಟ್ ಒದಗಿಸುತ್ತಾರೆ. 2012 ರಿಂದ ಆರಂಭವಾದ ಈ ಚರ್ಚೆ ಮುಕ್ತವಾಗಿದ್ದು ಯಾರಿಗಾದರೂ ನೋಂದಣಿಗೆ ಅವಕಾಶವಿದೆ. ಕಳೆದ ಎರಡೂ ವೆಬ್‌ಕಾಸ್ಟ್‌ಗಳಲ್ಲೂ ಭಾಗವಹಿಸಿದ ನನಗೆ ಈ ಬಾರಿಯೂ ಅದಕ್ಕೆ ಒಂದು ದಿನವನ್ನು ಬಿಡುವಿಟ್ಟು ಕಾಯುತ್ತಿರುವೆ. ಮೊದಲ ವೆಬ್‌ಕಾ[...] ಜೀವತಂತ್ರಜ್ಞಾನ ಬಗೆಗಿತ್ತು, ಜೀನ್ ಕ್ರಾಂತಿಯ ಸಾಮಾಜ[...] ಪರಿಣಾಮಗಳ ಬಗ್ಗೆ ಚರ್ಚಿಸಲಾಗಿತ್ತು, ಎರಡನೆಯದ[...] ಭವಿಷ್ಯತ್ತಿನ ಶಕ್ತಿಯ ಬಗೆಗಿತ್ತು, ಭಾರತವೂ ಸೇರಿದಂ[...] ವಿವಿಧ ದೇಶಗಳ ಶಕ್ತಿ ಕುರಿತ ಸಂಶೋಧನೆಗಳ ಭವಿಷ್ಯ[...] ಸಮಾಜದ ಚರ್ಚೆ ನಡೆದಿತ್ತು, ಈ ವರ್ಷ 2014 ಡಿಸೆಂಬರ್ 9ರಂದು ನಡೆವ ಈ ಸಪ್ತಾಹ "ನಮಗೆ[...] ವಯಸ್ಸಾಗುತ್ತಿದೆ: ವಯಸ್ಸಾಗುವಿಕೆಯ ಸವಾಲುಗಳು ಮ[...] ಅವಕಾಶಗಳು- ಒಂದು ವೈಜ್ಞಾನಿಕ ಚರ್ಚೆ" ಎಂಬುದ[...] ಕುರಿತು ಇದೆ.


ಪ್ರತಿ ವರ್ಷ ಅಕ್ಟೋಬರ್ ತಿಂಗಳಲ್ಲಿ ನೊಬೆ[...] ಪುರಸ್ಕಾರವನ್ನು ಭೌತಶಾಸ್ತ್ರ ರಸಾಯನ ಶಾಸ್ತ್ರ ವೈದ್ಯಕೀಯ[...] ವಿಜ್ಞಾನ, ಅರ್ಥ ಶಾಸ್ತ್ರ ಶಾಂತಿ ಪುರಸ್ಕಾರ ಮತ್ತು ಸಾಹಿತ್ಯದ[...] ಆಯಾ ವರ್ಷದ ಅತ್ಯುನ್ನತ ಸಾಧನೆ ಅಥವ[...] ಸಂಶೋಧನೆಗೆಂದು ಅವರ ಶ್ರೇಷ್ಠ ಕಾರ್ಯಕ್ಕೆ ಮ[...] ಅದರಿಂದ ಉಂಟಾಗುವ ಮನುಕುಲದ ಉಪಕಾರಕ[...] ಜಗತ್ತಿನ ಈ ಅತ್ಯುನ್ನತ ಬಹುಮಾನ ಕೊಡಲಾಗುತ್ತ[...] ಅರ್ಥಶಾಸ್ತ್ರದ ಬಹುಮಾನ ಮಾತ್ರ ಸ್ವೀಡಿನ್ ಕೇಂದ್ರೀಯ[...] ಬ್ಯಾಂಕ್ ಸ್ಥಾಪಿಸಿದ್ದು ಅದನ್ನೂ ಆಲ್‌ಫ್ರೆಡ್ ನೊಬೆಲ್ ಹೆಸರಲ್ಲಿ ನೊಬೆಲ್ ಸಮಿತಿಯಿಂದಲೇ ಕೊಡಲಾಗುತ್ತ[...] ಉಳಿದ ಎಲ್ಲವನ್ನೂ ನೊಬೆಲ್ ಟ್ರಸ್ಟ್‌ನಿಂದಲೇ ಕೊಡಲಾಗುವುದು. ಅಕ್ಟೋಬರ್ ಆಲ್‌ಫ್ರೆಡ್ ನೊಬೆ[...] ಅವರ ಜನ್ಮವೆತ್ತಿದ ತಿಂಗಳು. ಅಲ್ಲಿಂದ ಡಿಸೆಂಬರ್ [...] ರವರೆಗೂ ನೊಬೆಲ್ ಸಮಿತಿಗೆ ನಿರಂತರ ಚಟುವಟ[...] ಅಂದು ನೊಬೆಲ್ ನಿಧನರಾದ ದಿನ. ಡಿಸೆಂಬರ್ 9ರಂ[...] ನೊಬೆಲ್ ಸಪ್ತಾಹದ ಚರ್ಚೆಯೊಂದಿಗೆ ಆ ವರ್ಷ[...] ಚಟುವಟಿಕೆಗೆ ತೆರೆ ಬೀಳುತ್ತದೆ. ಸಾಮಾನ್ಯವಾಗಿ ಸಪ್ತಾಹ[...] ಚರ್ಚೆಗೆ ಆ ವರ್ಷದ ಮುಖ್ಯ ಶೋಧದಿಂದ ಸಮಾಜ[...] ಮೇಲಾಗುವ ಪರಿಣಾಮ ಕುರಿತೇ ಚರ್ಚಿಸಲಾಗುತ್ತದ[...]

ನೊಬೆಲ್ ಬಹುಮಾನ ಪ್ರಶಸ್ತಿ ಪಡೆಯುವುದೆಂ[...] ವಿಜ್ಞಾನದಲ್ಲಿ ಅತ್ಯುನ್ನತ ಸಾಧನೆಯೆ ಸರಿ. ನಾವು ಸುಮಾ[...] ಹತ್ತು - ಹನ್ನೆರಡು ನೊಬೆಲ್ ಪುರಸ್ಕೃತರ ಹೆಸರ[...] ಹೇಳಬಹುದೇನೋ? ಎಷ್ಟೋ ಬಾರಿ ಯಾವ ಕಾರ್ಯಕ[...] ಅವರಿಗೆ ಪ್ರಶಸ್ತಿ ಕೊಡಲಾಯಿತು ಎಂದು ಹೇಳುವು[...] ಕಷ್ಟವೇ? ಆಯಾ ವರ್ಷ ಪ್ರಕಟವಾದಾಗ ಸುದ್ದಿಯ[...] ಓದಿ ಮರುದಿನದಲ್ಲೇ ಮರೆತುಹೋಗುವುದೇ ಹೆ[...] ಐನ್‌ಸ್ಟೀನರಿಗೆ ಯಾವುದಕ್ಕೆ ಪ್ರಶಸ್ತಿ ಬಂದಿದೆ ಎಂ[...] ಸಾಮಾನ್ಯವಾಗಿ ಸಾಪೇಕ್ಷ ಸಾಂದ್ರತೆಗೆ ಎನ್ನುವವರೇ ಹೆ[...] ಮಂದಿ. ಬೆಳಕಿನ ವಿದ್ಯುತ್ ಪರಿಣಾಮಕ್ಕೆ ಎನ್ನುವವ[...] ಕಡಿಮೆಯೇ. ಜೊತೆಗೆ ಯಾವುದೇ ಸಂಶೋಧನೆಗೆ [...] ಪುರಸ್ಕಾರ ಮನುಕುಲಕ್ಕೆ ಸಂಶೋಧನೆಯು ಹೇಗೆ ಉಪ[...] ಎಂಬುದನ್ನು ವಿವರಿಸುವ ಸಂದರ್ಭಗಳೂ ಕಡಿಮೆ[...] ಇದೇ ಅನುರಣನದ ಪುಟಗಳಲ್ಲಿ ಈ ವರ್ಷ[...] ಬಹುಮಾನಗಳ ವೈಜ್ಞಾನಿಕ ಸಂಗತಿಯ ಸ[...] ವಿವರಣೆಯೊಂದಿಗೆ ವಿಜ್ಞಾನಿಗಳ ಬಗೆಗೂ ಮುಂ[...] ದಿನಗಳಲ್ಲಿ ಓದಲಿದ್ದೀರಿ.

ನೊಬೆಲ್ ಪುರಸ್ಕೃತ ಸಂಶೋಧನೆಯ ಮಾಹಿತಿಗ[...] ಸಾಮಾನ್ಯ ಮಾತಿನಲ್ಲಿ ಹೇಳುವ ಕಷ್ಟವಿದೆ. ಹಾಗ[...] ಸಾಧ್ಯವಿಲ್ಲ ಅಂತಲ್ಲ, ಆದರಲ್ಲೂ ಎಲ್ಲಾ ಸಂಶೋಧನೆ[...] ವಿಭಿನ್ನ ಶಿಸ್ತಿಗೆ ಸೇರಿದವು. 1901ರಲ್ಲಿ ಆರಂಭವಾಗಿ ಈವ[...] 567 ನೊಬೆಲ್ ಬಹುಮಾನಗಳನ್ನು ಕೊಡಲಾಗಿದೆ. [...] ಸಂಸ್ಥೆಗಳಲ್ಲದೆ, 864 ವಿಜ್ಞಾನಿಗಳು/ವಿದ್ವಾಂಸರು ನೊಬ[...] ಪುರಸ್ಕೃತರಾಗಿದ್ದಾರೆ. ಆದರಲ್ಲಿ 338 ಮಂದಿ ವೈಯಕ್ತಿಕ[...] ಯಾರೊಡನೆಯೂ ಹಂಚಿಕೊಳ್ಳದೆ ಪುರಸ್ಕಾರ ಪಡೆದಿ[...] ಗುರು-ಶಿಷ್ಯರು, ಅಪ್ಪ-ಮಗ, ತಾಯಿ-ಮಗ[...] ಗಂಡ-ಹೆಂಡತಿ ಹಂಚಿಕೊಂಡೂ ನೊಬೆಲ್ ಪುರ[...] ಪಡೆದಿದ್ದಾರೆ.

ಗಾಂಧಿಗೆ ಬರದ ನೊಬೆಲ್

ಗಾಂಧಿಗೆ ನೊಬೆಲ್ ಬರಲಿಲ್ಲ, ಹೆಚ್ಚೂಕಡಿಮೆ 1[...] ದಶಕದಿಂದಲೂ ಅವರ ಹೆಸರು ಪ್ರಸ್ತಾಪವಾಗುತ್ತಿತ್ತು. ಕ[...] ಬಾರಿ 1948ರಲ್ಲೂ ಪ್ರಸ್ತಾಪವಾಗಿತ್ತು, ಬ್ರಿಟಿಷರ ವಿ[...] ನಡೆಸಿದ ಶಾಂತಿ ಹೋರಾಟಕ್ಕೆ ಬಹುಮಾನ ಕೊಡುವ[...] ಹೇಗೆ? ಕೊನೆಗೂ ಮೊದಲ ಬಾರಿಗೆ ಮರಣಾನಂತ[...] ಬಹುಮಾನ ಕೊಡಲು ನಿರ್ಧರಿಸಲಾಗಿತ್ತು, ಅ[...] ಬಹುಮಾನ ಪಡೆವ ವಾರಸುದಾರರು - ಅಂದರೆ [...] ಹಕ್ಕು ಪಡೆವಂತೆ - ಯಾರೂ ಇಲ್ಲದಿರುವಂತೆ ನೊ[...] ಸಮಿತಿಯು ಹೇಳಿಕೆ ನೀಡಿತ್ತು. ಗಾಂಧಿಯ ಹೆಸರು [...] ಬಾಯಲ್ಲಿ, ಮನಸ್ಸಿನಲ್ಲಿದ್ದಂತೆ ಯಾವುದೇ ಆಸ್ತಿ ಮ[...] ಇರಲಿಲ್ಲ. ಗಾಂಧಿಗೆ ನೊಬೆಲ್ ನೀಡದ್ದಕ್ಕಾಗಿ ನೊ[...] ಸಂಸ್ಥೆ ಕೊನೆಗೂ ಅಧಿಕೃತವಾಗಿ ಪಶ್ಚಾತ್ತಾಪವನ್ನು ಪ[...] ಕ್ಷಮೆ ಕೋರಿದೆ. ಆದರೇನಂತೆ ಗಾಂಧಿಯ ದಾರಿ[...] ನಡೆದ ನೆಲ್ಸನ್ ಮಂಡೆಲಾ, ಆಲ್ಬರ್ಟ್ ಶುಯ[...] ಮುಂತಾದವರಿಗೆ ಬಹುಮಾನ ಆದಕ್ಕೆಂದೇ ಕೊ[...] ಆದಿರಲಿ ಈ ವರ್ಷ ಗಾಂಧಿಯ ನಾಡಿನ ಮ[...] ಕೈಲಾಸ್ ಸತ್ಯಾರ್ಥಿ ಮತ್ತು ಮಲಾಲರಿಗೂ ಹೆಚ್ಚೂಕ[...] ಅದೇ ಶಾಂತಿ ಪುರಸ್ಕಾರ ನೀಡಿದೆ. ದೇಶವನ್ನು ಹಂಚಿಕ[...] ಭಾರತ ಮತ್ತು ಪಾಕಿಸ್ತಾನಗಳು ಅತ್ಯುನ್ನತ "ಶ[...] ಪಾರಿತೋಷಕವನ್ನೂ ಹಂಚಿಕೊಳ್ಳಬೇಕಿರುವುದು [...] ಭವಿಷ್ಯವೇನೋ ಅನ್ನಿಸುತ್ತಿದೆ. ಶಾಂತಿಯನ್ನೂ ಹಂಚಿಕ[...] ತುರ್ತು ಹಿಂದೆಂದಿಗಿಂತಲೂ ಹೆಚ್ಚಾಗಿದೆ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಶಂಭೋಶಂಕರ: ಆರ್ಯರ ಪ್ರಜಾಪತಿ ವರ್ಸಸ್ ಅರಣ್ಯಕರ ಪಶುಪತಿ

ಶಿವ, ಶಂಕರ, ಶಂಭು, ಸ್ಥಾಣು, ಮಹಾದೇವ, ಪಶುಪತಿ, ... ಹೀಗೆ ಯಾವುದೇ ಹೆಸರನ್ನು ನೆನೆದರೂ ನಮಗೆ ...ಗು ವವನು. ಸ್ಮೃತಿಪಟಲಕ್ಕೆ ಬರುವವನು ಜಟಾಜೂಟ ..., ಗಜಚರ್ಮಾಂಬರಧಾರಿ, ಗಂಗಾಧರ, ಚಂದ್ರಶೇಖರ, ...ಘ್ರಚರ್ಮಾಂಬರ, ನಾಗಾಭರಣ, ತ್ರಿನೇತ್ರಧಾರಿ, ಡಮರುಗ ...ದ್ರಿ ಶೂಲಧಾರಿ, ಚಂಡೆ, ಢಕ್ಕೆ, ಶಂಖ, ಡಮರುಗಗಳ ...ಕ್ಕೆ ಧುತ್ತನೆ ಮೇಲೆದ್ದು ತಾಂಡವ ಎಂಬ ಮಹಾಪುರುಷ ...ಮಾಡುವಂತಹ ಒಬ್ಬ ಅರಣ್ಯಕ. ಆತ ಯೋಗಿ, ಮಹಾ ...ಪಸ್ವಿ, ಸಾಧಕ, ಕಾಮನನ್ನು ಕೊಂದವನು, ಶೃಂಗಾರದಲ್ಲಿ ...ನನು, ತಂತ್ರ ಸಾಧಕ, ಮಹಾ ಕರುಣಿ, ನಿಷ್ಕರುಣಿ, ...ದಿಗೆಲ್ಲಾ ದೇವನು, ಸ್ಮಶಾನದಲ್ಲಿ, ಚಿತೆಯ ಬೂದಿಯಲ್ಲಿ, ...ಗಳಲ್ಲಿ, ನದಿಕಿನಾರೆಗಳಲ್ಲಿ ವಿಹರಿಸುತ್ತಾನೆ; ಹೀಗೆ ಅವನ ...ವರ್ಣನೆಯ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಯಾರು ಈ ಶಿವ?

...ಖಿತ ದೇವತೆಗಳ ಸ್ತುತಿಗೆ ಒಳಗಾಗುತ್ತಾನೆ. ರಾಕ್ಷಸರ ...ದೇವತೆಯಾಗಿರುತ್ತಾನೆ. ಪುರಾತನರಲ್ಲಿ ಅತಿ ಪುರಾತನ ...ಕಾಣುತ್ತಾನೆ. ನಾಸ್ತಿಕರಿಗೂ, ಆಸ್ತಿಕರಿಗೂ, ಆರ್ಯರಿಗೂ, ...ಡರಿಗೂ, ಸುರರಿಗೂ, ಅಸುರರಿಗೂ-ಎಲ್ಲರಿಗೂ ...ತ್ತಾನೆ. ಆತನ ಕಂಡರೆ ಪ್ರೀತಿಯೂ ಉಂಟು, ಭೀತಿಯೂ ...ಟು. ಸಖತ್ ಖತರ್ನಾಕ್ ಬಿಂದಾಸ್ ಮಸ್ಕುಲೈನ್ ...ನಾಲಿಟಿ ಅಂತ ಹಿ ಮ್ಯಾನ್ ಅವಾರ್ಡ್ ಇದೀ ...ದಲ್ಲಿ ಯಾವ ದೇವತೆಗಾದರೂ ಕೊಡಬಹುದು ಅಂದರೆ, ...ಶಿವನಿಗೆ ಅಂತ ಇಂದು ಎಲ್ಲರೂ ಓಟ್ ಮಾಡುತ್ತಾರೆ. ...ಹ ಶಿವನ ಗುಣಗಳನ್ನು ಗಮನಿಸಿದರೆ, ಅವನು ...ರಿಗೂ ಮೋಸ ಮಾಡಿರುವ ಉದಾಹರಣೆ ...ವುದಿಲ್ಲ. ಎಲ್ಲೂ ವೇಷ ಮರೆಸಿಕೊಂಡು ಬಂದು ...ವನೊಬ್ಬ ಅರಸನನ್ನೋ, ಅಸುರನನ್ನೋ ಕೊಂದ ...ಹರಣೆಗಳಿಲ್ಲ. ಯಾರೋ ಒಬ್ಬಳ ಗಂಡನ ಕೊಲ್ಲುವ ...ವಾಗಿ ಪತಿವ್ರತೆಯ ಬಳಿ ಅವಳ ಗಂಡನಂತೆಯೇ ...ಗಿ, ಮಲಗಿ ಅವಳ ಗಂಡನನ್ನು ಶಕ್ತಿಹೀನನನ್ನಾಗಿ ...ಸಿ ಕೊಲ್ಲುವಂತಹ ಪಾತಕಗಳನ್ನು ಮಾಡಿಲ್ಲ. ಅನ್ಯಥಾ ...ಣಂ ನಾಸ್ತಿ ತ್ವ ಮೇವ ಶರಣಂ ಮಮ ಅಂತ ಕಾಲಿಗೆ ...ದೇವತೆಗಳನ್ನು ಉಳಿಸಲು ಇನ್ನಾರೋ ಮೇಲೆ ನೇರ ...ದ್ಧ ಹೋಗುತ್ತಾನೆ. ಯಾರ ಜೊತೆಗೇ ಆಗಿರಲಿ ...ವೆಂದರೆ ಅದು ಮುಖಾಮುಖಿಯೇ ಹೊರತು ದಾನದ ...ವನ್ನು ಒಡ್ಡಿ, ದಕ್ಷಿಣೆಯೆಂಬ ಹೆಸರಲ್ಲಿ ಭಿಕ್ಷೆ ಕೇಳುವ ...ಹ್ಮಣವಟುವಿನಂತೆ ಹೋಗಿ ಪಾತಾಳಕ್ಕೆ ತುಳಿದು ...ವಂತಹ, ಬೆನ್ನಿಗೆ ಚೂರಿ ಹಾಕುವ ಕಥೆ ಅವನ ...ಣೇತಿಹಾಸದಲ್ಲಿ ಇಲ್ಲ. ಕೇಳಿದವರಿಗೆ ಇಲ್ಲವೆನ್ನದೇ ...ಸೆ (ತನಗೇ ತೊಂದರೆಯಾದರೂ) ವರವನ್ನು ...ಟ್ಟುಬಿಡುವಂತಹ ಬೋಳೇ ಸ್ವಭಾವದ ಮುಗ್ಧ, ತನ್ನ ...ತಿಯನ್ನೇ ಕೇಳಿದರೂ ಕಳಿಸುವುದಿರಲಿ, ತನ್ನ ಆತ್ಮವನ್ನೇ ...ವರೂ ಕೊಡುವಷ್ಟು ಧಾರಾಳಿ. ಯಾರಾದರೂ ತಪಸ್ಸು ...ಡಿದರೆ ತಮ್ಮ ಪದವಿಗೆ ಸಂಚಕಾರ ಬಂದೀತೆಂದು ... ಡಾನ್ಸರ್‌ಗಳಂತಿರುವ ಸುರವೇಶ್ಯೆಯರನ್ನು ಕಳುಹಿಸಿ ...ಸ್ಸಿ ಕೆಡಿಸುವಂತಹ ದೇವಗಣದಲ್ಲಿ ತನ್ನ ಪದವಿಯನ್ನು ...ಗೇ ಕೊಟ್ಟುಬಿಡುವಂತಹ ನಿರ್ಮೋಹಿ, ಅವನಿಗೆ ...ೀ ಬಾರದು. ಬಂದದ್ದನ್ನು ಹಸನ್ಮುಖನಾಗಿ ಎದುರಿಸುವ ...ತ್ತಿ ಸ್ವೀಕರಿಸುವ ಅವನು ಕಂಗೆಟ್ಟು ಓಡಿ ಯಾರದೋ ...ಗೆ ಬಿದ್ದು ತನ್ನ ತಲೆ ಕಾದುಕೊಂಡಂತಹ ದಾಖಲೆಗಳು ...ತನ ಪುರಾಣಗಳಲ್ಲಿ ಇಲ್ಲ. (ಶೈವ ಮತ್ತು ವೈಷ್ಣವ ...ದ ಸಂಘರ್ಷಗಳು ಪ್ರಾರಂಭವಾದ ಮೇಲೆ ಶಿವನ ...ಮಹತ್ವ ಕಡಿಮೆ ಮಾಡಲು, ವಿಷ್ಣುವನ್ನು ವೈಭವೀಕರಿಸಲು ...ವು ಕಥೆಗಳು ನಂತರದ ಪುರಾಣಗಳಲ್ಲಿ ಸೃಷ್ಟಿಯಾಗಿವೆ.) ...ಲ್ಲದೇ ಇರಲು ಅಮೃತಕ್ಕಾಗಿ ಸಾಯುವವರ ಮಧ್ಯೆ ... ವಿಷವನ್ನೇ ಕುಡಿಯುವ ಸಾಹಸಿ. ಇವನು ನರ್ತಿಸಬಲ್ಲ, ...ಬಲ್ಲ, ಬೋಧಿಸಬಲ್ಲ, ಅಕ್ಷರಗಳನ್ನು ಹುಟ್ಟಿಸಬಲ್ಲ, ...ಯಾವ ದೇವರು ಹೆದರುವರೋ ಅಲ್ಲಿ ಮುನ್ನುಗ್ಗಬಲ್ಲ, ...ಶಿಸಿಯು ಆಡಂಬರದ ದೌಲತ್ತಿಲ್ಲದ ವಿರಕ್ತ ಮುಗ್ಧನಾಗಿ, ...ನಾಗಿ, ಸಾಹಸಿಯಾಗಿ, ಜೀವಪರನಾಗಿ, ಸಮಾಜವಾದಿ ...ಗಿ, ಯೋಗಿಯಾಗಿ, ಸಂಸಾರಿಯಾಗಿ, ಯಾವುದರಲ್ಲೂ ...ಭೇದವಿಲ್ಲದವನಾಗಿ, ಏಕಾಂತಪ್ರಿಯನಾಗಿ, ಎಲ್ಲರೊಡನೆ ... ಇದ್ದು ಯಾರೊಂದಿಗೂ ವ್ಯಾಮೋಹ ಇಲ್ಲದಿರು ...ಸ ಘನವಾದ ವ್ಯಕ್ತಿತ್ವ. ಇಂತಹ ಹತ್ತು ಹಲವು ...ಗಳ ವ್ಯಕ್ತಿತ್ವವು ಶಿವನಿಗಿರುವುದಾದರೂ 'ದೇವರು ...ಬ್' ಎಂಬ ಆರ್ಯರ ಯಾಜ್ಞಿಕ ಪ್ರಕ್ರಿಯೆಗೆ ಬಂದರೆ, ...ು ದೇವರನ್ನಾಗಿ ಮಾಡಿಸಿಕೊಂಡವನಲ್ಲ. ಆದರೆ ತಾನೇ ...ದವನು.

ಸ್ವಯಂಭು

...ಗಡಲೇಯಂದಾಗಿ ಈ ಬಿಂದಾಸ್ ಮತ್ತು ಸಟೋರಿ ... ಸರ್ನಾಲಿಟಿ ಆರ್ಯರ ಮೂಲದ್ದಲ್ಲ, ಹಾಗಾ, ಈ ಮಣ್ಣಿನ ಮೂಲ ನಿವಾಸಿಗಳ ಸೆಲ್ಫ್ ಮೇಡ್ ಪರ್ಸನಾಲಿಟಿ. ಸಿಂಧೂ ಬಯಲಿನ ನಾಗರಿಕತೆಯ ಮೊಹರುಗಳಲ್ಲೇ ಪಶುಪತಿಯಂತೆ ಠಸ್ಸೆ ಒತ್ತಿರುವ ಈತನದೂ ಒಂದು ಪರಂಪರೆ. ಕ್ಲೀಷೆಯಾದರೂ ಮತ್ತೆ ನೆನಪಿಸಿಕೊಳ್ಳಬೇಕಾದ ಅಂಶವೆಂದರೆ ಶಿವನೆಂಬುವನು ಒಬ್ಬನಲ್ಲ, ಹಲವಾರು ಮಂದಿ. ರುದ್ರನಾದವನು, ಶಿವನಾದ, ಮಹಾದೇವನಾದ, ಆರ್ಯರ ಜೊತೆಗೆ ಉಂಟಾದ ವರ್ಣಸಂಕರದಿಂದ ಮುಂದುವರಿದ ಶಿವನು ಶಂಕರನಾದ. ಹೀಗೆ ಹತ್ತು ಹಲವು ಆಯಾಮಗಳಲ್ಲಿ ತೆರೆದುಕೊಳ್ಳುತ್ತಾ ಹೋಗುವ ಶಿವ ತನ್ನ ಮೂಲ ಗುಣವನ್ನು ಬಿಡಲಿಲ್ಲ, ಪಕ್ಷಪಾತಿಯಾಗಲಿಲ್ಲ, ವಂಚನೆಗಳನ್ನು ಮಾಡಲಿಲ್ಲ, ಸ್ವಜನ ಮತ್ತು ಪರಜನ ಎಂಬ ಭೇದಭಿನ್ನತೆಯನ್ನು ರೂಢಿಸಿಕೊಳ್ಳಲಿಲ್ಲ. ಯಾವೊಂದರ ವಿಷಯಗಳಲ್ಲೂ ಸಂಪ್ರದಾಯದ ಶೃಂಖಲೆಗಳನ್ನು ಹೇರಲಿಲ್ಲ. ಹೀಗೆ ಒಂದು ವಿಶಿಷ್ಟವಾದ ತನ್ನದೇ ವ್ಯಕ್ತಿತ್ವದೊಡನೆ ಒಡಮೂಡಿಕೊಂಡೇ ದೇವನಂತೆ ಪೂಜಿತನಾದವನಾದ್ದರಿಂದ ಇವನು ಸ್ವಯಂಭು.

ಪ್ರಜಾಪತಿ ವರ್ಸಸ್ ಪಶುಪತಿ

ಇಂಥಾ ಶಿವಂದಿರ ಮೂಲವನ್ನು ಹಲವು ರೀತಿಗಳಲ್ಲಿ ಗುರುತಿಸಬಹುದಾಗಿದೆ. ಒಂದು ದ್ರಾವಿಡ ಮೂಲವಾದರೆ, ಮತ್ತೊಂದು ಟಿಬೆಟ್ (ಮಂಗೋಲಿಯನ್?) ಮೂಲ. ಎಲ್ಲಾ ಮೂಲಗಳೂ ಆರ್ಯ ಮೂಲಕ್ಕೆ ಮಾತ್ರ ಹೊಂದಿಕೆಯಾಗದೇ ಅಂತರವನ್ನು ಕಾಯ್ದುಕೊಳ್ಳುತ್ತದೆ.

ಸಮುದಾಯವು ಶ್ರೇಣೀಕೃತ ಸಮಾಜವನ್ನು ಪುರಸ್ಕರಿಸಿದರೆ, ಸಮಾಜವಾದದ ಸಮಾಜವನ್ನು ಮೂಲನಿವಾಸಿಗಳ ಗಣಸಮಾಜವು ಪ್ರತಿನಿಧಿಸುವುದು.

ಆರ್ಯಸಮಾಜದ ಪ್ರಜಾಪತಿಯು ಅಸುರರಿಗೆ, ಸುರರಿಗೆ ಮತ್ತು ನರರಿಗೆ ಎಂದು ತನ್ನ ಬೋಧನೆಯಲ್ಲಿಯೂ ಭೇದವನ್ನು ಮಾಡುತ್ತಾನೆ. ಶ್ರೇಣೀಕೃತ ಸಮಾಜದಲ್ಲಿರುವವರಿಗೆ ಅವರವರ ಸ್ಥಾನ ಮತ್ತು ವರ್ಗಗಳಿಗನುಗುಣವಾಗಿ ಪೋಷಣೆಗಳನ್ನು ನೀಡುತ್ತಾನೆ. ಅದನ್ನು ಪಾಲನೆ ಎಂದೂ ಕರೆಯುತ್ತಾರೆ. ಆದರೆ ಗಣಸಮಾಜದ ಪಶುಪತಿಯು ಬಹಳ ಮುಕ್ತವಾಗಿ ಅಸ್ತಿತ್ವದಲ್ಲಿರುವುದನ್ನೆಲ್ಲಾ ಸ್ವೀಕರಿಸುತ್ತಾನೆ ಮತ್ತು ಸನ್ನಿವೇಶಕ್ಕೆ ಅನುಗುಣವಾಗಿ ಸ್ಪಂದಿಸುತ್ತಾನೆ. ಅವನು ಯಾರನ್ನೂ ಯಾವ ಶ್ರೇಣಿಯಲ್ಲಿಯೂ ಇಡುವುದಿಲ್ಲ, ಬರಿದೇ ಇರಗೊಡುತ್ತಾನೆ.

ಭಾರತದ ಮೂಲವು ಆರ್ಯ ಸಮಾಜದ್ದಲ್ಲ. ಅದು ನಿಸ್ಸಂದೇಹವಾಗಿ ಗಣಸಮಾಜ. ಈ ಗಣಗಳ ಮೂಲಕ್ಕೆ ಹೋಗುವಾಗ ನಮಗೆ ಶಿವನ ಮೂಲವನ್ನೂ ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಶಿವನ ನೆಲೆಯನ್ನು ಹಲವು ಮೂಲಗಳಿಂದ ಅಧ್ಯಯನ ಮಾಡುವ ಅನಿವಾರ್ಯತೆ ಇದೆ. ಇದರಿಂದ ಒಂದು ಸಂಪೂರ್ಣ ಚಿತ್ರಣವನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದು ಎಂಬುದು ನನ್ನ ಭರವಸೆ.

ಸದ್ಯಕ್ಕೆ ದಾಖಲೆಯು ದೊರೆಯುತ್ತಿರುವುದರ ಆಧಾರದ ಮೇಲೆ ಸಿಂಧೂ ಸಂಸ್ಕೃತಿಗೆ ಹೋಗುವುದಾದರೂ ಅದಕ್ಕಿಂತ

ಅಭಿಪ್ರಾಯ ಪಡುತ್ತಾರೆ. ಲೆವಿಸ್ ಎಂದೋ ಫ್ಲೈಯಿಂಗ್ ಮಿಷನ್ ಎಂದೋ ಒಂದು ಬ್ರಾಂಡ್ ಲೋಗೋ ಇರುವ ಹಾಗೆ 'ಇದು ನಮ್ಮದು' ಎಂದು ಛಾಪಿಸಲು ಇರುವಂತಹ ಮೊಹರುಗಳೆಂದೂ ಕೆಲವು ಪಾಶ್ಚಾತ್ಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅವು ಚಿತ್ರಲಿಪಿಯುಕ್ತ ಶಾಸನವೋ, ಲಾಂಛನವೋ, ಮೊಹರೋ ಯಾವುದೇ ಆಗಿರಲಿ, ಅದರಲ್ಲಿ ಚಿತ್ರಗಳೂ ಮತ್ತು ಲಿಪಿಗಳೂ ಇರುವುದಕ್ಕೆ ಒಂದು ಹಿನ್ನೆಲೆಯಂತೂ ಖಂಡಿತ ಇರುತ್ತದೆ. ನಾವು ನಮ್ಮ ಪುರಾತನರನ್ನು ನಮ್ಮ ಸಂಕೇತಗಳಲ್ಲಿ ಬಳಸುವಂತೆ, ಅವರು ತಮ್ಮ ಪುರಾತನರರನ್ನು ತಮ್ಮ ಲಾಂಛನಗಳಲ್ಲಿ ಬಿಂಬಿಸಿಕೊಂಡಿರುವ ಸಾಧ್ಯತೆಯಿದೆ ಅಥವಾ ಸಮಕಾಲೀನ ವಿದ್ಯಮಾನದ ಸಂಕೇತವೂ ಅದಾಗಿರಬಹುದು.

ಹಿಂದೂಗಳೇ ಅಲ್ಲದ ಹಿಂದೂತ್ವವಾದಿಗಳು

ಸಿಂಧೂ ಬಯಲಿನ ನಾಗರಿಕತೆಯನ್ನು ಗುರುತಿಸಿಕೊಂಡು ಸಿಂಧೂ ಸಂಸ್ಕೃತಿ ಅಥವಾ ಸಿಂಧೂ ನದಿ ದಡದ ಭೌಗೋಳಿಕ ಪ್ರದೇಶದಲ್ಲಿರುವವರನ್ನು ಸ್ವರದೋಷದಿಂದಾಗಿ ಹಿಂದೂ ಎಂದು ಕರೆಯುವುದಾದರೆ, ಆರ್ಯರು ಮತ್ತು ವೈದಿಕರು, ಬ್ರಾಹ್ಮಣಾಧಿಕ್ಯದ ಮನುವಾದಿಗಳು, ಅವರನ್ನು ಮತ್ತು ಅವರ ಸಿದ್ಧಾಂತವನ್ನು ಬೆಂಬಲಿಸುತ್ತಾ ಇರುವ ಹಿಂದೂತ್ವ ವಾದಿಗಳಾರೂ ಹಿಂದೂಗಳೇ ಅಲ್ಲ!! ಧಾರ್ಮಿಕ ಸಂಸ್ಕೃತಿಯ ಅಮಲೇರಿಸಿಕೊಂಡು ಹಿಂದೂ ಎಂದು ಕರೆದುಕೊಳ್ಳುತ್ತಿರುವ







ಪೌರಾಣಿಕವಾಗಿ ಈತನ ಹಿನ್ನೆಲೆಯನ್ನು ಹುಡುಕುವುದು ಅಷ್ಟೇನೂ ಔಚಿತ್ಯವೂ ಅಲ್ಲ, ಅಲ್ಲಿ ಅಂತದ್ದೇನೂ ಇಲ್ಲವೂ ಇಲ್ಲ. ಆದರೆ, ಸಾಂಸ್ಕೃತಿಕವಾಗಿ, ಮಾನವಶಾಸ್ತ್ರೀಯವಾಗಿ, ಐತಿಹಾಸಿಕವಾಗಿ ಒಂದಿಷ್ಟು ಹಿಂಬದಿಗೆ ಕ್ರಮಿಸಿದರೆ ಕುತೂಹಲಕರವಾಗಿರುವಂತಹ ಅಂಶಗಳು ತೆರೆದುಕೊಳ್ಳುತ್ತಾ ಹೋಗುವವು.

ಶಿವನ ಇನ್ನೂ ಒಂದು ಆಸಕ್ತಿಕರವಾದ ಗುಣವನ್ನು ಗಮನಿಸಬಹುದು. ಅದೇಂದರೆ, ಈತ ವ್ಯಕ್ತಿತ್ವದ ಪ್ರಕಾರ ಸಮಾಜವಾದಿಯಾಗಿದ್ದರೂ, ಶಿಷ್ಟ ಸಮಾಜದ ಪ್ರತಿನಿಧಿ ಅಲ್ಲ. ಈತನ ಸಮಾಜವಾದವನ್ನು ಶಿಷ್ಟ ಸಮಾಜದ ಸಮೂಹದಿಂದ ಬಹಳ ಎಚ್ಚರಿಕೆಯಿಂದ ಹೊರತುಪಡಿಸಿ ನೋಡಬೇಕು.

ಶಿಷ್ಟಸಮಾಜವನ್ನು ಪ್ರತಿನಿಧಿಸುವವರು ಸಮಾಜವಾದಿಗಳಾಗಿರಲಾರರು. ಶಿಷ್ಟತೆಯ ಗೀಳೇ ಅವರನ್ನು ಸಮಾಜಕ್ಕೆ ವಿಮುಖರನ್ನಾಗಿ ಮಾಡುತ್ತದೆ. ಆದರೂ ಅವರು ಶಿಷ್ಟತೆಯನ್ನು ವ್ಯಕ್ತಿಗೆ ಆರೋಪಿಸುವುದು ಸಮಾಜದ ಕಾರಣಕ್ಕಾಗಿಯೇ.

ಆರ್ಯರ ಪ್ರತಿನಿಧಿಯಾಗಿರುವ ದಕ್ಷ ತನ್ನನ್ನು ಪ್ರಜಾಪತಿಯೆಂದೂ, ಶಿವನನ್ನು ಪಶುಪತಿಯೆಂದೂ ಅವಹೇಳನ ಮಾಡುವ ಉಲ್ಲೇಖಗಳಿವೆ ಪುರಾಣಗಳಲ್ಲಿ. ಇದು ಸಹಜ. ಶಿಷ್ಟ ಸಮಾಜದ ಪರಿಕಲ್ಪನೆಯೇ ಬೇರೆ. ಸಮಾಜವಾದದ ಪರಿಕಲ್ಪನೆಯೇ ಬೇರೆ. ಇಬ್ಬರೂ ಒಂದೇ ಹೆಸರಿನಿಂದ ಕರೆಯುವ ಸಮಾಜವು ಬೇರೆ ಬೇರೆ ರೀತಿಗಳಲ್ಲಿವೆ.

ಸರ್ವರಿಗೂ ಸಮಪಾಲು, ಸಮಬಾಳು ಎನ್ನುವ ಸಮಾಜವೊಂದಾದರೆ, ನಿರ್ದಿಷ್ಟ ಶ್ರೇಣೀಕೃತ ವ್ಯವಸ್ಥೆಯನ್ನು ಒಪ್ಪಿಕೊಂಡು ಅದರ ಕ್ರಮಕ್ಕೆ ಭಂಗತಾರದೇ ಶಿಷ್ಟರೀತಿಯಲ್ಲಿ ಒಪ್ಪಿಕೊಂಡು ನಡೆದುಕೊಳ್ಳುತ್ತಾ ಹೋಗುವುದು ಒಂದು ಸಮಾಜ. ಇದರಲ್ಲಿ ಮೊದಲನೆಯದು ಸಮಾಜವಾದದಾದರೆ, ಎರಡನೆಯದೇ ಶ್ರೇಣೀಕೃತ ಸಮಾಜ. ಆರ್ಯ

ಮುನ್ನಿನ ಸಂಸ್ಕೃತಿಯೊಂದು ಇತ್ತು ಎಂಬುದು ನಿರ್ವಿವಾದ. ಏಕೆಂದರೆ, ಸಿಂಧೂ ಸಂಸ್ಕೃತಿಯು ಅದೆಷ್ಟೇ ಇಂದಿಗೆ ಪುರಾತನವಾಗಿದ್ದರೂ ಅದು ಅಂದಿಗೆ ಒಂದು ಭವ್ಯ ನಾಗರಿಕತೆಯ ಪ್ರತಿಷ್ಠಾಪನೆಯಾಗಿತ್ತು. ಯಾವುದೇ ಒಂದು ವಿಕಸಿತ ನಾಗರಿಕತೆಯು ತನ್ನ ಶೈಶವಾವದಿ ಹಲವು ಅವಸ್ಥೆಗಳನ್ನು ದಾಟಿಕೊಂಡು ಬಂದು ಮುಂದುವರಿದ ನಾಗರಿಕತೆಯಾಗಿರುತ್ತದೆ.

ಸಿಂಧೂ ನಾಗರಿಕತೆಯಲ್ಲಿ ದೊರಕಿರುವ ಅನೇಕಾನೇಕ ಮೊಹರುಗಳಲ್ಲಿ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ನಿಸರ್ಗಕ್ಕೆ ಸಂಬಂಧಿಸಿದ್ದಂತೆಯೇ ಇದ್ದು ಇವುಗಳಲ್ಲಿರುವ ಚಿತ್ರಲಿಪಿಯನ್ನು ಅನೇಕಾನೇಕ ರೀತಿಯಲ್ಲಿ ಓದಲು ಯತ್ನಿಸಿದರೂ ಇಂದಿಗೂ ಇಂದು ನಿಗೂಢವಾಗಿಯೇ ಇದೆ.

ಶಿವನ ಮೂಲವನ್ನು ಹುಡುಕುತ್ತಾ ಈ ಸಿಂಧೂ ಬಯಲಿನ ನಾಗರಿಕತೆಯ ಮೂಲಕ್ಕೆ ಹೋಗುವ ಕಾರಣವೇನೆಂದರೆ ಪಶುಪತಿಯ ಮೊಹರು. ಗಣಸಮಾಜದ ಬಗ್ಗೆ ಸೂಚನೆಗಳನ್ನು ಕೊಡುವಂತೆ ವೃಷಭ, ಹುಲಿಯೇ ಮೊದಲಾದ ಚಿತ್ರಗಳು ಅನೇಕ ಮೊಹರುಗಳಲ್ಲಿ ಚಿತ್ರಲಿಪಿಗಳಿವೆ. ಇವುಗಳು ನಮಗೇನೋ ಹೇಳುತ್ತಿವೆ. 'ದ ಹಿಂದೂಸ್ - ಆ್ಯನ್ ಆಲ್ಟರ್ನೇಟಿವ್ ಹಿಸ್ಟರಿ'ಯ ಕರ್ತೃ ವೆಂಡಿ ಡೊನಿಗರ್ ಹೇಳುವಂತೆ ಸಿಂಧೂ ನಾಗರಿಕತೆಯು ಮೌನವಾಗಿಲ್ಲ, ಬದಲಿಗೆ ನಮ್ಮ ಕಿವಿಗಳು ಕಿವುಡಾಗಿವೆ. ನಾನು ಇನ್ನೂ ಮುಂದುವರಿದು ಹೇಳುತ್ತೇನೆ ಕುರುಡೂ ಆಗಿದ್ದೇವೆ ಎಂದು. ಒಂದು ಅಭಿವ್ಯಕ್ತಿಯನ್ನು ಓದಲು ನಮ್ಮ ಸಿದ್ಧ ಭಾಷಾ ಮಾದರಿಗಳನ್ನು ಮೀರಿದ ಗ್ರಹಣಶಕ್ತಿ ನಮ್ಮಲ್ಲಿರಬೇಕು ಎಂದು ನನ್ನ ಅಭಿಪ್ರಾಯ. ಮೊಹರುಗಳಲ್ಲಿರುವ ಚಿತ್ರಲಿಪಿಗಳನ್ನು ಎಷ್ಟೋ ಮಂದಿ ವಿದ್ವಾಂಸರು ಇಂಡೋ-ಯುರೋಪಿಯನ್ ಭಾಷೆ ಎಂದೋ, ದ್ರಾವಿಡ ಭಾಷೆ ಎಂದೋ, ಮುಂಡ ಸಂಸ್ಕೃತಿಯ... ... ಭಾಷೆಯೆಂದೋ, ಅಥವಾ ಅದು ಭಾಷೆಯೇ ಅಲ್ಲವೆಂದೋ

ಇಂದಿನ ಜನ ತಾವು ಈ ನೆಲದ ಸಂಸ್ಕೃತಿಯನ್ನೇ ಧಿಕ್ಕರಿಸುತ್ತಿದ್ದೇವೆ, ಅನ್ಯ ಸಂಸ್ಕೃತಿಯ ಶೋಷಣೆಯ ಹಿಡಿತದಲ್ಲಿ ಸಿಕ್ಕಿಕೊಂಡು ಬರಿಯ ಹೆಸರನ್ನಷ್ಟೇ ಕೂಗುತ್ತಿದ್ದೇವೆ ಎಂಬ ಅರಿವೇ ಇಲ್ಲವೆಂದು ಭಾವಿಸುತ್ತೇನೆ. ಇಂದಿನ ಹಿಂದೂತ್ವದ ಭಾವನೆಯನ್ನು ಯಾರು ಪುಟದೇಳಿಸಲು ಪ್ರಚೋದಿಸುತ್ತಿದ್ದಾರೋ ಅವರು ಮೂಲ ಹಿಂದೂ ಸಂಸ್ಕೃತಿಯ ವಿರೋಧಿಗಳೇ ಆಗಿದ್ದಾರೆ. ಇಂಥದ್ದೊಂದು ನಮ್ಮ ಧಾರ್ಮಿಕತೆಯಲ್ಲಿ, ಸಾಮಾಜಿಕ ವ್ಯವಸ್ಥೆಯಲ್ಲಿರುವುದೇ ಒಂದು ವಿಪರ್ಯಾಸ ಮತ್ತು ವ್ಯಂಗ್ಯ.

ಅದೇನೇ ಇರಲಿ ಗಣಸಮಾಜವನ್ನು ಪ್ರತಿನಿಧಿಸುವಂತಹ ಪ್ರಾಣಿಲಾಂಛನಗಳು ಅವು ಎಂದು ನಾವು ಭಾವಿಸಿದರೆ, ಭೌಗೋಳಿಕವಾಗಿ ಭಾವಿಸಲಾದ ಸಿಂಧೂ ಸಂಸ್ಕೃತಿಯ ಮೂಲ ಸಂಸ್ಕೃತಿಯನ್ನು ಗುರುತಿಸುವ ಪ್ರಯತ್ನಗಳು ನಡೆದಿವೆ. ಸಿಂಧೂ ಸಂಸ್ಕೃತಿಯೇ ಗೋಂಡ್ವಾನ ಸಂಸ್ಕೃತಿಯೆಂದೂ, ಗೊಂಡಿ ಭಾಷೆಯಿಂದ ಸಿಂಧು ರಹಸ್ಯ ಲಿಪಿಯ ಶೋಧವನ್ನು ಮಾಡಿ ಓದಿರುವ ವಿದ್ವಾಂಸರೆಂದರೆ ಮೊ.ಛಕಂಗಾಲಿಯವರು. ಸೈಂಧವಿ ಲಿಪಿ ಕಾ ಗೊಂಡಿಮೆ ಉದ್‌ವಾಚನ ಎಂಬ ಅವರ ಕೃತಿಯನ್ನು ಡಾ.ಕೆ.ಬಿ.ಬ್ಯಾಳಿಯವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇದರಲ್ಲಿ ಹಿಂದೂಗಳು ಯಾರೆಂಬುದಕ್ಕೂ, ಗೊಂಡಿ ಭಾಷೆಯ ಓದನ್ನೂ, ಸಿಂಧು ಲಿಪಿಗೂ ಮತ್ತು ಅದಕ್ಕೂ ಇರುವ ಸಂಬಂಧ ಮತ್ತು ಇತರ ಭಾಷೆಗಳೊಡನೆ ಇರುವಂತಹ ವಿಸ್ತಾರಗಳನ್ನೂ ವಿವರಿಸುತ್ತಾರೆ. ಅದೇ ರೀತಿಯಲ್ಲಿ ಎಂ.ಆರ್.ಪಂಪನಗೌಡ ಸಂಪಾದಿಸಿರುವ ಗೊಂಡ್ವಾನ ಸಂಸ್ಕೃತಿಯಲ್ಲಿ ಶಿವನ ಪರಂಪರೆಯನ್ನು ಗುರುತಿಸುವುದರ ಜೊತೆಗೆ ಶಿವನ ವಂಶಜರು ಎಂದು ಹೇಳಿಕೊಳ್ಳುವವರನ್ನೂ ಗುರುತಿಸುತ್ತಾರೆ.

ಶಿವನ ಇತಿಹಾಸ ಮತ್ತು ಶಿವಂದಿರ ಪರಂಪರೆ ಬಹಳ ಕುತೂಹಲಕರವಾದಂತಹ ಅಧ್ಯಯನ ವಿಚಾರ. ಅದನ್ನು ಮುಂದೆ ನೋಡೋಣ. ■

'ಸ್ವಚ್ಛ ಭಾರತ್' ಎಂಬ ಮತ್ತೊಂದು ಪ್ರಹಸನ




ಮೊನ್ನೆ ಗಾಂಧಿ ಜಯಂತಿಯಂದು ಮತ್ತೊಂದು ಹೊಸಾ ಗಿಮಿಕ್ ಶುರುಮಾಡಿದೆ ಮೋದಿ ಸರ್ಕಾರ. ಆಷಾಢಭೂತಿತ ನದ ಪರಮಾವಧಿ ಎಂದು ಕರೆಯಬಹುದಾದ ಈ 'ಸ್ವಚ್ಛ ಭಾರತ್' ಎಂಬ ಬಹುಕೋಟಿಗಳ ಪ್ರಹಸನದಲ್ಲಿ ಮಂತ್ರಿ ಮಹೋದಯರಾದಿಯಾಗಿ ಎಲ್ಲರೂ ಗರಿಗರಿಯಾದ ಬಟ್ಟೆ ಧರಿಸಿ ಪೊರಕೆ ಹಿಡಿದು ಪೋಸ್ ಕೊಟ್ಟಿದ್ದೇ ಕೊಟ್ಟಿದ್ದು! ಆದರೇನು, ಸ್ವಚ್ಛ ಭಾರತ್‌ನ ಸೂರ್ಯ ಮುಳುಗುವುದರೊಳಗಾಗಿ ಖಾಲಿ ಹಾಗೂ ಕಸದ ಪೊಟ್ಟಣಗಳನ್ನು ಎಲ್ಲೆಂದರಲ್ಲಿ ಬಿಸಾಕುವ, ತಾಂಬೂಲ ಪಿಚಕ್ಕನೆ ಉಗಿಯುವ, ಬೀದಿಗಳಲ್ಲಿ ಉಚ್ಚೆ ಉಯ್ಯುವ, ರೈಲು ಹಳಿಗಳ ಮೇಲೆ ಶೌಚಕ್ರಿಯೆ ಪೂರೈಸುವ ಅದೇ ಚಟಗಳು ಯಥಾಪ್ರಕಾರ ಪುನರಾರಂಭವಾಗಿವೆ. ರಸ್ತೆ ಬದಿ ಟನ್‌ಗಟ್ಟಲೆ ಕಸದ ರಾಶಿ ಬೀಳತೊಡಗಿದೆ. ಈ ಸಂದರ್ಭದಲ್ಲಿ ಗಾಂಧಿ ಹಾಗೂ ಮೋದಿಯ ತವರೂರಿಗೊಂದು ಭೇಟಿ ಕೊಟ್ಟು "ಗುಜರಾತ್ ಮಾದರಿ" ಸ್ವಚ್ಛತೆ ಬಗ್ಗೆ ಅರಿತುಕೊಳ್ಳುವುದರಿಂದ ಜ್ಞಾನದ ಅಭಿವೃದ್ಧಿ ಆಗಲಿರುವುದು ಗ್ಯಾರಂಟಿ. ಬನ್ನಿ ಒಂದು ರೌಂಡ್ ಹಾಕಿಕೊಂಡು ಬರೋಣ.

ಸದ್ಯ ದೇಶದ ಪ್ರಧಾನಿಯಾಗಿರುವ ಮೋದಿ ಕಳೆದ ಸುಮಾರು 12 ವರ್ಷಗಳ ಕಾಲ ಇದೇ ಗುಜರಾತಿನ ಮುಖ್ಯಮಂತ್ರಿಯಾಗಿದ್ದವನು. "ನಿರ್ಮಲ ಗುಜರಾತ್" ಎಂಬ ಅಭಿಯಾನ ಆರಂಭಿಸಿದವನು. ಹಾಗಾಗಿ ನಮ್ಮ ಟೂರ್‌ಅನ್ನು ರಾಜಧಾನಿ ಗಾಂಧಿನಗರದಿಂದಲೇ ಆರಂಭಿಸುವುದು ಸೂಕ್ತವೆನಿಸುತ್ತದೆ. ಸೆಕ್ಟರ್ 9ರ ಕಡೆಗೆ ಹೆಜ್ಜೆ ಹಾಕೋಣ. ಇಲ್ಲಿವೆ ನಳನಳಿಸುವ ಸರ್ಕಾರಿ ಬಂಗಲೆಗಳು. ವಿವಿಐಪಿಗಳು ವಾಸಮಾಡುವ ಈ ಜಾಗದ ಹಿಂದಿನ ಸಾಲಿಗೆ ಹೋದರೆ ನಮಗೆದುರಾಗುವುದು ತುಂಬಿ ತುಳುಕುತ್ತಿರುವ ಕಸದ ತೊಟ್ಟಿಗಳು, ಎಲ್ಲೆಡೆ ಮುಕ್ತವಾಗಿ ಅಡ್ಡಾಡುತ್ತಿರುವ ಗೋವುಗಳು ಮತ್ತು ವಿಷಯುಕ್ತ ಹೊಗೆ ಕಾರುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯದ ಗುಪ್ಪೆಗಳು. ಘೋಷಣೆಗಳ ಪ್ರಕಾರ ಗಾಂಧಿನಗರ "ಪ್ಲಾಸ್ಟಿಕ್ ಮುಕ್ತ." ಆದರೆ ಹೆಚ್ಚಿನ ಮೋರಿಗಳೆಲ್ಲ ಬ್ಲಾಕ್ ಆಗಿರುವುದೇ ಪ್ಲಾಸ್ಟಿಕ್ ಕಸದಿಂದ. ಸೆಕ್ಟರ್ 9ರಲ್ಲಿ ಗುಜರಾತ್ ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿಯೂ ಇದೆ. ಕಚೇರಿ ಎದುರುಗಡೆ ಎಲ್ಲವೂ ಸ್ವಚ್ಛವೋ ಸ್ವಚ್ಛ. ಆದರೆ ಹಿಂದುಗಡೆ ಹೋದರೆ ಗಟಾರ ಉಕ್ಕಿ ವಠಾರದ ರೊಚ್ಚೆಲ್ಲ ಹೊರಕ್ಕೆ ಹರಿಯುತ್ತಿರುವುದನ್ನು ಕಾಣಬಹುದು. ಇದು ಇವತ್ತು ನಿನ್ನೆಯ ವಿದ್ಯಮಾನವಲ್ಲ. ಕಳೆದ ಒಂದು ವರ್ಷದಿಂದಲೂ ಇಲ್ಲಿನ ಮತ್ತು ಪಕ್ಕದ ಸೆಕ್ಟರ್ 8ರ ಗಣ್ಯರು ದಿನಾ ಮೂಗು ಮುಚ್ಚಿಕೊಂಡೇ ನಡೆದಾಡುತ್ತಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿ ಕಚೇರಿಗೆ ತಾಗಿಕೊಂಡೇ ಇದೆ ರಾಜ್ಯದ ಆಡಳಿತ ಕಚೇರಿಯ ಕಟ್ಟಡ. ಮುಖ್ಯಮಂತ್ರಿ ಮೋದಿಯ ರಾಜ್ಯ ಮಟ್ಟದ "ನಿರ್ಮಲ ಗುಜರಾತ್" ಅಭಿಯಾನ ಆರಂಭಗೊಂಡಿದ್ದು ಇಲ್ಲಿಂದಲೆ. ಈ ಆಡಳಿತ ಕಚೇರಿಯ ಹಿಂದೆ ಒಂದಾನೊಂದು ಕಾಲದ ಒಂದು ಸಣ್ಣ ಕಾಡು. ಅದೀಗ ಕಟ್ಟಡ ನಿರ್ಮಾಣ ತ್ಯಾಜ್ಯದಿಂದ ತುಂಬಿದೆಯಲ್ಲದೆ ಬಯಲು ಶೌಚಾಲಯವೂ ಆಗಿದೆ.

ಬೆಂಗಳೂರಿಗೆ ಮಂಡೂರು ಹೇಗೋ ಹಾಗೆ ಅಹಮದಾಬಾದಿಗೆ ಪಿರಾನಾ. ಅಹಮದಾಬಾದಿನಲ್ಲಿ ದಿನವೊಂದರ ಉತ್ಪಾದನೆಯಾಗುವ 4200 ಟನ್ ತ್ಯಾಜ್ಯವನ್ನೆಲ್ಲ ಪಿರಾನಾದಲ್ಲಿ ಸುರಿಯಲಾಗುತ್ತಿದೆ. ಆದರೆ ದಿನಕ್ಕೆ ಬರೀ 1800 ಟನ್‌ಗಳಷ್ಟು ಮಾತ್ರ ವಿಲೇವಾರಿ ಮಾಡಲು ಸಾಧ್ಯವಾಗುತ್ತಿದೆ. ಪರಿಣಾಮವಾಗಿ ಪಿರಾನಾದ ಬೃಹತ್ತಾದ ತಿಪ್ಪೆಗುಂಡಿಯಲ್ಲಿ ಕೋಟಿಗಟ್ಟಲೆ ಟನ್ ತ್ಯಾಜ್ಯ ರಾಶಿಯಾಗಿದೆ. ನೀರಿನ ವಿಷಯಕ್ಕೆ ಬಂದರೆ ಒಂದು ಅಧ್ಯಯನದ ಪ್ರಕಾರ ಅಹಮದಾಬಾದಿನಲ್ಲಿ ದಿನವೊಂದರ 39 ಕೋಟಿ ಲೀಟರ್‌ನಷ್ಟು ನೀರು ಪೋಲಾಗುತ್ತಿದೆ. ಇದು ಸದ್ಬಳಕೆಯಾಗಿದ್ದರೆ 22.16 ಲಕ್ಷ ಜನರಿಗೆ ಸಾಕಾಗುವಷ್ಟು ನೀರು ಸಿಗುತ್ತಿತ್ತು. ಇನ್ನು ನಗರ ಮಧ್ಯದಲ್ಲಿ ಹರಿಯುವ ಸಬರ್ಮತಿ ನದಿಯ ಮಾಲಿನ್ಯದ ಮಟ್ಟ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ವಿಧಿಸಿರುವ ಮಿತಿಗಳನ್ನು ಮೀರಿ ಅಪಾಯಕಾರಿ ಸ್ಥಿತಿಗೆ ತಲುಪಿದೆಯೆಂದು ಹೇಳುತ್ತದೆ ಪರ್ಯಾವರಣ್ ಮಿತ್ರ ಎಂಬ ಸಂಸ್ಥೆಯ ವರದಿ. ಆದರೆ ಮೋದಿ ಬೂಸಿಯ ಮೋಡಿ ಎಷ್ಟಿದೆಯೆಂದರೆ ಮೊನ್ನೆ ಮೇ ತಿಂಗಳಲ್ಲಿ ಮೋದಿ ಮಂತ್ರಿಮಂಡಲದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಬಂದಿದ್ದ ಪಾಕ್ ಪ್ರಧಾನಿ ನವಾಜ್ ಷರೀಫ್ ಕೂಡ ಅದನ್ನು ನಂಬಿಬಿಟ್ಟಿದ್ದ. ಪಾಕಿಸ್ತಾನದ ಲಾಹೋರ್ ನಗರದಲ್ಲಿರುವ ರಾವಿ ನದಿಯನ್ನೂ ಇದೇ "ಸಬರ್ಮತಿ ಮಾದರಿ"ಯಲ್ಲಿ ಶುದ್ಧಗೊಳಿಸಲು ಬಯಸಿದ ಆತ ಒಂದು ನಿಯೋಗವನ್ನು ಗಾಂಧಿನಗರಕ್ಕೆ ಕಳುಹಿಸಿದ. ಆದರೆ ಸಬರ್ಮತಿ ನೀರಲ್ಲಿ ತೇಲುವ ಪಾಚಿ ಮತ್ತು ಕೊಳೆತ ತ್ಯಾಜ್ಯವನ್ನು ನೋಡಿದ ನಿಯೋಗದ ಸದಸ್ಯರಿಗೆ ಷಾಕ್ ಆಗಿದೆ. ಅವರು ಬಂದ ದಾರಿಯಲ್ಲೇ ಸದ್ದಿಲ್ಲದೆ ವಾಪಸ್ಸಾಗಿದ್ದಾರೆ!

ಬೂಸಿ ಬಸ್ಯ... ಮೋದಿ! 41



ಗಾಂಧಿಯ ಹುಟ್ಟೂರಾದ ಪೋರ್‌ಬಂದರ್‌ನಲ್ಲಿ ... ಹೋದರೂ ರಾಶಿ ರಾಶಿ ಪ್ಲಾಸ್ಟಿಕ್ ತ್ಯಾಜ್ಯ. ಇದರ ಪ್ರಮ... ಎಷ್ಟಿದೆಯೆಂದರೆ ಪಕ್ಕದ ಊರಾದ ದೋರಾಜಿ ಒಂ... ಗುಡಿಕೈಗಾರಿಕೆಯ ಕೇಂದ್ರವೇ ಆಗಿಬಿಟ್ಟಿದೆ. ... ಪೋರ್‌ಬಂದರ್‌ನ ಪ್ಲಾಸ್ಟಿಕ್ ತ್ಯಾಜ್ಯ ಬಳಸಿ ಬಡವರಿಗ... ಅಗ್ಗ ದರದ ಪ್ಲಾಸ್ಟಿಕ್ ವಸ್ತುಗಳನ್ನು ಉತ್ಪಾದಿಸಲಾಗು...

ಈಗ ಮೋದಿಯ ಹಳೆ ಚುನಾವಣಾ ಕ್ಷೇತ್ರ... ಮಣಿನಗರವನ್ನು ನೋಡಿಬರೋಣ. ಗಾಂಧಿಗಳ ಅಮ... ಕ್ಷೇತ್ರದ ಹಾಗಿರುವ ಮಣಿನಗರಕ್ಕೂ ಮೋದಿ ಇರುವ... ಕಾಲ ಅತಿಯಾದ ಗಮನ, ಅತಿಯಾದ ಸವಲತ್ತು... ದೊರೆತಿವೆ. ಯಾರೇನೇ ದೂರು ನೀಡಿದರೂ ತ... ಕೈಗೆತ್ತಿಕೊಂಡು ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿತ್ತು. ಅ... ಮೋದಿ ಯಾವತ್ತು ದಿಲ್ಲಿಗೆ ವರ್ಗಾವಣೆಗೊಂಡನ... ಆವತ್ತಿನಿಂದ ಮಣಿನಗರವನ್ನು ಕೇಳುವವರಿಲ್ಲವೆಂದಾ... ಈ ಬಾರಿಯ ಮಳೆಗಾಲದಲ್ಲಿ ಮಹಾಪೂರ ಬ... ಜನಸಾಮಾನ್ಯರೆಲ್ಲ ಅಪಾರ ಸಂಕಟ ಅನುಭವಿಸಬೇ... ಬಂದಿತ್ತು. ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಬೀದಿಗಿ... ಪ್ರತಿಭಟಿಸಿದ ಜನ ಇನ್ನು ಮುಂದೆ ಬಿಜೆಪಿಗೆ ... ಹಾಕದಿರಲು ನಿರ್ಧರಿಸಿದ್ದಾರೆ. ವಾಸ್ತವ ಹೀಗೆಲ್ಲ ಇರು... ಮೋದಿ ಸರ್ಕಾರವನ್ನು ಸುಪ್ರೀಂ ಕೋರ್ಟು ಕುಂಭಕ... ರಿಪ್ ವ್ಯಾನ್ ವಿಂಕಲ್ ಎಂದು ಬಣ್ಣಿಸಿರುವುದ... ಆಶ್ಚರ್ಯವೇನು ಬಂತು!

(ಆಧಾರ: ಔಟ್‌ಲುಕ್, 13.10.20...

ಕಟು ಭಾಷಾ ಬಳಕೆಯ ಸಾಂದರ್ಭಿಕ ಅನಿವಾರ್ಯತೆ


ಕೋಟ್ಯಾನುಕೋಟಿ ಬೇಷರತ್ತಿನ ಪ್ರೀತಿ ತೋರುವ ಅನುಯಾಯಿಗಳನ್ನು ಹೊಂದಿರುವ ಶ್ರೀ ಶ್ರೀ ನಾಗೇಶ್ವರ ಸ್ವಾಮಿಗಳ ಬಗ್ಗೆ ಯಾವುದೋ ಚಿಲ್ಲರೆ ಕಳ್ಳ ಕಾಕನೊಬ್ಬನ ಬಗ್ಗೆ ಬರೆದಂತೆ ಬರೆದಿರುವ ತಮ್ಮ ಪತ್ರಿಕೆಯ ಬಗ್ಗೆ ತೀವ್ರ ಅಸಮಾಧಾನ ತೋರಿದವರಿದ್ದಾರೆ. (??) ಆ ಕುರಿತಾಗಿ ಈ ಬರಹ.

ಯಾವುದೇ ದಿಕ್ಕಿನಿಂದ ನೋಡಿದರೂ ಶ್ರೀ ನಾಗೇಶ್ವರರಿಗೂ ಲಂಕೇಶ್ ಬಳಗಕ್ಕೂ ವೈಯಕ್ತಿಕವಾದ ಪ್ರಾಚೀನ ದ್ವೇಷವೇನೂ ಇದ್ದಂತಿಲ್ಲ. 'ಲಂಕೇಶ್'ನಲ್ಲಿ ಪ್ರಕಟಗೊಳ್ಳುವ ಲೇಖನಗಳ ಶೈಲಿಯೇ ಬಹುತೇಕ ಲೇವಡಿಯ ಧಾಟಿಯಲ್ಲಿರುತ್ತದೆಯೇ ವಿನಃ ನಾಗೇಶ್ವರರಿಗಾಗಿಯೇ ಹಟತೊಟ್ಟಂತೆ ಕೆಟ್ಟ ಪದಪುಂಜಗಳನ್ನು ಬಳಸಿದ ವಿಶೇಷ ಲೇಖನಗಳು ಲಂಕೇಶ್‌ನಲ್ಲಿ ಪ್ರಕಟಗೊಂಡಿಲ್ಲ. ಒಂದು ವೇಳೆ 'ಸುಧಾ', 'ತರಂಗ'ದಂತೆ ಕಡುತನವಿಲ್ಲದ ಸಭ್ಯಪದಗಳಿರುವ ಲೇಖನಮಾಲೆ 'ಲಂಕೇಶ್'ನಲ್ಲೂ ಶುರುವಿಟ್ಟುಕೊಂಡರೆ ಪತ್ರಿಕೆಯ ಪ್ರಸಾರ ಅರ್ಧಕ್ಕರ್ಧ ಕುಸಿಯುವುದು ಖಂಡಿತ. ಯಾಕೆಂದರೆ, ಲಂಕೇಶ್‌ನಂತಹ ಪತ್ರಿಕೆ ಹುಟ್ಟಿ ಬೆಳೆದದ್ದೇ ಕೆಲ ಸಾಮಾಜಿಕ ಮಿಥ್ಯೆಗಳನ್ನು ಒಡೆಯುವಂತಹ ಪ್ರಕ್ರಿಯೆಗಳ ಮೂಲಕ. ಇಂತಹ ಹೈ ಪ್ರೊಫೈಲ್ ಕೇಸುಧಾರಿಗಳನ್ನು ಸಾಮಾಜಿಕ ಮರ್ಜಿಗೊಳಪಟ್ಟು ಅವರು ಇವರು ಎನ್ನುವ ಬದಲು ಹಿಗ್ಗಾಮುಗ್ಗ ಲೇವಡಿಗೊಳಪಡಿಸುವುದೂ ಕೂಡ ಅದರಲ್ಲೊಂದು ಎಂಬುದಿಲ್ಲಿ ಗಮನಾರ್ಹ.



"...ಸಿದವಳು ಯಾರೆಂದರೆ ಮಾಸಲು ಸೀರೆಯವಳು" ಎಂಬ ಹಳ್ಳಿ ಗಾದೆಯಂತೆ ಬಡವ, ಸಿರಿವಂತ, ಮೇಲ್ಜಾತಿಯವ, ಕೀಳ್‌ಜಾತಿಯವ, ಸ್ವಾಮೀಜಿ, ರಾಜಕಾರಣಿಗಳ ಅಂತಸ್ತಿಗೆ ತಕ್ಕಂತೆ ಅವರನ್ನು ಅಳೆಯುವ ಹಾಗು ಅವರ ಕುರಿತು ಅವರವರಿಗೆ ಹೊಂದಿಕೊಳ್ಳುವಂತೆ ಬರೆಕೊಳ್ಳುವ (ಆತ ಕಳ್ಳ ಕೊಲೆಗಾರನೆಂದೇ ಇದ್ದರೂ ಕೆಲವರ ಮಟ್ಟಿಗೆ ಏಕವಚನ ಪ್ರಯೋಗ ಸುತಾರಾಂ ಇಲ್ಲವೇ ಇಲ್ಲ. ಮುಳಿಯ ಬ್ರಾಹ್ಮಣ ಕುಟುಂಬದ ಸದಸ್ಯನೊಬ್ಬ ಕೆಲವರೊಂದಿಗೆ ವಂಚನೆಯ ಆರೋಪದಲ್ಲಿ ಸಿಕ್ಕಿಹಾಕಿಕೊಂಡಾಗ ಆತನನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಪೊಲೀಸರೊಂದಿಗೆ ಫೋಟೋ ತೆಗೆಸಲಾಗಿತ್ತು ಬಾಕಿಯವರಿಗಾದರೆ ಬರಿ ನೆಲವೇ ಗತಿ) ಸಂದರ್ಭದಲ್ಲಿ ಆ ಸಂಪ್ರದಾಯವನ್ನು ದೊಡ್ಡ ಮಟ್ಟದಲ್ಲಿ ಮುರಿದು ಹೊಸ ಚಿಂತನೆಗೆ ನಾಂದಿ ಹಾಡಿದ್ದು ನಮ್ಮ ಲಂಕೇಶ್ ಮೇಷ್ಟ್ರು. ರಾಜಕಾರಣಿಗಳ ದೇವಮಾನವರ ವಿರುದ್ಧ ಬರೆಯುವುದೇ ಕಷ್ಟವಿದ್ದ ಆ ಪಾಳೇಗಾರಿಕೆಯ ಕಾಲದಲ್ಲಿ ಅವರನ್ನು ಏಕವಚನದಲ್ಲಿ ಕರೆಯುತ್ತಾ ಡೋಂಗಿ, ಕಳ್ಳ, ಸುಳ್ಳ, ಬಂ, ಗುಂ, ಇಂ ಎಂದು ಜರೆದು ವಿಚಿತ್ರವಾದ ಹೆಸರನ್ನಿಟ್ಟು ಇದೂ ಸಾಧ್ಯವಿದೆ ಎಂದು ಜನರಲ್ಲಿ ಮನದಟ್ಟು ಮಾಡಿಸಿ ಹೊಸ ಎಚ್ಚರಿಸುವ ಸಂಪ್ರದಾಯವನ್ನ ಜನರಲ್ಲಿ ಬೆಳೆಸಿ ಪಟ್ಟಭದ್ರರ ಬೆವರಿಳಿಸಿದ್ದು ಇದೇ ಲಂಕೇಶ್ ಮೇಷ್ಟ್ರು ಮತ್ತವರ ಪತ್ರಿಕೆ.


ಒಬ್ಬ ಸಾಮಾನ್ಯನಿಗೂ ಹಾಗು ಭಂಡಾತಿ ಭಂಡನಿಗೂ ಜರೆಯುವುದರಲ್ಲಿ ವ್ಯತ್ಯಾಸವಿದೆ. ಭಂಡನನ್ನು ಜರೆಯುವಾಗ ಹೆಚ್ಚು ಜೋರಾಗಿಯೂ ಹೆಚ್ಚು ಕಟುವಾಗಿಯೂ ಇಲ್ಲದಿದ್ದಲ್ಲಿ ಅದು ಅವನಿಗೆ ನಾಟುವ ಸಾಧ್ಯತೆ ಕಡಿಮೆ. ತಮ್ಮದೇ ಸುರಕ್ಷಿತ ವಲಯವನ್ನು ಕಟ್ಟಿ ಕೊಂಡಿರುವ (ಕೆಕ್ಕಾರಿನಲ್ಲಿ ಪೊಲೀಸರು ಬಂದಾಗ ಸ್ಥಳೀಯ ರಾಜಕಾರಣಿಗಳು ಹಾಗು ಶೂದ್ರ ಪಡೆ ಸ್ವಯಂಪ್ರೇರಿತವಾಗಿ ನೊಂದ ಹೆಣ್ಣೊಬ್ಬಳು ನೀಡಿದ ದೂರಿನಂತೆ ಅತ್ಯಾಚಾರದ ಆರೋಪಿಯಾಗಿರುವ ವ್ಯಕ್ತಿಯನ್ನು ಬಹಿರಂಗವಾಗಿ ರಕ್ಷಿಸಹೋಗಿಲ್ಲವೇ?) ಈ ಮೌಢ್ಯ ತುಂಬಿದ ಸಮಾಜದಲ್ಲಿ ಸುಲಭದಲ್ಲಿ ಜಗ್ಗದ ಸೋ ಕಾಲ್ಡ್ ದೇವಮಾನವರಂತವರ ಬಗ್ಗೆ ಇಲ್ಲಿ ಸ್ವಲ್ಪ ಹೆಚ್ಚು ಕಟುವಾಗಿಯೇ ವಿಮರ್ಶಿಸಬೇಕಾಗುತ್ತದೆ. ಆಗ ಕೆಲವರನ್ನಾದರೂ ಅದು ನಾಟಬಲ್ಲದು. ಸ್ವಾಮೀಜಿಗಳೆಂದರೆ ದೈವಾಂಶ ಸಂಭೂತರು ಅವರ ವಿರುದ್ಧವಾಡಿದರೆ ಶಾಪಕೊಟ್ಟಾರು ಎಂಬ ಭಯ ಭಕ್ತಿ ತೋರೋ ಜನರೇ ತುಂಬಿರುವ ಸಂದರ್ಭದಲ್ಲಿ ಒಹ್..!! ಹೀಗೂ ಸಾಧ್ಯವಿದೆ ಎಂಬ ಜಾಗೃತಿ ಹುಟ್ಟಲು ಹಾಗು ಪೂರ್ವ ನಿರ್ಧರಿತ ಮಿಥ್ಯೆಗಳನ್ನ ಒಡೆಯಲು ಮತ್ತು ನೆಲದ ಮೇಲೆ ಕಾಲಿರದ ಈ "ದೊಡ್ಡ ವ್ಯಕ್ತಿ"ಗಳ ಭ್ರಮೆಯನ್ನು ಹರಿದು ವಾಸ್ತವ ಜಗತ್ತಿನ ಅರಿವನ್ನು ಅವರಿಗೆ ಸದಾ ಮೂಡಿಸಲು ಈ ರೀತಿಯ (ತೀರಾ ಅತಿರೇಕಕ್ಕೆ ಹೋಗದ) ಬಿಂಬಿಸುವಿಕೆ ಒಂದರ್ಥದಲ್ಲಿ ಸಹಕಾರಿ ಕೂಡಾ ಹೌದು.



ಈ ನಾಗೇಶ್ವರರಿಗೆ ಒಂದು ಖಯಾಲಿಯಿದೆ. ವಯಸ್ಸಾದ ಪೇಜಾವರರ ನಂತರ ಹಿಂದೂ ಸೇನೆಗೆ ತಾನೇ ದೊಣ್ಣೆನಾಯಕ ಎಂಬ ಭ್ರಮೆಗೆ ಬಿದ್ದು ಇನ್ನಿಲ್ಲದ ಕೆಲ ಮೌಢ್ಯಗಳನ್ನು ಅವರು ಸಮಾಜದಲ್ಲಿ ಬಿತ್ತ ಹೊರಟಿದ್ದುಂಟು. ವಿಷಯ ಯಾವುದನ್ನಾರಿಸಿಕೊಳ್ಳಲಿ ಎಂದು ಚಿಂತಿಸಿ ಒಂದು ದಿನವೂ ಸಗಣಿಬಾಚದ, ಮೈತೊಳೆದು ಅನುಭವವಿರದ ಅವರಿಗೆ ತಕ್ಷಣಕ್ಕೆ ಸಿಕ್ಕಿದ್ದೇ ಗೋವು. ಗೋವಿನ ಹೆಸರಲ್ಲೇ ಭೂಮಿ ಹಾಗು ಕೋಟ್ಯಾಂತರ ಸರಕಾರೀ ಹಣ ಎಲ್ಲವನ್ನೂ ಮೆಂದದ್ದಾಯ್ತು ಗೋವುಗಳು ಮಾತ್ರ ಹಾಗೆಯೇ ಇವೆ. ಅದಿರಲಿ, ಅತಿರೇಕದ ಸಂಗತಿಯೆಂದರೆ ದೇಶದ ಒಂದೂ ಕಾಲು ಕೋಟಿ ಜನರಿಗೆ ಹಾಲು ಹೈನು ಉಣ್ಣಿಸು ವುದು ಕೇವಲ ಈ ಸ್ವದೇಶೀ ಗೋವುಗಳಿಂದ ಸಾಧ್ಯವಿಲ್ಲ ... ಅರಿವಿದ್ದರೂ ಈತ ಇಲ್ಲಿ ಹೆಚ್ಚು ಕಾರ್ಯಪ್ರವೃತ್ತ ವಾಗಿ... ಎಮ್ಮೆ ಹಾಗು ವಿದೇಶಿ ಗೋವುಗಳನ್ನು ಮಾತ್ರ... ಗೋವಿನ ಪರಿಧಿಯಲ್ಲಿ ಸೇರಿಸಿಕೊಳ್ಳುವುದೇ ಇಲ್ಲ. ಬ... ಅವುಗಳೆಂದರೆ ವಿಷ ಕಾರುತ್ತಾನೆ. ಉದಾಹರಣೆಗೆ ... ಒಂದು ಅಸಂಬದ್ಧದ ಮಾತು ಹೀಗಿದೆ 'ಸ್ವದೇಶಿ ಗೋ... ಹಾಲು ಅಮೃತ. ವಿದೇಶಿ ಗೋವಿನ ಹಾಲು ವಿಷ...' ಪ್ರಕಾರ ಇವನರ್ಥದ ಸ್ವದೇಶಿ ಅಂದರೆ ಅದರ ... ಯೇನು? ಯಾರಿಗೂ ಗೊತ್ತಿಲ್ಲ. ತಮಿಳರಿಗೆ ಶ್ರೀ... ವಿದೇಶಿಯಾದರೆ ಮೈಸೂರಿಗರಿಗೆ ಹವಾಮಾನ ವ್ಯತ್ಯಾ... ಸಾವಿರಾರು ಮೈಲಿ ದೂರದ ಕಾಶ್ಮೀರ ಸ್ವದೇಶಿಯಾಗು... ತಮಾಷೆ ಯಲ್ಲವೇ? ಗೋವು, ಗೋವಿನ ಗ... ಸಗಣಿಗಳೆಲ್ಲ ಪರಮಪವಿತ್ರ ಎನ್ನುವುದಾದರೆ ಸಗಣಿ ... ಎನ್ನುವ ಹೆಸರಲ್ಲೇ ಪವಿತ್ರತೆಯ ಹೆಗ್ಗಳಿಕೆಯಿದೆಯೆಂದ... ಇನ್ನೂ ಮುಖ್ಯವೆಂದರೆ ಭಾರತೀಯ ಮುನಿ ಸನ್ಯಾ... ಹೋರಿಗಳೆಂದೇ ಗೌರವಿಸಿಕೊಳ್ಳಲ್ಪಡುತ್ತಿದ್ದರೆಂಬ... "ಪುಂಗವ" ಎಂದರೆ ಪುರುಷ ಗೋವು ಅ... ಹೋರಿಯೆಂದೇ ಅರ್ಥ. ಮುನಿ ಪುಂಗವ, ಪುರು... (ಶ್ರೇಷ್ಠ ಎಂಬುದಕ್ಕೆ ಪರ್ಯಾಯವಾಗಿ) ಗಳಲ್ಲಿ ಇರು... ಹೋರಿಯೇ ಅಲ್ಲದೇ ಬೇರಿನ್ನೇನು? ಗೋವು ಪವಿತ್ರ... ಪುರುಷ ಗೋವು ಪವಿತ್ರ ಯಾಕಿಲ್ಲ?

(??-ಸುಮಾ ಎಂಬಾರ್‌ರವರ ಪತ್ರ ಹಾಗು ತಮ್ಮ..... ಲೇಖನಕ್ಕೆ ವ್ಯಕ್ತಪಡಿಸಲಾದ ವಿಷಾದ ನೋಡಿ)

- ಅವಿನಾಶ್ ಎಂ ಎಸ್, ನ...



-ಈ ಸಂಚಿಕೆಯಲ್ಲಿ ಬಂದಿರುವ ವಾಸ... 'ಜನೋನ್ಮಾದ ಮತ್ತು ಜನತಂತ್ರ' ಲೇ... ಸಂದರ್ಭೋಚಿತವಾಗಿದ್ದು ತುಂಬಾ ಮಾರ್ಮಿಕ... ನಮ್ಮ ಭಾರತ ದೇಶ ಪ್ರಜಾತಂತ್ರ ವ್ಯವಸ್ಥೆ...

ಆಲ್ಫ್ರೆಡ್ ಹಿಚ್ಕಾಕ್: ದಿ ಮ್ಯಾನ್ ಹೂ ನ್ಯೂ ಟೂ ಮಚ್

ಆಲ್ಫ್ರೆಡ್ ಹಿಚ್ಕಾಕ್ ಹುಟ್ಟಿದ್ದು ಹಣ್ಣುತರಕಾರಿ ವ್ಯಾಪಾರಿಯ ಮಗನಾಗಿ, 1899ರಲ್ಲಿ. ರೋಮನ್ ಕ್ಯಾಥೊಲಿಕ್ಕಾಗಿ ಬೆಳೆದ ಈತ ಚಿಕ್ಕಂದಿನಿಂದಲೇ ತುಂಟನಾಗಿದ್ದ. ಹಿಚ್ಕಾಕ್ ಎಷ್ಟು ತುಂಟನಾಗಿದ್ದನೆಂದರೆ ಈತ ಐದು ವರ್ಷದವನಾಗಿದ್ದಾಗ ಸ್ವತಃ ತಂದೆಯೇ ಪೊಲೀಸರಿಗೆ ಹೇಳಿ ಈತನನ್ನು ಸ್ಟೇಷನ್ನಿನಲ್ಲಿ ಐದು ನಿಮಿಷಗಳ ಕಾಲ ಬಂಧನದಲ್ಲಿರಿಸುವಷ್ಟು; ಈ ಘಟನೆಯಿಂದ ಜೀವನಪೂರ್ತಿ ಹಿಚ್ಕಾಕ್ ಪೊಲೀಸರನ್ನು ಕಂಡರೆ ಭಯಪಡುವಂತಾಯಿತು. ಮಗ ಪೋಲಿಯಾಗದೆ ಒಳ್ಳೆಯವನಾಗಿ ಚಿಕ್ಕಂದಿನಿಂದ ಬೆಳೆಯಲಿ ಅಂತ ಹೀಗೆಲ್ಲಾ ಮಾಡುತ್ತಿದ್ದ ತಂದೆ ಹಿಚ್ಕಾಕ್‌ಗೆ ಹದಿನೈದು ವರ್ಷವಿದ್ದಾಗ ತೀರಿಕೊಂಡ. ತಂದೆ ತೀರಿಕೊಂಡ ಬಳಿಕ ಲಂಡನ್ ಕಂಟ್ರಿ ಕೌನ್ಸಿಲ್ ಸ್ಕೂಲ್‌ನಲ್ಲಿ ಒಂದಿಷ್ಟು ಓದಿದಂತೆ ಮಾಡಿ ಕಡೆಗೆ ಅದನ್ನೂ ಬಿಟ್ಟು ನಕ್ಷೆ ಬರೆಯುವ ಅಂದರೆ ಸ್ಥೂಲಚಿತ್ರ ನಕಾಶೆಯನ್ನು ತಯಾರು ಮಾಡುವವನಾಗಿ ಗುರುತಿಸಿಕೊಂಡ. ಈ ನಡುವೆ ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಮಿಲಿಟರಿ ಸೇವೆ ಸಲ್ಲಿಸಬೇಕೆಂದು ಪ್ರಯತ್ನಿಸಿ ವಿಫಲನಾದದ್ದೂ ಉಂಟು; ಹಿಚ್ಕಾಕ್‌ಗೆ ಇದ್ದ ಅಪಾರ ಬೊಜ್ಜು ಈತನ ಮಿಲಿಟರಿ ಆಸೆಗೆ ತಣ್ಣೀರೆರಚಿತ್ತು.

ಆಮೇಲೆ ಸಿನಿಮಾದತ್ತ ಆಸಕ್ತಿ ಬೆಳೆಸಿಕೊಂಡ ಹಿಚ್ಕಾಕ್ ಮೊದಲಿಗೆ ಲಂಡನ್ನಿನ ಒಂದು ಫಿಲಂ ಪ್ರೊಡಕ್ಷನ್ ಕಂಪನಿಯಲ್ಲಿ ಟೈಟಲ್ ಕಾರ್ಡ್ ಡಿಸೈನ್ ಮಾಡುವ ಕೆಲಸಕ್ಕೆ ಸೇರಿಕೊಂಡ. ಟೈಟಲ್ ಡಿಸೈನ್ ಮಾಡುತ್ತಲೇ 'ದಿ ವೈಟ್ ಶ್ಯಾಡೋ', 'ದಿ ಪ್ಯಾಶನೇಟ್ ಅಡ್ವೆಂಚರ್', 'ದಿ ಬ್ಲ್ಯಾಕ್ ಗಾರ್ಡ್' ತರಹದ ಒಂದಿಷ್ಟು ಚಿತ್ರಗಳಿಗೆ ಚಿತ್ರಕತೆ ರಚನೆ, ಕಲಾ ನಿರ್ದೇಶನ, ಸಹಾಯಕ ನಿರ್ದೇಶನ- ಇತ್ಯಾದಿ ಬಗೆಯಲ್ಲಿ ತೊಡಗಿಸಿಕೊಂಡ. ಜರ್ಮನಿಯ ನಿರ್ದೇಶಕರಾದ ಎಫ್.ಡಬ್ಲ್ಯೂ ಮುರ್ನಾವ್, ಫ್ರಿಟ್ಜ್ ಲಾಂಗ್ ಮುಂತಾದವರ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿ ಎಷ್ಟು ಸಾಧ್ಯವೋ ಅಷ್ಟು ಕಲಿಯತೊಡಗಿದ; ಫ್ರಿಟ್ಜ್ ಲಾಂಗ್ ತನ್ನಮೇಲೆ ಅಪಾರವಾದ ಪ್ರಭಾವ ಬೀರಿದ್ದಾನೆ ಎಂಬುದಾಗಿ ಹಿಚ್ಕಾಕ್ ಮುಂದೊಂದು ದಿನ ಸಂದರ್ಶನವೊಂದರಲ್ಲಿ ಹೇಳಿಕೊಂಡದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಿನಿಮಾ ಬಗ್ಗೆ ಇಷ್ಟೆಲ್ಲಾ ಪ್ರೀತಿ, ಧ್ಯಾನ ಹೊಂದಿದ್ದ ಹಿಚ್ಕಾಕ್‌ನ ಆರಂಭಿಕ ಸಿನಿಮಾ ಬದುಕು ಅಷ್ಟು ಸಲೀಸಾಗಿ ಸಾಗಲಿಲ್ಲ. ಆತನ ಚೊಚ್ಚಲ ನಿರ್ದೇಶನದ 'ನಂಬರ್ 13' ಚಿತ್ರವು ಆರ್ಥಿಕ ಸಮಸ್ಯೆಯಿಂದಾಗಿ ಅರ್ಧಕ್ಕೇ ನಿಂತುಹೋಯಿತು. ಆಮೇಲೆ ಮಾಡಿದ 'ದಿ ಪ್ಲೆಷರ್ ಗಾರ್ಡನ್' ಫ್ಲಾಪ್ ಆದರೆ, 'ದಿ ಮೌಂಟೇನ್ ಈಗಲ್' ಬಾಕ್ಸಾಫೀಸಿನಲ್ಲಿ ಭರ್ಜರಿಯಾಗಿ ಸೋತಿತು. ಇಷ್ಟಾದರೂ ತಾಳ್ಮೆ, ಭರವಸೆ ಕಳೆದುಕೊಳ್ಳದ ಹಿಚ್ಕಾಕ್ 1927ರಲ್ಲಿ 'ದಿ ಲಾಡ್ಜರ್: ಎ ಸ್ಟೋರಿ ಆಫ್ ದಿ ಲಂಡನ್ ಫಾಗ್' ಚಿತ್ರದ ಮೂಲಕ ನಿರ್ದೇಶಕನಾಗಿ ಮೊಟ್ಟಮೊದಲ ಗೆಲುವು ಕಂಡ; ಎಂಭತ್ತು ನಿಮಿಷಗಳ ಈ ಚಿತ್ರವು ಹಣ ಮಾಡುವುದರ ಜೊತೆಗೆ ಪ್ರೇಕ್ಷಕರಿಂದ, ವಿಮರ್ಶಕರಿಂದ ಒಳ್ಳೆಯ ರಿಪೋರ್ಟ್ ಪಡೆದುಕೊಂಡಿತು. ಯುನೈಟೆಡ್ ಕಿಂಗ್‌ಡಂನಲ್ಲಿ ಹಿಚ್ಕಾಕ್‌ಗೆ ಸ್ಟಾರ್‌ಗಿರಿ ತಂದು ಕೊಟ್ಟ ಇತರ ಚಿತ್ರಗಳೆಂದರೆ 'ದಿ ಮ್ಯಾನ್ ಹು ನ್ಯೂ ಟೂ ಮಚ್', 'ದಿ 39 ಸ್ಟೆಪ್ಸ್' ಹಾಗೂ 'ದಿ ಲೇಡಿ ವ್ಯಾನಿಷಸ್' ಮುಂತಾದವು.

'ರೆಬೆಕಾ' ಹಿಚ್ಕಾಕ್ ಮಾಡಿದ ಮೊದಲ ಅಮೆರಿಕನ್ ಸಿನಿಮಾ. ಲಾರೆನ್ಸ್ ಒಲಿವಿಯರ್ ನಟಿಸಿದ್ದ ಈ ಚಿತ್ರವು ದಫ್ನೆ ದು ಮೌರಿಯರ್ ಎಂಬ ಬ್ರಿಟಿಷ್ ಕಾದಂಬರಿಕಾರ್ತಿಯ ಕಾದಂಬರಿಯನ್ನು ಆಧರಿಸಿದ್ದು ಅತ್ಯುತ್ತಮ ಚಿತ್ರದ ಕೆಟಗರಿಯಲ್ಲಿ ಆಸ್ಕರ್ ಪ್ರಶಸ್ತಿ ಪಡೆದುಕೊಂಡಿತು. ಯಾವಾಗ 'ರೆಬೆಕಾ' ಈ ಪರಿಯಲ್ಲಿ ಹಿಟ್ ಆಯಿತೋ ಅಲ್ಲಿಗೆ ಹಿಚ್ಕಾಕ್ ಮೋಡಿ ಹಾಲಿವುಡ್‌ನಲ್ಲೂ ಶುರುವಾಯಿತು. ಆ ಮೋಡಿ ಯಾವ ಮಟ್ಟದಲ್ಲಿತ್ತು ಎಂದರೆ, 'ನೋಟೋರಿಯಸ್', 'ರೇರ್ ವಿಂಡೋ', 'ನಾರ್ತ್ ಬೈ ನಾರ್ತ್ ವೆಸ್ಟ್', 'ಸೈಕೋ', 'ಡಯಲ್ ಎಂ ಫಾರ್ ಮರ್ಡರ್', 'ಟು ಕ್ಯಾಚ್ ಎ ಥೀಫ್', 'ಬರ್ಡ್ಸ್', 'ಟಾರ್ನ್ ಕರ್ಟನ್', 'ವರ್ಟಿಗೋ' ತರಹದ ಮಾಸ್ಟರ್ ಪೀಸ್‌ಗಳು ಪ್ರೇಕ್ಷಕರು ಸದಾ ಹಿಚ್ಕಾಕ್ ಗುಂಗಿನಲ್ಲೇ ಇರುವಂತೆ ಮಾಡುವಷ್ಟು, ಅವನ ಚಿತ್ರಗಳಿಗಾಗಿ ಥಿಯೇಟರಿಗೆ ಮುಗಿಬೀಳುವಷ್ಟು.

ಸಿನಿಮಾದಷ್ಟೇ ಪ್ರಮಾಣದಲ್ಲಿ ಅವನು ತನ್ನ ಕುಟುಂಬವನ್ನೂ ಪ್ರೀತಿಸುತ್ತಿದ್ದ. ಒಬ್ಬಳು ಮಗಳ ತಂದೆಯಾಗಿದ್ದ ಹಿಚ್ಕಾಕ್ ತನ್ನ ಹೆಂಡತಿ, ಚಿತ್ರಕಥಾರಚನಾಕಾರ್ತಿ, ಸಂಕಲನಕಾರ್ತಿ ಅಲ್ಮಾ ರಿವಿಲ್‌ಗಿಂತ ಕೇವಲ ಒಂದೇ ಒಂದು ದಿನ ಹಿರಿಯನು. ಮಗಳು ಪಟ್ರೀಶಿಯಾ ತನ್ನದೇ (ಹಿಚ್ಕಾಕ್) ನಿರ್ದೇಶನದ 'ಸೈಕೋ' ಹಾಗೂ 'ಸ್ಟ್ರೇಂಜರ್ಸ್ ಆನ್ ಎ ಟ್ರೇನ್' ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಿದ್ದರೂ ಮಗಳಿಗೆ ಅಂತಲೇ ತನ್ನ ಪ್ರಭಾವ ಬಳಸಿಕೊಂಡು ಹಾಲಿವುಡ್‌ನಲ್ಲಿ ವಿಶೇಷವಾದ ಪ್ರಚಾರ ಕೊಟ್ಟವನಲ್ಲ. ತನ್ನ ಕುಟುಂಬದೊಂದಿಗೆ ಈತನಿಗಿದ್ದ ಇನ್ನೊಂದು ವಿಚಿತ್ರ ಹವ್ಯಾಸಯೆಂದರೆ ಪ್ರತಿದಿನ ರಾತ್ರಿ ತನ್ನ ತಾಯಿಯ ಎದುರು ನಿಂತು ದಿನಪೂರ್ತಿ ನಡೆದುದನ್ನೆಲ್ಲ ವರದಿ ಒಪ್ಪಿಸುವುದು!

ಹಿಚ್ಕಾಕ್ ಇಷ್ಟವಾಗುವುದು, ಮಾದರಿಯಾಗುವುದು ಆತನ ಕೆಲಸ ಮಾಡುವಲ್ಲಿನ ಶ್ರದ್ಧೆ, ಶಿಸ್ತು, ಸಿದ್ಧತೆಗಳಿಂದಾಗಿ. "ನಾನು ಮತ್ತು ಬರಹಗಾರ ಕತೆಯ ಪ್ರತಿ ವಿಷಯವನ್ನೂ ಬರೆದಿಡುತ್ತೇವೆ. ಅದನ್ನು ಬರೆದು ಮುಗಿಸಿದ ನಂತರ ಉಳಿದಿರುವ ಏಕೈಕ ಕೆಲಸ ಅದನ್ನೆಲ್ಲ ಚಿತ್ರೀಕರಿಸುವುದು ಮಾತ್ರ. ನಾವು ಸ್ಟುಡಿಯೋಅನ್ನು ಪ್ರವೇಶಿಸಿದಾಗಲೇ ನಾವು ಬರೆದಿರುವ ಕತೆಯೊಂದಿಗೆ ಚೌಕಾಶಿ ಶುರುವಾಗುತ್ತದೆ. ಹಾಗೆ ನೋಡಿದರೆ ಬರಹಗಾರನಿಗೆ ತಾನು ಸೃಷ್ಟಿಸುವ ಪಾತ್ರಗಳೊಂದಿಗೆ ಕಾಂಪ್ರಮೈಸ್ ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಅದೇನಿದ್ದರೂ ನಿರ್ದೇಶಕನ ತಲೆನೋವು" ಎನ್ನುತ್ತಿದ್ದ ಹಿಚ್ಕಾಕ್.



ಹಿಚ್ಕಾಕ್ ಚಿತ್ರಕತೆ ಸಿದ್ಧವಾದ ಕೂಡಲೇ ಏಕದಂ ಶೂಟಿಂಗ್‌ಗೆ ಹೊರಡುತ್ತಿರಲಿಲ್ಲ. ತಾನು ಸಿದ್ಧಪಡಿಸಿಕೊಂಡಿರುವ ಚಿತ್ರಕತೆ ತೆರೆಯ ಮೇಲೆ ಹೇಗೆ ಮೂಡಿ ಬರಬೇಕು ಎಂಬುದಾಗಿ ಆಲೋಚಿಸುತ್ತಿದ್ದ. ಯಾವ ಸೀನ್‌ನಲ್ಲಿ ಎಷ್ಟು ಶಾಟ್‌ಗಳಿರುತ್ತವೆ? ಯಾವ ಶಾಟ್‌ಗೆ ಎಲ್ಲಿ ಕಟ್ ಹೇಳಬೇಕು? ಆ ಶಾಟ್‌ಗಳು ಎಡಿಟಿಂಗ್ ನಂತರ ಹೇಗೆ ಒಂದು ಕ್ರಮದಲ್ಲಿ ಪರದೆಯ ಮೇಲೆ ಮೂಡಿ ಬರುತ್ತವೆ? ಆ ಮೂಲಕ ಪ್ರೇಕ್ಷಕನ ಮನಸ್ಸಿನ ಮೇಲೆ ಹೇಗೆ ಪರಿಣಾಮ ಬೀರುತ್ತವೆ? ಎಂಬಿತ್ಯಾದಿ ಸಂಗತಿಗಳ ಬಗ್ಗೆ ತಾದಾತ್ಮ್ಯದಿಂದ ಧ್ಯಾನಿಸಿ ಆ ಕ್ಷಣಕ್ಕೆ ಹೊಳೆದ ಅಷ್ಟೂ ಸರಕನ್ನು ಒಂದು ಕಡೆ ಬರೆದಿಟ್ಟುಕೊಳ್ಳುತ್ತಿದ್ದ; ಆಮೇಲೆ ಒಮ್ಮೆ ಶೂಟಿಂಗ್ ಶುರುವಾದರೆ ಸ್ಕ್ರಿಪ್ಟ್‌ನ ಅಗತ್ಯ ಅವನಿಗಿರುತ್ತಿರಲಿಲ್ಲ; ಎಲ್ಲವೂ ಆತನ ತಲೆಯಲ್ಲಿಯೇ ಇರುತ್ತಿದ್ದವು! ತನ್ನ ಚಿತ್ರದ ಬರಹಗಾರರಿಗೂ ಅಷ್ಟೇ... ಏನೇ ಬರೆದರೂ ವಿಷುಯಲ್ ಫೀಲ್ ಇಟ್ಟುಕೊಂಡು ಬರೆಯಬೇಕು, ಪಾತ್ರಗಳ ನಡುವೆ ಬರೀ ಮಾತುಗಳು ಇರಬಾರದು ಎಂಬುದಾಗಿ ಸ್ಟ್ರಿಕ್ಟಾಗಿ ಹೇಳುತ್ತಿದ್ದ, ಆ ಮೂಲಕ ತನ್ನ ಚಿತ್ರಗಳ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿದ್ದ. ಇಷ್ಟಕ್ಕೂ ಎರಡು ದಶಕಗಳ ಕಾಲ ಅತ್ಯುತ್ತಮ ಸಿನಿಮಾಗಳನ್ನು ನಿರ್ದೇಶಿಸುತ್ತಾ ಜನರನ್ನು ರಂಜಿಸಿದ ಹಿಚ್ಕಾಕ್‌ಗೆ ಕಡೆಗೂ ಅತ್ಯುತ್ತಮ ನಿರ್ದೇಶಕ ಕೆಟಗರಿಯಲ್ಲಿ ಆಸ್ಕರ್ ಪ್ರಶಸ್ತಿ ಬರಲೇ ಇಲ್ಲ. ಬದಲಿಗೆ ಈ ಕೊರತೆಯನ್ನು ತುಂಬಲು ಅಂದರೆ ತನ್ನ ತಪ್ಪನ್ನು ಸರಿಮಾಡಿಕೊಳ್ಳಲು ಇದೇ ಅಕಾಡೆಮಿ 1968ರಲ್ಲಿ ಈತನಿಗೆ ಲೈಫ್ ಟೈಮ್ ಅಚೀವ್ ಮೆಂಟ್ ಅವಾರ್ಡ್ ನೀಡಲು ತೀರ್ಮಾನಿಸಿತು. ಅದನ್ನು ಸ್ವೀಕರಿಸಿದ ನಂತರ ಹಿಚ್ಕಾಕ್ ಹೇಳಿದ್ದು "ಥ್ಯಾಂಕ್ ಯೂ... ವೆರಿಮಚ್ ಇನ್ ಡೀಡ್" ಎಂಬ ಐದು ಪದಗಳನ್ನು ಮಾತ್ರ. ಆ ಮೂಲಕ ಅಕಾಡೆಮಿ ಮೇಲಿನ ತನ್ನೊಳಗಿನ ಸಿಟ್ಟು ಹೊರಹಾಕಿದ್ದ ಎನ್ನಬಹುದು. ಇಷ್ಟಕ್ಕೂ ಈತನ ಅದ್ಭುತ ಚಿತ್ರಗಳು ಯಾವುದೇ ಪ್ರತಿಷ್ಠಿತ ಪ್ರಶಸ್ತಿಗೂ ಮೀರಿದವೆಂಬುದು ಬೇರೆ ಮಾತು.

"ಒಂದು ಚಲನಚಿತ್ರದ ಉದ್ದವು ಮನುಷ್ಯನೊಬ್ಬನ ಮೂತ್ರ ಚೀಲದ ಶಕ್ತಿಯನ್ನು ಪರೀಕ್ಷಿಸುವಷ್ಟು ಇರಕೂಡದು" ಎನ್ನುತ್ತಿದ್ದ ಹಿಚ್ಕಾಕ್ ತನ್ನ ಸಿನಿಮಾಗಳನ್ನು ತಾನೇ ನೋಡಲು ಹಿಂಜರಿಯುತ್ತಿದ್ದ. ಯಾವತ್ತೂ ಪ್ರೇಕ್ಷಕರ ಜೊತೆ ಕೂತು ತನ್ನ ಚಿತ್ರಗಳನ್ನು ವೀಕ್ಷಿಸಿರದ ಈತ 1963ರ ಸಂದರ್ಶನವೊಂದರಲ್ಲಿ ತನ್ನ ಚಿತ್ರಗಳೆಂದರೆ ತನಗೆ ಭಯವೂ, ತಾನು ಅವುಗಳನ್ನು ನೋಡಲಿಚ್ಛಿಸದಿರುವುದಾಗಿಯೂ, ಜನ ಹೇಗೆ ತನ್ನ ಚಿತ್ರಗಳನ್ನು ಸಹಿಸಿಕೊಳ್ಳುತ್ತಾರೋ... ಎಂದೆಲ್ಲಾ ಹೇಳಿಕೊಂಡಿದ್ದ. ಈ ವಿಶಿಷ್ಟ ನಿರ್ದೇಶಕನ ಆಸಕ್ತಿಗಳೂ ತೀವ್ರವಾದ ವೈಚಿತ್ರ್ಯತೆಯಿಂದ ಕೂಡಿವೆ; ಯಾವಾಗಲೂ ಸೀರಿಯಸ್ಸಾಗಿ ಇರಲು ಇಷ್ಟ ಪಡದ ಈತನಿಗೆ ಜೋಕ್ಸ್‌ಗಳೆಂದರೆ ಇಷ್ಟ. "ನನಗೆ ಮೊಟ್ಟೆ ಎಂದರೆ ತೀವ್ರತರವಾದ ಭಯ. ಅವುಗಳೆಂದರೆ ನನಗೆ ಅಸಹ್ಯವಾಗುತ್ತದೆ. ತೂತೇ ಇಲ್ಲದೆ ಆ ಬಿಳಿಯ ಗುಂಡಿನಾಕಾರದ ವಸ್ತುವೇ ವಿಚಿತ್ರವಾಗಿದೆ. ಮೊಟ್ಟೆಯ ಲೋಳೆ ಒಡೆದು ಹಳದಿ ದ್ರವ್ಯ ಹರಿಯುವುದನ್ನು ನೋಡಿದರೆ ಹೇಸಿಗೆ ಆಗುತ್ತದೆ. ರಕ್ತವಾದರೋ ಕೆಂಪಗಿರುತ್ತದೆ. ಆದರೆ ಮೊಟ್ಟೆಯ ಲೋಳೆ ಹಳದಿಯಾಗಿರುತ್ತದೆ. ಅದನ್ನು ನಾನು ಎಂದೂ ತಿಂದಿಲ್ಲ" ಎನ್ನುತ್ತಿದ್ದ ಹಿಚ್ಕಾಕ್ ಊಟವನ್ನೂ, ಔತಣಕೂಟಗಳನ್ನೂ ಬಹಳವಾಗಿ ಇಷ್ಟಪಡುತ್ತಿದ್ದ ಎಂಬುದು ಮತ್ತೊಂದು ವಿಶೇಷ.

ಹಾಲಿವುಡ್‌ನ ಗಣ್ಯರಲ್ಲಿ ಒಬ್ಬನಾಗಿದ್ದ ಹಿಚ್ಕಾಕ್‌ನ ಸುತ್ತ ವಿವಾದಗಳೂ ಇದ್ದವು. ಅದರಲ್ಲೂ ಆತ ಮತ್ತು ಆತನ ಚಿತ್ರಗಳಲ್ಲಿ ನಟಿಸಿದ ನಟಿಯರ ಸುತ್ತಲಿನ ವಿವಾದಗಳು ಪ್ರಮುಖವಾದವು. ಹಿಚ್ಕಾಕ್ ನಿರ್ದೇಶನದ 'ದಿ ಬರ್ಡ್ಸ್' ಮತ್ತು 'ಮಾರ್ನಿ' ಚಿತ್ರಗಳಲ್ಲಿ ನಟಿಸಿದ್ದ ನಟಿ ಟಿಪ್ಪಿ ಹೆಡ್ರೆನ್ "ಆತ ನನ್ನ ವೃತ್ತಿಬದುಕನ್ನು ನಾಶ ಮಾಡಿದ. ಆದರೆ ನನ್ನ ಜೀವನವನ್ನಲ್ಲ, ನನ್ನ ಬದುಕಿನ ಆ ಅಧ್ಯಾಯ ಮುಗಿದಿದೆ. ಆದರೂ ಆತನ ಸಾಧನೆ ಬಗ್ಗೆ ನನಗೆ ಅಭಿಮಾನವಿದೆ" ಎನ್ನುತ್ತಲೇ ಹಿಚ್ಕಾಕ್ ಕರೆದಿದ್ದ ಸ್ಕ್ರೀನ್ ಟೆಸ್ಟ್‌ನಲ್ಲಿ ತಾನು ಭಾಗವಹಿಸಿದ್ದು, ಸ್ಕ್ರೀನ್ ಟೆಸ್ಟ್‌ನ ನಂತರ ಹಿಚ್ಕಾಕ್ ಮತ್ತು ಆತನ ಮಡದಿಯೊಟ್ಟಿಗೆ ಊಟಕ್ಕೆ ಹೋಗಿದ್ದು, ಅಂದು ಆತ ಉಡುಗೊರೆಯಾಗಿ ತನಗೊಂದು ಬ್ಯೂಟಿಫುಲ್ ಬಾಕ್ಸ್ ನೀಡಿದ್ದು, ಅದರಲ್ಲಿ ಮೂರು ಬಂಗಾರದ ಹಕ್ಕಿಗಳಿದ್ದದ್ದು, 'ದಿ ಬರ್ಡ್' ಚಿತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿ ಬಾಷ್ಪಗರೆದದ್ದು, ತನ್ನೊಡನೆ ಸ್ವತಃ ಹಿಚ್ಕಾಕ್‌ನ ಹೆಂಡತಿ ಅಲ್ಮಾ ಕೂಡ ಸಂತಸದ ಕಂಬನಿ ತುಳುಕಿಸಿದ್ದು ಎಲ್ಲವನ್ನು ನೆನೆಯುತ್ತಲೇ "ಆತ ನಿಜಕ್ಕೂ ಪ್ರತಿಭಾವಂತ. ನಟನೆಗೆ ಸಂಬಂಧಿಸಿದಂತೆ ಆತನಿಂದ ನಾನು ಸಾಕಷ್ಟು ಕಲಿತೆ. ಆತ ಒಬ್ಬ ಅದ್ಭುತ ಸ್ಟೋರಿ ಟೆಲ್ಲರ್" ಎನ್ನುತ್ತಿದ್ದಳು. ಹಿಚ್ಕಾಕ್ ತನ್ನ ಮೇಲೆ ಇಟ್ಟುಕೊಂಡಿದ್ದ ಅತೀವ ಮೋಹದ ಕುರಿತು "ಹೆಂಗಸರು ಮೂರ್ಖರಲ್ಲ. ಅದೊಂದು ಅಸಹನೀಯ ಸಂಗತಿ. ಆತನ ಮೇಲೆ ಲೈಂಗಿಕವಾಗಿ ನನಗೆ ಯಾವುದೇ ಬಗೆಯ ಆಸೆಯಾಗಲೀ, ಆಸಕ್ತಿಯಾಗಲೀ ಇರಲಿಲ್ಲ. ಆತ ಯಾವಾಗಲೂ ನನ್ನೆಡೆಗೆ ನೋಟ ನೆಟ್ಟಿರುತ್ತಿದ್ದ, ನನ್ನೊಟ್ಟಿಗೆ ಏಕಾಂತದಲ್ಲಿ ಊಟ ಮಾಡಲು ಬಯಸುತ್ತಿದ್ದ. ನನ್ನ ಬದುಕನ್ನು ಸಂಪೂರ್ಣವಾಗಿ ತನ್ನ ಕಂಟ್ರೋಲಿಗೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದ" ಎಂದು ಹೇಳುತ್ತಿದ್ದಳು.

ಟಿಪ್ಪಿ ಹೆಡ್ರೆನ್ ರೀತಿಯಲ್ಲಿಯೇ ಹಿಚ್ಕಾಕ್‌ನ 'ವರ್ಟಿಗೋ' ಚಿತ್ರದಲ್ಲಿ ನಟಿಸಿದ್ದ ನಟಿ ಕಿಮ್ ನೋವಾಕ್ "ಹಿಚ್ಕಾಕ್ ನನಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದ. ಆ ಪಾತ್ರಕ್ಕೆ ನನ್ನಿಂದ ಏನು ಸಲ್ಲಬೇಕಿತ್ತೋ ಅದು ಸಲ್ಲುವಲ್ಲಿ ಆತನೇ ಕಾರಣನಾಗಿದ್ದ. ಇಷ್ಟಕ್ಕೂ ಆತನೊಬ್ಬ ಜೆಂಟಲ್ ಮ್ಯಾನ್. ಆತ ಮೇಲುನೋಟಕ್ಕೆ ನಗುತ್ತಿದ್ದಾನೆ ಅಥವಾ ಉಗ್ರವಾಗಿದ್ದಾನೆ ಅಂತ ಅನ್ನಿಸಿದರೂ ಆತನ ತಲೆ ಮಾತ್ರ ಕ್ರಿಯಾಶೀಲವಾಗಿ ಎಲ್ಲೆಲ್ಲೋ ಓಡುತ್ತಿರುತ್ತಿದ್ದದ್ದು ಮಾತ್ರ ನಿಜ. ಅದನ್ನು ಯಾರಿಂದಲೂ ಊಹಿಸಿಕೊಳ್ಳಲು ಸಾಧ್ಯವಿಲ್ಲ" ಎಂದಿದ್ದಳು. ಇದರಿಂದ ನಾವು ಗ್ರಹಿಸಬೇಕಾದ್ದು ಹಿಚ್ಕಾಕ್ ಎಂಬ ಮನುಷ್ಯ ಹೇಗೆ ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ರೀತಿಯಲ್ಲಿ, ಬೇರೆ ಬೇರೆ ವ್ಯಕ್ತಿಗಳ ಅದರಲ್ಲೂ ತನ್ನ ಚಿತ್ರಗಳಲ್ಲಿ ನಟಿಸಿದ್ದ ನಟಿಯರ ಗ್ರಹಿಕೆಗೆ ಸಿಗುತ್ತಾನೆ ಎಂಬುದನ್ನು.

ಆದರೆ ಆಲ್ಫ್ರೆಡ್ ಹಿಚ್ಕಾಕ್‌ನ ಹಿರಿಮೆ ಇರುವುದು ತಾನು ಮಾಡಿದ ಸಿನಿಮಾಗಳಲ್ಲಿ, ತಾನು ಕತೆ ಹೇಳಿದ ವಿಧಾನದಲ್ಲಿ, ತನ್ನ ಸಿನಿಮಾಗಳನ್ನು ತಾನೇ ಗೇಲಿ ಮಾಡಿಕೊಳ್ಳುತ್ತಾ ಜಗತ್ತಿನ ಕೋಟ್ಯಂತರ ಸಿನಿಪ್ರಿಯರ ಹೃದಯಗಳನ್ನು ಗೆಲ್ಲುವಲ್ಲಿ. ಹಾರರ್, ಸಸ್ಪೆನ್ಸ್ ಥ್ರಿಲ್ಲರ್ ಚಿತ್ರಗಳಿಗೆ ಹೊಸ ವ್ಯಾಖ್ಯಾನ ಬರೆದ ಈತ ಇವತ್ತಿಗೂ ನಿಗೂಢವಾಗಿಯೇ ಉಳಿದುಹೋಗಿರುವ ವ್ಯಕ್ತಿತ್ವದವನು. ಪ್ರೇಕ್ಷಕರನ್ನು ಸರ್‌ಪ್ರೈಸ್ ಅಥವಾ ಸಸ್ಪೆನ್ಸ್ ಮೂಲಕ ಹಿಡಿದಿಟ್ಟುಕೊಳ್ಳಬೇಕೆಂದು ವಾದಿಸುವ ಹಿಚ್ಕಾಕ್ ಈ ವಾದಕ್ಕೆ ಪೂರಕವಾಗಿ ಒಂದು ಪುಟ್ಟ ಉದಾಹರಣೆ ಕೊಡುತ್ತಾನೆ. ಅದೇನೆಂದರೆ ಒಂದು ಟೇಬಲ್ಲಿನ ಕೆಳಗೆ ಯಾರಿಗೂ ಗೊತ್ತಿಲ್ಲದ ಹಾಗೆ ಒಂದು ಬಾಂಬ್ ಇರುತ್ತದೆ ಅಂತ ಭಾವಿಸಿ. ಅದು ಅನಿರೀಕ್ಷಿತವಾಗಿ ಒಮ್ಮೆಲೇ ಸಿಡಿದಾಗ ಅಲ್ಲಿದ್ದವರೆಲ್ಲ ಗಾಬರಿಗೊಳಗಾಗುತ್ತಾರೆ; ಅದು 'ಸರ್‌ಪ್ರೈಸ್'. ಅದೇ ಆ ಟೇಬಲ್ಲಿನ ಕೆಳಗೆ ಬಾಂಬ್ ಇರುವುದು ಮೊದಲೇ ಗೊತ್ತಿದ್ದು ಅದು ಇನ್ನೇನು ಸಿಡಿಯುತ್ತದೆ ಅಂತ ಕಾಯುವುದಿದೆಯಲ್ಲಾ ಅದು 'ಸಸ್ಪೆನ್ಸ್'. ಈ ಎರಡರ ನಡುವಿನ ವ್ಯತ್ಯಾಸವನ್ನು, ಅವು ಮನುಷ್ಯನ ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮವನ್ನು ನಿರ್ದೇಶಕನೊಬ್ಬ ಸೂಕ್ಷ್ಮವಾಗಿ ಅರಿತಾಗ ಮಾತ್ರ ಈ ಪ್ರಯೋಗ ಫಲಪ್ರದವಾಗುತ್ತದೆ ಎಂಬುದು ಈತನ ವಾದ; ಈತ ಈ ನಿಟ್ಟಿನಲ್ಲಿ ಗೆದ್ದಿದ್ದಾನೆ ಎಂಬುದಕ್ಕೆ 'ಸೈಕೋ', 'ಡಯಲ್ ಎಂ ಫಾರ್ ಮರ್ಡರ್', 'ರೇರ್ ವಿಂಡೋ' ತರಹದ ಚಿತ್ರಗಳು ಸಾಕ್ಷಿಯಾಗಿ ನಿಲ್ಲಬಲ್ಲವು.

ತನ್ನ ಬದುಕಿನುದ್ದಕ್ಕೂ ಪ್ರೇಕ್ಷಕರನ್ನು ಹೇಗೆಲ್ಲಾ ರಂಜಿಸಬಹುದು ಎಂಬುದರ ಬಗ್ಗೆ ಆಲೋಚಿಸುತ್ತ ಆ ಆಲೋಚನೆಗಳನ್ನು ತನ್ನ ಚಿತ್ರಗಳ ಮೂಲಕ ಪ್ರಯೋಗಕ್ಕೆ ಒಡ್ಡುತ್ತಾ, ಚಿತ್ರದಿಂದ ಚಿತ್ರಕ್ಕೆ ಪಳಗುತ್ತಾ ಕಡೆಗೆ ಇಡೀ ಜಗತ್ತೇ ತನ್ನತ್ತ, ತನ್ನ ಚಿತ್ರಗಳತ್ತ ತಿರುಗಿ ನೋಡುವಂತೆ ಮಾಡಿದ ಈ ಮಹಾನ್ ನಿರ್ದೇಶಕ ಯಾವತ್ತಿಗೂ ಚಿತ್ರರಂಗದ ಮಾಸ್ಟರ್‌ಗಳಲ್ಲಿ ಒಬ್ಬ. ಇಷ್ಟಕ್ಕೂ ಪ್ರತಿಯೊಬ್ಬ ಸೆಲೆಬ್ರಿಟಿಯಂತೆ ಸಾಧನೆಯ ಜೊತೆಗೆ ವಿವಾದಗಳಿಗೂ ಗುರಿಯಾದ ಈತ ಹೇಳುವುದಿಷ್ಟು, "ನಾನು ನಾನಾಗಿರದಿದ್ದರೆ ಯಾರು ನಾನಾಗಲು ಸಾಧ್ಯ?"

● ಹೃದಯಶಿವ

...ಪದೋಷಗಳಿಗೆ ಲೇಖನ ಕನ್ನಡಿ ಹಿಡಿದಿದೆ. ನಿಜ, ...ವುದೆ ನಾಯಕನಿಗೆ, ಅವನ ಕುಟುಂಬಕ್ಕೆ ಜನ ನಿಷ್ಠರಾಗಿ ...ಡು ಅಭಿಮಾನ ತೋರಿಸುತ್ತ ಅವನನ್ನು ಗೆಲ್ಲಿಸುತ್ತಾ ...ಪಾರಂಪರ್ಯ ಆಡಳಿತ ನಡೆಸಲು ಅವಕಾಶ ನೀಡುತ್ತ ...ದರೆ ಅವರಷ್ಟೆ ಉದ್ಧಾರ ಆಗುತ್ತಾರೆ ವಿನಃ ದೇಶದ ...ದ್ಧಾರ ಆಗಲ್ಲ. ಜಾತಿ, ವ್ಯಕ್ತಿ ಧರ್ಮದ ಮೇಲಿನ ಕುರುಡು ...ಾಭಿಮಾನ ಬಿಟ್ಟು ಯೋಗ್ಯ ಅಭ್ಯರ್ಥಿಗಳಿಗೆ ನಮ್ಮ ... ನೀಡಿ ಉತ್ತಮ ಆಡಳಿತ ನೀಡುವಂತೆ ...ೇರಿಸುವುದು ನಮ್ಮ ಕರ್ತವ್ಯವಾಗಿದೆ.

- ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ



...ಕಂಡಹಾಗೆ'ಯ ಒಂದು ಭರ್ತಿ ...ವನ್ನು ಸುಬ್ರಮಣ್ಯ ಸ್ವಾಮಿ ಎಂಬ ...ಹುಲು(ಬು)ಮಾನವನಿಗಾಗಿ ಮೀಸಲಿಡ ...ತ್ತೇ ಎಂದು ಒಮ್ಮೆ ಅನ್ನಿಸಿತಾದರೂ ...ದಿನೇ ಮೋದಿಗೆ ಈತ ಭಟ್ಟಂಗಿಯಾ ...ವ ಪರಿ ನೋಡಿದರೆ ನಿಮ್ಮ ನಿಲುವು ... ಎನಿಸಿತು. ಸಮಯಸಾಧಕ ...ಕಾರಣದ ಅತಿ ನೀಚ ಸಾಧ್ಯತೆ ...ಯಿದ್ದರೆ ಇಂದು ಅದು ಸುಬ್ರಮಣ್ಯ ...ಯ ರೂಪದಲ್ಲಿದೆ. ಉಳ್ಳವರ ...ಯಲ್ಲಿ ಬದುಕುವ ಈ 'ಭಿಕಾರಿ'ಯ ... ಅಂದು ಲಂಕೇಶ್ 'ಮರೆಯುವ ...'ದಲ್ಲಿ 'ಕೃತಜ್ಞನಲ್ಲ' ಎಂಬ ...ಕೆಯಡಿ ಬರೆದಿದ್ದರಲ್ಲ. (ನೋಡಿ: ...ಯುವ ಮುನ್ನ ಸಂಗ್ರಹ-1 (1987-1990), ಪುಟ ... 171.)

...ೋಜಿ ಮತ್ತು ಬದ್ಧತೆಯನ್ನು ಮೀರಿದ ಮನುಷ್ಯನ ...ಗಳು ಅಪಾಯಕರ ಎಂದು ಈತನ ಬಗ್ಗೆ ಲಂಕೇಶ್ ...ರುವುದು ಅದೆಷ್ಟು ಸತ್ಯ.

- ರವಿಕುಮಾರ್, ಹಾಸನ

... ದಿನಗಳಲ್ಲಂತೂ ಪತ್ರಿಕೆ ತುಂಬಾ ತುಂಬಾ ಚೆನ್ನಾಗಿ ...ಬರುತ್ತಿದೆ. ನನಗಂತೂ ಒಂದು ಸಶಕ್ತ ಫುಟ್‌ಬಾಲ್ ...ಕಟ್ಟಿದ ಕಂಡಂತಾಗುತ್ತಿದೆ. ಸೆಂಟರ್ ಫಾರ್ವರ್ಡ್‌ನಲ್ಲಿ ...0 ಜರ್ಸಿ ತೊಟ್ಟ ಮೆಸ್ಸಿ ತರಹ ನೀವು, left out ...ಜಾರ್ ದಿನ್ನಾ, full back ನಲ್ಲಿ ಡಾ. ವಾಸು ... ನೈತಿಕವಾಗಿ ಪತ್ರಿಕೆಗೆ ಬೆನ್ನೆಲುಬಾಗಿ ನಿಂತ ದೆಹ್ಲಿ ಗೋಲ್‌ಕೀಪರ್ ಜಿ. ರಾಜಶೇಖರ್ ಹಾಗೂ ಅವರ substitute ಕೆ. ಫಣಿರಾಜ್ ಎಲ್ಲವೂ ಸೂಪರ್ಬ್ ಆಗಿದೆ.

ಯು.ಆರ್. ಅನಂತಮೂರ್ತಿಯವರ ಕುರಿತ ವಿಶೇಷಾಂಕಕ್ಕೆ ಪ್ರತಿಕ್ರಿಯೆಯಾಗಿ ನಾನು ಕಳಿಸಿದ ಪುಟ್ಟ ಬರಹಕ್ಕೆ ನೀವು ಲಂಕೇಶ್ ಹಾಗೂ ಅನಂತಮೂರ್ತಿಯವರು ಒಟ್ಟಿಗೆ ಕುಳಿತ ಫೋಟೋ ಸಹಿತ ಅಂದವಾಗಿ ಮುದ್ರಿಸಿದ್ದಕ್ಕೆ ನನಗಾದ ಖುಷಿಗೆ ಪಾರವೇ ಇಲ್ಲದಂತಾಗಿದೆ. ಈ ನಾಡೋಜ, ಜ್ಞಾನಪೀಠ ಎರಡೂ ಒಟ್ಟೊಟ್ಟಿಗೇ ಸಿಕ್ಕಷ್ಟು ಸಂತೋಷವಾಗಿದೆ.

ಕೋಮು ಸೌಹಾರ್ದ ವೇದಿಕೆಯವರು ಸೆಪ್ಟೆಂಬರ್ 27 ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಗೆ ಹೊಸಪೇಟೆಯ ನನ್ನ ಇಬ್ಬರು ಮಿತ್ರರನ್ನೂ ಹೊರಡಿಸಿಕೊಂಡು ಬಂದಿದ್ದೆ. ನೀವು, ಕಾರ್ನಾಡ್ ಹಾಗೂ ಫಣಿರಾಜ್‌ರನ್ನು ಹತ್ತಿರದಿಂದ ಕಂಡ ಖುಷಿಗೆ ಹೊರತಾಗಿ ಆ ನೀರಸ ಸಭೆಯ ಬಗ್ಗೆ ಬೇಸರವಾಗಿದೆ. "ವರ್ತಮಾನದ ಬಿಕ್ಕಟ್ಟುಗಳನ್ನು ಎದುರಿಸುವ ವೈಚಾರಿಕತೆಯನ್ನು ವಿಸ್ತರಿಸುವುದೇ ಅನಂತಮೂರ್ತಿಯವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ" ಎಂದು ಕೋ.ಸೌ.ವೇಯವರು ಕೊಟ್ಟ ಕರೆಯ ಬಗ್ಗೆ ಬಹಳ ನಿರೀಕ್ಷೆಯಿಟ್ಟುಕೊಂಡು ಬಂದಿದ್ದೆ. ಆದರೆ ಅಲ್ಲಿ ಅದೇ ಹಳೆಯ ಹಳಹಳಿಗಳ ಹೊರತಾಗಿ ಬೇರೇನೂ ಜರುಗಲಿಲ್ಲ. ಕೋ.ಸೌ. ವೇದಿಕೆಯ ಮಿತ್ರರಲ್ಲಿ ನಾನು ವಿನಂತಿಸುವುದೇನೆಂದರೆ ಆಕರ್ಷಕವಾಗಿ ಕಾಣುವ ದೊಡ್ಡದೊಡ್ಡ ಮಾತುಗಳನ್ನು ಸುಖಾಸುಮ್ಮನೆ ಬಳಸಬೇಡಿ. ಗೋಪಾಲಕೃಷ್ಣ ಅಡಿಗರು ಹೇಳಿದಂತೆ "ಮಾತು ದೂರದಾ ಮಿಂಚುತಂತಿಯ ಹಾಗೆ. ಒದೆಸಿಕೊಳ್ಳದೆ ಒಳಗೂ ತಿಳಿಯದದರಾ ಅಲಗು."

- ಎನ್.ಬಿ. ಶೈಲೇಂದ್ರ, ಹೊಸಪೇಟೆ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01, Friday R B P LANKESH, Kannada Weekly Price Rs. 15/- 29-10-2014 RNI No. KARKAN2005/1464

ಶಿವಣ್ಣನ ಚಿತ್ರಕ್ಕೆ ಧನುಷ್ ಹಾಡು



ಕೊಲವೆರಿ' ಹಾಡಿನ ಮೂಲಕ ಗಾಯಕರಾಗಿ ಪ್ರಸಿದ್ಧಿ ಪಡೆದ ತಮಿಳು ನಟ ಧನುಷ್ ಕನ್ನಡ ಚಿತ್ರವೊಂದಕ್ಕೆ ಒಂದು ಹಾಡು ಹಾಡುತ್ತಿದ್ದಾರೆ. ಅದೂ ಶಿವರಾಜ್ ಕುಮಾರ್ ನಟಿಸುತ್ತಿರುವ 'ವಜ್ರಕಾಯ' ಚಿತ್ರಕ್ಕೆ. ಇತ್ತೀಚೆಗಷ್ಟೇ ಚೆನ್ನೈನಲ್ಲಿ ರೆಕಾರ್ಡಿಂಗ್ ಮುಗಿಸಿಕೊಂಡು ಬಂದಿರುವ ಈ ಹಾಡಿನ ಮೂಲಕ ಧನುಷ್ ಪ್ರಥಮ ಬಾರಿಗೆ ಕನ್ನಡ ಚಿತ್ರವೊಂದರಲ್ಲಿ ಭಾಗಿಯಾದಂತಾಯಿತು. ಈ ಮೊದಲು ಈ ಧನುಷ್, ಶಿವರಾಜ್ ಕುಮಾರ್ ಅಭಿನಯದ 'ಜೋಗಿ' ಚಿತ್ರದ ತಮಿಳು ಅವತರಣಿಕೆಯಲ್ಲಿ ನಟಿಸಿದ್ದರು. ಅಷ್ಟಕ್ಕೂ ತಮಿಳಿಗ ಧನುಷ್ ಕನ್ನಡಿಗರಿಗೆ ಹತ್ತಿರ ಎನ್ನುವುದಾದರೆ ಅದು ರಜನಿಕಾಂತ್ ಅಳಿಯ ಎಂಬ ಏಕೈಕ ಕಾರಣದಿಂದ. ರಜನಿಕಾಂತ್ ಎರಡೂವರೆ ದಶಕಗಳ ಹಿಂದೆ ಬೆಂಗಳೂರು ಬಿಟ್ಟು ಚೆನ್ನೈಗೆ ಹೋಗಿ ನೆಲೆ ನಿಂತ ಮೇಲೆ ರಜನಿ ಯಾವುದೇ ರೀತಿಯಲ್ಲೂ ಅಂದರೆ ಕನ್ನಡ ಚಿತ್ರಗಳಲ್ಲಿ ನಟಿಸುವ ಮೂಲಕವೋ, ಕನ್ನಡ ಚಿತ್ರಗಳನ್ನು ನಿರ್ಮಾಣ ಮಾಡುವ ಮೂಲಕವೋ ತೊಡಗಿಸಿಕೊಂಡಿರಲಿಲ್ಲ. ಈಗ ಅಳಿಯ ಧನುಷ್ ಒಂದು ಕನ್ನಡ ಹಾಡಿಗೆ ಧ್ವನಿ ನೀಡುವ ಮೂಲಕ ರಜನಿ ಕುಟುಂಬ ಕನ್ನಡ ಚಿತ್ರರಂಗದಲ್ಲಿ ಮತ್ತೆ ಭಾಗಿಯಾದಂತಾಯಿತು ಅನ್ನಬಹುದು.

ಮರಾಠಿ ಚಿತ್ರದಲ್ಲಿ ಕನ್ನಡ

'ಗಾಂಧಿ ವರ್ಸಸ್ ಗಾಂಧಿ' ಎಂಬ ಗುಜರಾತಿ ನಾಟಕ ಮರಾಠಿಗೆ ಅನುವಾದವಾಗಿತ್ತು, ಅದನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ ಡಾ.ಡಿ.ಎಸ್.ಚೌಗಲೆ ಕನ್ನಡ ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರು. ನಾಟಕಗಳ ಜೊತೆಗೆ ಸಣ್ಣಕತೆಗಳನ್ನೂ ಬರೆದಿರುವ ಬೆಳಗಾವಿಯ ಚೌಗಲೆಯವರು ಕನ್ನಡ-ಮರಾಠಿ ನಡುವಿನ ಸೇತುವೆಯಾಗಿ ಅನೇಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಈಗ ಇವರು 'ಕ್ಯಾರಿ ಆನ್ ಮರಾಠ' ಎನ್ನುವ ಮರಾಠಿ ಚಿತ್ರಕ್ಕೆ ಕನ್ನಡದಲ್ಲಿ ಸಂಭಾಷಣೆ ಬರೆದಿದ್ದಾರೆ. ಇದೇನು ಮರಾಠಿ ಚಿತ್ರದಲ್ಲಿ ಕನ್ನಡ ಸಂಭಾಷಣೆಯೇ? ಅಂತ ಗಾಬರಿಯಾಗಬೇಡಿ. 'ಕ್ಯಾರಿ ಆನ್ ಮರಾಠ' ಚಿತ್ರವು ಮಹಾರಾಷ್ಟ್ರದ ಹುಡುಗ ಮತ್ತು ಕರ್ನಾಟಕದ ಹುಡುಗಿಯ ನಡುವಿನ ಪ್ರೇಮ ಕಥಾವಸ್ತುವನ್ನು ಹೊಂದಿದ್ದು, ಹುಡುಗಿಯ ಅಂದರೆ ಹೀರೋಯಿನ್ ಭಾಗದ ದೃಶ್ಯಗಳು ಕನ್ನಡದಲ್ಲೇ ಇದ್ದು ಆ ದೃಶ್ಯದ ಸಂಭಾಷಣೆಯನ್ನು ಚೌಗಲೆಯವರು ಉತ್ತರ ಕರ್ನಾಟಕ ಶೈಲಿಯಲ್ಲಿ ಬರೆದಿದ್ದಾರೆ. ಚಿತ್ರದಲ್ಲಿ ಕನ್ನಡ ಸಂಭಾಷಣೆ ಶೇ. 30ಕ್ಕೂ ಹೆಚ್ಚಿರುತ್ತದೆ ಎಂಬುದು ಗಮನಾರ್ಹ ಸಂಗತಿ. ಈಗಾಗಲೇ ಸಂಜಯ್ ಲೋಂಡೆ ಎಂಬ ನಿರ್ದೇಶಕರ ನಿರ್ದೇಶನದಲ್ಲಿ ಈ ಚಿತ್ರದ ಚಿತ್ರೀಕರಣ ಆರಂಭವಾಗಿದ್ದು ಕನ್ನಡ ದೃಶ್ಯಗಳ ಭಾಗವನ್ನು ಹುಕ್ಕೇರಿ ಸುತ್ತಮುತ್ತ ಚಿತ್ರೀಕರಿಸಲಾಗುತ್ತದಂತೆ.

ಮತ್ತೊಂದು ಟೈಟಲ್ ಕಿರಿಕ್




ಮತ್ತೊಂದು ಟೈಟಲ್ ಜಗಳ ಕೋರ್ಟಿನ ಮೆಟ್ಟಿಲೇರುವ ಸಾಧ್ಯತೆ ಇದೆ. ಹೇಗೆ ಅಂತೀರಾ? ವಿವರಣೆ ಇಲ್ಲಿದೆ ನೋಡಿ: ಸುದೀಪ್ ನಟಿಸುತ್ತಿರುವ ಒಂದು ಚಿತ್ರಕ್ಕೆ 'ಲೀಡರ್' ಎಂದು ನಾಮಕರಣ ಮಾಡಲಾಗಿತ್ತು, ಈಗ 'ದಿ ಲೀಡರ್ ಶಿವರಾಜ್ ಕುಮಾರ್' ಎಂಬ ಟೈಟಲ್ ಅಡಿಯಲ್ಲಿ ಶಿವರಾಜ್‌ಕುಮಾರ್ ಅಭಿನಯಿಸುತ್ತಿರುವ ಹೊಸದೊಂದು ಚಿತ್ರ ಬರುತ್ತಿದೆ. ಈ ಕಾರಣದಿಂದ ಸುದೀಪ್ ನಟಿಸುತ್ತಿರುವ 'ಲೀಡರ್' ಚಿತ್ರದ ನಿರ್ಮಾಪಕ ರಘುರಾಜ್ ಬೇಸರಕ್ಕೊಳಗಾಗಿದ್ದು ತಾವು ಮೂರು ವರ್ಷದ ಹಿಂದೆಯೇ 'ಲೀಡರ್' ಟೈಟಲನ್ನು ಛೇಂಬರಿನಲ್ಲಿ ನೋಂದಾಯಿಸಿದ್ದು ಈಗ ಶಿವರಾಜ್‌ಕುಮಾರ್ ಅಭಿನಯದ ಚಿತ್ರಕ್ಕೆ ಹೆಚ್ಚೂ ಕಡಿಮೆ ಅಂಥದೇ ಟೈಟಲ್ ಅಂದರೆ 'ದಿ ಲೀಡರ್ ಶಿವರಾಜಕುಮಾರ್' ಅಂತ ಇಟ್ಟಿದ್ದಾರೆ. ಇದರಿಂದ ತಾವು ಸುದೀಪ್ ಹಾಕಿಕೊಂಡು ನಿರ್ಮಿಸಲು ಹೊರಟಿರುವ ಚಿತ್ರಕ್ಕೆ ಹೊಡೆತ ಬೀಳುತ್ತದೆ. ಅದಕ್ಕೆ ಈ ಕುರಿತು ಛೇಂಬರಿಗೆ ಒಂದು ಲೆಟರ್ ಕೊಡುವುದಾಗಿಯೂ, ಅಲ್ಲಿಯೂ ನ್ಯಾಯ ಸಿಗದಿದ್ದಾಗ ನ್ಯಾಯಾಲಯದ ಮೊರೆ ಹೋಗುವುದಾಗಿಯೂ ಹೇಳಿಕೊಂಡಿದ್ದಾರೆ. ಕಥೆಯ ಬಗ್ಗೆ ತಲೆ ಕೆಡಿಸಿಕೊಳ್ಳದ ನಮ್ಮ ಕನ್ನಡ ಚಿತ್ರರಂಗದ ಮಂದಿ ಟೈಟಲ್‌ಗಾಗಿ ಈ ಪರಿ ಜಗಳವಾಡುವುದು ನಿಜಕ್ಕೂ ಕಾಮಿಡಿ ಸಂಗತಿ



ಈ ದಿಲ್ ಹೇಳಿದೆ ನೀ ಬೇಕಂತೆ... ಅವಿನಾಶ್-ಶ್ರೀಶೃತಿ

ನಾಣಿಸುತೆಗೆ ತಾಳಿಭಾಗ

ತಮ್ಮನ್ನು ತಾವೇ 'ಕಲಾ ಸಾಮ್ರಾಟ್' ಎಂದು ಕರೆದುಕೊಳ್ಳುವ ರೀ... ನಿರ್ದೇಶಕ ಎಸ್.ನಾರಾಯಣ್ ಯಾರಿಗೆ ತಾನೇ ಗೊತ್ತಿಲ್ಲ ಹೇಳಿ. ಈ... ಒಂದಿಷ್ಟು ಕಾಮಿಡಿ ಚಿತ್ರಗಳ ಮೂಲಕ, ಒಂದಿಷ್ಟು ಫ್ಯಾಮಿಲಿ ಚಿ... ಮೂಲಕ ಸ್ವಲ್ಪ ಕಾಲ ಫೇಮಸ್ ಡೈರೆಕ್ಟರ್ ಅನ್ನಿಸಿಕೊಂಡಿದ್ದೂ ನಿ... ಗೊತ್ತಿರೋದೆ. ತಾವು ಸಾಧಿಸಿದ್ದು ಸಾಲದು ಅಂತ ತಮ್ಮ ಮಗನೂ ಹೀ... ಆಗಿ ಮಿಂಚಬೇಕು ಅಂತ ಆಸೆಪಟ್ಟು ಪಂಕಜ್ ಎಂಬ ತಮ್ಮ ಪುತ್ರ... ಹೀರೋ ಮಾಡಲು ಹೋಗಿ ವಿಫಲರಾದರು. ಪಾಪ ಆ ಹುಡುಗ ... ಭ್ರಮೆಗಳ ಬೆನ್ನತ್ತಿ ಓಡಾಡುತ್ತಲೇ ಇದ್ದಾನೆ. ಅದಿರಲಿ. ಈಗ ಎಸ್.ನಾರಾ... ಕೈಗೆತ್ತಿಕೊಂಡಿರುವ ಸೀರಿಯಸ್ ಕೆಲಸವೆಂದರೆ ಮಗಳಿಗೆ ಮದುವೆ ಮಾಡೋ...



ಈಗಾಗಲೇ ನಿಶ್ಚಿತಾರ್ಥ ಮುಗಿಸಿದ್ದಾರೆ. ಮೌಂಟ್ ಕಾರ್ಮೆಲ್ ಕಾಲೇ... ಎಂ.ಎ. ಓದಿ ಮುಗಿಸಿರುವ ವಿದ್ಯಾಳ ಕೈ ಹಿಡಿಯುತ್ತಿರುವ ಹುಡುಗ ಶ್ರೀನಿ... ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾನೆ ಎಂಬುದು ಸ್ವತಃ ನಾಣಿಯ ...

ಹರಿಪ್ರಿಯ ಜನಪ್ರಿಯವಾಗ...

'ರಾಂಬೋ' ಚಿತ್ರದ ನಂತರ ಪ್ರಮುಖ ಹೀರೋಗಳ ... ಸೇರಿಕೊಂಡಿರುವ ಶರಣ್ ಜಯತೀರ್ಥ ನಿರ್ದೇಶನದ 'ಬು... ಬಸ್ಯ' ಚಿತ್ರದಲ್ಲಿ ನಟಿಸುತ್ತಿರುವುದು ನಿಮಗೆಲ್ಲ ಗೊತ್ತಿದೆ... ಚಿತ್ರಕ್ಕೆ ಹೀರೋ ಸೆಲೆಕ್ಟ್ ಆದರೂ ಹೀರೋಯಿನ್ ... ಇನ್ನೂ ಸೆಲೆಕ್ಟ್ ಆಗಲಿಲ್ಲ ಎಂಬ ಮಾತು ಕೇಳಿಬರು... 'ಬುಲೆಟ್ ಬಸ್ಯ'ನಿಗೆ ಹರಿಪ್ರಿಯಾ ಜೋಡಿಯಾಗುವ ಮ... ಆ ಮಾತಿಗೆ ಈಗ ತೆರೆ ಬಿದ್ದಿದೆ. ಅಂದರೆ ಹರಿ... ಶರಣ್‌ಗೆ ಈಗ ಹೀರೋಯಿನ್ ಅಂತಾಯಿತು. ತನ್ನ ... ಆಕಾರ, ನಗೆ, ತುಟಿ, ಕೂದಲು, ಕಣ್ಣುಗಳ ಮ... ಒಂದಿಷ್ಟು ಗಮನ ಸೆಳೆದಿದ್ದ ಹರಿಪ್ರಿಯ ಅದೇಕೋ ಒಂ... ಚಿತ್ರಗಳಲ್ಲಿ ನಟಿಸಿ ಎತ್ತಲೋ ಮಾಯವಾಗಿಬಿಟ್ಟಿದ್ದರು. ಅಲ್ಲೆಲ್ಲೋ ತೆಲುಗಿನಲ್ಲೋ, ತಮಿಳಿನಲ್ಲೋ ನಟಿಸುತ್ತಿದ್ದಾರೆ ಅಂತೆಲ್ಲಾ ಸುದ್ದಿಗಳು ಕೇಳಿಬಂದವು. ಅರ್ಜುನ್ ಸರ್ಜಾ ಜೊತೆಯಲ್ಲೂ ಯಾವುದೋ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಅಂತಲೂ ಫೇಸ್ ಬುಕ್ಕಿನಲ್ಲಿ ಈಕೆ ಮತ್ತು ಅರ್ಜುನ್ ಇದ್ದ ಫೋಟೋಗಳು ಬಿತ್ತರವಾಗಿದ್ದವು. ಆಮೇಲೆ ಅದೇನಾಯಿತೋ ಗೊತ್ತಾಗಲಿಲ್ಲ. ಈ ಬಾರಿ ಯಾದರೂ ಈ ಹರಿಪ್ರಿಯಾ ಗೆದ್ದು ಜನಪ್ರಿಯವಾಗಲಿ ಎಂಬುದು ನಮ್ಮ ಹಾರೈಕೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com